# ಅಧ್ಯಾಯ 12

# ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು

ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರ, ಕಾರ್ಯ ನಿರ್ವಹಣೆ ಮತ್ತು ಜವಾಬ್ದಾರಿಗಳ ವಿಕೇಂದ್ರೀಕರಣ ಎಂದಿಗಿಂತಲೂ ಇಂದು ಹೆಚ್ಚು ಅನಿವಾರ್ಯವಾಗಿದೆ. ಸಾಮಾನ್ಯವಾಗಿ ಸರ್ಕಾರಗಳನ್ನು ಮತ್ತು ಅವುಗಳ ಕಾರ್ಯ ವಿಧಾನಗಳನ್ನು ರಾಷ್ಟ್ರೀಯ, ಪ್ರಾಂತೀಯ (ರಾಜ್ಯ) ಮತ್ತು ಸ್ಥಳೀಯವೆಂದು ಅವುಗಳು ಹೊಂದಿದ ಅಧಿಕಾರ, ಕಾರ್ಯ ವ್ಯಾಪ್ತಿಗಳ ಅನುಸಾರ ವಿಂಗಡಿಸಬಹುದಾಗಿದೆ. ಭೌಗೋಳಿಕವಾಗಿ ಸೀಮಿತವಾದ ಯಾವುದಾದರೂ ಹಳ್ಳಿ, ಊರು, ಪಟ್ಟಣ, ಸಮುದಾಯ ಅಥವಾ ನಗರದ ಆಡಳಿತವನ್ನು ಸ್ಥಳೀಯ ನಿವಾಸಿಗಳನ್ನೊಳಗೊಂಡ, ಶಾಸನಬದ್ಧ, ಸ್ವಯಮಾಧಿಕಾರ ಹೊಂದಿದ್ದ ಪ್ರಾತಿನಿಧಿಕ ಸಂಸ್ಥೆಯನ್ನು 'ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆ'ಯೆಂದು ಪರಿಗಣಿಸಲಾಗುವುದು. ಈ ಸಂಸ್ಥೆಗಳ ಮೂಲ ಉದ್ದೇಶ ಆಯಾ ಪ್ರದೇಶದ ನಾಗರಿಕರಿಗೆ ಅತ್ಯವಶ್ಯಕವಾದ ನಾಗರಿಕ ಸೌಲಭ್ಯಗಳನ್ನು ಒದಗಿಸಿಕೊಡುವುದು. ಈ ಕಾರ್ಯಗಳಲ್ಲಿ ತಾವು ಪಾಲುಗೊಳ್ಳುವರೆಂಬ ಭಾವನೆಯನ್ನು ನಾಗರಿಕರಲ್ಲಿ ಮೂಡಿಸುವುದು. ಗ್ರಾಮ ಮತ್ತು ನಗರವಾಸಿಗಳಿಂದ ಚುನಾಯಿತರಾದ ಪ್ರತಿನಿಧಿಗಳಿಗೆ ಪ್ರಾಥಮಿಕ ಹಂತದಲ್ಲಿ ರಾಜಕೀಯ ಮತ್ತು ಮುಂದಾಳತ್ವದಲ್ಲಿ ತರಬೇತಿ ನೀಡುವ, ಸಾಮಾಜಿಕ ಸೇವಾವಕಾಶಗಳನ್ನು ಇಂಥ ಸಂಸ್ಥೆಗಳು ಒದಗಿಸಿಕೊಡುತ್ತವೆ; ಇವು ನಾಗರಿಕರಿಗೆ ಆಡಳಿತ ತರಬೇತಿ ಕೇಂದ್ರಗಳೂ ಆಗಿವೆ.

ಕರ್ನಾಟಕವನ್ನೊಳಗೊಂಡಂತೆ ಪ್ರಾಚೀನ ಭಾರತದಲ್ಲಿ ನಿರಂಕುಶ ಪ್ರಭುತ್ವದಿಂದೊಡಗೂಡಿದ ಕೇಂದ್ರೀಕೃತ ಆಡಳಿತ ವ್ಯವಸ್ಥೆ ಇದ್ದ ಕಾಲದಲ್ಲಿಯೂ ಸ್ಥಳೀಯ ಸ್ವಯಮಾಡಳಿತಕ್ಕೆ ಸಾಕಷ್ಟು ಅವಕಾಶ ಇತ್ತು. ಹಳ್ಳಿಗಳು ಸೀಮಿತ ಸ್ವರೂಪದಲ್ಲಿ ಪುಟ್ಟ ಗಣ-ರಾಜ್ಯಗಳಂತೆ (ರಿಪಬ್ಲಿಕ್ಸ್) ಕಾರ್ಯ ನಿರ್ವಹಿಸುತ್ತಿದ್ದವು. ಪ್ರತಿಯೊಂದು ಹಳ್ಳಿ ಊರಿನ ಕುಟುಂಬಗಳ ಮುಖ್ಯಸ್ಥರ ಸಭೆಯಲ್ಲಿ ಸ್ಥಳೀಯ ಪ್ರಮುಖ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸಮಸ್ಯೆಗಳನ್ನು ಚರ್ಚಿಸಲಾಗುತ್ತಿತ್ತು. ಈ ಸಭೆಗಳು ಸಂಘ ಜೀವನದ, ಸಹಬಾಳ್ವೆಯ ಪ್ರತೀಕವಾಗಿದ್ದವು. ಇಂತಹ ಸಮಾವೇಶ ಅಥವಾ ಸಭೆಗಳ ಹಕ್ಕುಬಾಧ್ಯತೆಗಳನ್ನು ಸರ್ಕಾರ ಸಂರಕ್ಷಿಸುತ್ತಿತ್ತು. ಗ್ರಾಮೀಣ ಆಡಳಿತ ವ್ಯವಸ್ಥೆಯ ಈ ಸಂಪ್ರದಾಯ ಕರ್ನಾಟಕದಲ್ಲಿ ತುಂಬಾ ವ್ಯಾಪಕವಾಗಿತ್ತು ಮತ್ತು ಪರಿಣಾಮಕಾರಿಯಾಗಿತ್ತು.

ಸ್ಥಳೀಯ ಸಂಸ್ಥೆಗಳನ್ನು 'ಊರು' 'ಒಕ್ಕಲು' (ನಿವಾಸಿಗಳು), ಪ್ರಜೆ (ನಾಗರಿಕ), 'ಪ್ರಜಾ ಸಮುದಾಯ', 'ಊರ ಸಮುದಾಯ' 'ಸಮಸ್ತರು' (ಎಲ್ಲ ಜನರು) 'ಊರ ಹದಿನೆಂಟು ಜಾತಿ' ಎಂದು ಮುಂತಾಗಿ ಕರೆಯಲಾಗುತ್ತಿತ್ತು. 'ಊರೇಳ್ಪತ್ತು' (70), 'ಊರಎಳ್ಪದಿಂಬರು'(72) ಎಂದು ಸಂಖ್ಯಾವಾಚಕವಾಗಿ ಸದಸ್ಯರ ಸಂಖ್ಯೆಯನ್ನು ಸೂಚಿಸಿ ಅವುಗಳನ್ನು ಹೇಳುವುದಿತ್ತು. ಕೊಡಗಿನ 'ಅರ್ವತ್ತೊಕ್ಲು' ಎಂಬ ವೀರರಾಜಪೇಟೆ ತಾ॥ನ ಊರ ಹೆಸರೇ ಇಂಥ ಸಮಿತಿಯಿಂದಾಗಿ ಉಳಿದು ಬಂದಿದೆ ಇದೇ ರೀತಿ 'ನಲ್ವತ್ತೊಕ್ಲು' ಎಂಬ ಊರಿದೆ. ಕೊಡಗಿನಲ್ಲಿರುವ ಪ್ರಾಚೀನವಾದ ಮಿತಸಂಖ್ಯೆಯ ಶಾಸನಗಳಲ್ಲೂ ಇಂಥ ಸಂಸ್ಥೆಗಳ ಉಲ್ಲೇಖವಿದೆ. ಕ್ರಿ.ಶ. 1296 ಮುಳ್ಳೂರು ಶಾಸನದಲ್ಲಿ ಆ ಊರಿನ 'ಮುನ್ನೂರಾಳು

ನೆರೆದಿದ್ದು' ನಿರ್ಣಯ ಕೈಕೊಂಡ ಉಲ್ಲೇಖವಿದೆ (ಶಾಸನ ಕ್ರಮಾಂಕ 80). ಪಟ್ಟಣಗಳಲ್ಲಿ ವ್ಯಾಪಾರಸ್ಥರೇ ಹೆಚ್ಚಿದ್ದು ಅವರ ವ್ಯಾಪಾರೀ ಶ್ರೇಣಿಗಳೇ ಆ ಊರ ಪುರಸಭೆಗಳು; ಇವು ಗಳನ್ನು ನಖರ ಅಥವಾ ಹಲರು ಎನ್ನುತ್ತಿದ್ದರು. ಈಗ ಕಣ್ಮರೆಯಾದ ಊರು ತಾತಂಗಿ ಪಟ್ಟಣದ 'ನಖರಂ' ಎಂದು 12ನೇಯ ಶತಮಾನದ ಶಾಸನ ಹೇಳಿದರೆ (ಕ್ರ. 6) ನಂಜ ರಾಯಪಟ್ಟಣಕ್ಕೆ ಸಲ್ಲುವ ಬೆಮ್ಮತ್ತಿ, ಬೂತನಹಳ್ಳಿ, ಮಲಗನ ಕೆರೆಯ 'ಹಲರು' ಎಂಬ 1544ರ ಶಾಸನದ ಉಲ್ಲೇಖವಿದೆ (ಕ್ರ. 19).

ಗಂಗರ ಕಾಲದ ಬಿಳಿಯೂರು ಶಾಸನದಲ್ಲಿ (ಒಂಬತ್ತನೇಯ ಶತಮಾನ) ಬೆದ್ದೊಡೆಗೆರೆಯ 'ಎಳ್ವದಿಂಬರು' (72) ಮತ್ತು ಎಂಟು ಒಕ್ಕಲು ಎಂದು ಊರ ಸಮುದಾಯದ ಉಲ್ಲೇಖವಿದೆ (ನಂ. 96). ಹತ್ತನೇ ಶತಮಾನದಲ್ಲಿ ಅದೇ ಊರಿನ (ಈಗಿನ ಪೆಗೂರು) ಅದೇ ಸಂಖ್ಯೆಯ ಪೌರರ ಸಭೆಯ ಉಲ್ಲೇಖವಿದೆ (ನಂ. 98). ಚೌಡ್ಲು ಸ್ಥಳದ ನಖರದ ಉಲ್ಲೇಖವೂ 13ನೇಯ ಶತಮಾನದ ಶಾಸನದಲ್ಲಿ ಇದೆ (ನಂ. 6). ಈ ವ್ಯಾಪಾರೀ ನೆಲೆ ಈಗ ನಗರೂರು ಎಂದಾಗಿದೆ. ಅಗ್ರಹಾರದ ಹಳ್ಳಿಗಳಲ್ಲಿ 'ಮಹಾಜನರ' (ಬ್ರಾಹ್ಮಣ ವಿದ್ವಾಂಸರ ಕುಟುಂಬ ಗಳ ಮುಖ್ಯಸ್ಥರು) ಸಭೆಯೇ ಸ್ಥಳೀಯ ಸಂಸ್ಥೆಯಂತೆ ಕಾರ್ಯ ನಿರ್ವಹಿಸುತ್ತಿತ್ತು. ಬ್ರಾಹ್ಮಣ ಪಂಡಿತರು ವಾಸ ವಾಗಿದ್ದ ಆಯಾ ಸ್ಥಳದ ಎಲ್ಲ ಜಾತಿಗಳ, ಕುಟುಂಬಗಳ, ಮುಖ್ಯಸ್ಥರು ಆಗಾಗ ಸಭೆ ಸೇರಿ ಎಲ್ಲ ಸಾರ್ವಜನಿಕ ಹಿತಾ ಸಕ್ತಿಯ ವಿಷಯಗಳನ್ನು ಚರ್ಚಿಸುವುದು ಸರ್ವೇಸಾಮಾನ್ಯ ವಾಗಿತ್ತು.

ಇಂತಹ ಸ್ಥಳೀಯ ಸಂಸ್ಥೆಗಳು ದೇವಾಲಯ, ಸಭಾಂಗಣ, ಸಾರ್ವಜನಿಕ ಕಟ್ಟಡ, ಮುಂತಾದವುಗಳ ನಿರ್ಮಾಣ, ಕುಡಿಯುವ ನೀರಿನ ಪೂರೈಕೆ, ನೀರಾವರಿ ಸೌಲಭ್ಯ ಮತ್ತು ಸಂತ್ರಸ್ತರಿಗೆ ಪರಿಹಾರ ಒದಗಿಸುವುದು ಇನೇ ಮುಂತಾದ ಲೋಕೋಪಕಾರದ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿ ಕೊಳ್ಳುತ್ತಿದ್ದವು. ಕೆಲವು ಸ್ಥಳೀಯ ಸಂಸ್ಥೆಗಳು ಹಣವನ್ನು ಹಾಗೂ ಜಮೀನುಗಳನ್ನು ದತ್ತಿಯಾಗಿ ಸ್ವೀಕರಿಸಿ ಅದರಿಂದ ಬರುವಬಡ್ಡಿಯಲ್ಲಿ/ಉತ್ಪನ್ನದಲ್ಲಿ ದೇವಾಲಯಗಳಲ್ಲಿಅಗ್ಗಿಷ್ಟಿಕೆ, ನಂದಾದೀಪ ಮುಂತಾದವುಗಳನ್ನು ಏರ್ಪಡಿಸುತ್ತಿದ್ದರು. ಹಲವಾರು ಕಡೆ ಆಯಾ ಸ್ಥಳದ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ವೆಚ್ಚಕ್ಕಾಗಿ ಬಿಟ್ಟುಕೊಟ್ಟ ಭೂಮಿ ಮತ್ತು ಇತರ ಪುದುವಟ್ಟುಗಳನ್ನು ಗ್ರಾಮ ಸಭೆಗಳು ನೋಡಿಕೊಳ್ಳುತ್ತಿದ್ದವು.

ಗ್ರಾಮಸಭೆಗಳ ಬಹುವಿಧದ ಕಾರ್ಯಕಲಾಪಗಳಲ್ಲಿ ದೇವಾಲಯಗಳ ನಿರ್ಮಾಣ ಮತ್ತು ನಿರ್ವಹಣೆ, ಹಬ್ಬ ಹರಿ ದಿನ, ಜಾತ್ರೆಗಳ ಆಚರಣೆ, ಛತ್ರ ಮತ್ತು ಅರವಟ್ಟಿಗೆಗಳನ್ನು ನಡೆಸುವುದು, ಸುಂಕದ ಕಟ್ಟೆಗಳ ನಿರ್ವಹಣೆ, ಪ್ರಶಂಸನೀಯ ಸೇವೆಗೆ ಕೊಡುಗೆ ಸಲ್ಲಿಸುವುದು, ಊರ ಯೋಧರಿಗಾಗಿ ವೀರಗಲ್ಲು, ಮಾಸ್ತಿಕಲ್ಲುಗಳನ್ನು ಸ್ಥಾಪಿಸುವುದು ಮುಂತಾ ದವುಗಳು ಬಹು ಮುಖ್ಯವಾಗಿದ್ದವು. ಈ ಸಭೆಗಳಿಗೆ ನ್ಯಾಯಾಧಿಕರಣದ ಅಧಿಕಾರವೂ ಇತ್ತು. ತಪ್ಪಿತಸ್ಥರನ್ನು ಸಮಾಜದಿಂದ/ಊರಿನಿಂದ ಬಹಿಷ್ಕರಿಸುವ ಅಧಿಕಾರವೂ ಸಭೆಗೆ ಇತ್ತು. ಈ ಸಭೆಗಳು ವಿಜಯನಗರದ ಅರಸರ ಕಾಲದಲ್ಲಿ ಮತ್ತು ನಂತರವೂ ಉಚ್ಛ್ರಾಯ ಸ್ಥಿತಿಯಲ್ಲಿ ಇದ್ದವು.

ಕೊಡಗಿನಲ್ಲಿ ಬ್ರಿಟಿಷರ ನೇರ ಆಳ್ವಿಕೆಯ ನಂತರದ ಸುಮಾರು ಒಂದು ಶತಮಾನಕ್ಕಿಂತಲೂ ಹೆಚ್ಚಿನ ಅವಧಿಯಲ್ಲಿ (1834–1947) ಉಂಟಾದ ಅನೇಕ ಆಡಳಿತಾತ್ಮಕ ಸುಧಾರಣೆಗಳಲ್ಲಿ, ನಗರಾಡಳಿತ ಮತ್ತು ಗ್ರಾಮೀಣ ಪ್ರದೇಶ ಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ರಚನೆ ಮತ್ತು ಅವುಗಳು ದಕ್ಷತೆಯಿಂದ ಕಾರ್ಯ ನಿರ್ವಹಿಸುವಂತೆ ಸರ್ಕಾರ ವಹಿಸಿದ ಆಸಕ್ತಿ ಇವು ಪ್ರಮುಖವಾದವುಗಳು. ಸ್ವಾತಂತ್ರ್ಯ ನಂತರದ ಜನಪ್ರಿಯ ಸರ್ಕಾರಗಳು ಸ್ಥಳೀಯ ಸಂಸ್ಥೆಗಳು ಹೆಚ್ಚು ಸಕ್ರಿಯವಾಗಿ ಕಾರ್ಯ ನಿರ್ವಹಿಸುವಂತೆ ಅನೇಕ ಬದಲಾವಣೆಗಳನ್ನು, ಸುಧಾರಣೆಗಳನ್ನು ಇವುಗಳ ಅಂಗರಚನೆ ಮತ್ತು ಕಾರ್ಯವಿಧಾನಗಳಲ್ಲಿ ಅಳವಡಿಸಲು ಸಹಾಯಕವಾಗು ವಂತೆ ಸೂಕ್ತ ಕಾನೂನು ತಿದ್ದುಪಡಿಗಳನ್ನು ತಂದವು.

ಕೊಡಗಿನಲ್ಲಿ ಸ್ಥಳೀಯ ಸಂಸ್ಥೆಗಳ ಆಧುನಿಕ ಇತಿಹಾಸ 1870ರಲ್ಲಿ ಪ್ರಥಮ ಬಾರಿಗೆ ಮಡಿಕೇರಿ ಮತ್ತು ವೀರರಾಜ ಪೇಟೆಗಳಲ್ಲಿ ಅಧಿಕೃತ "ಮುನಿಸಿಪಲ್ ಕಮಿಟಿ"ಗಳನ್ನು ರಚಿ ಸುವ ಮೂಲಕ ಆರಂಭವಾಯಿತು. ಮುಂದಿನ ಮೂರು ದಶಕಗಳ ನಂತರ ಗ್ರಾಮೀಣ ಪ್ರದೇಶಕ್ಕೆ ಅನ್ವಯಿಸುವಂತೆ "ಲೋಕಲ್ ಫಂಡ್ ಬೋರ್ಡ್‌ಗಳನ್ನು" ರಚಿಸಲಾಯಿತು. ಪ್ರಾರಂಭದಲ್ಲಿ ಸ್ಥಳೀಯ ಸಮಿತಿಗಳು (ಮುನಿಸಿಪಲ್ ಕಮಿಟಿ ಗಳು) 9 ಜನ ಸದಸ್ಯರಿಂದ ಕೂಡಿದ್ದು, ಅವರಲ್ಲಿ ಮೂವರು ಸರ್ಕಾರದ ಪದನಿಮಿತ್ತ ಅಧಿಕಾರಿಗಳು ಮತ್ತು ಉಳಿದವರು ಪ್ರಭಾವಶಾಲಿಗಳಾದ ಸ್ಥಳೀಯ ಗಣ್ಯನಾಗರಿಕರಾಗಿದ್ದು, ಬೇರೆ ಬೇರೆ ಧಾರ್ಮಿಕ ಸಮುದಾಯಗಳನ್ನು ಪ್ರತಿನಿಧಿಸುತ್ತಿದ್ದರು. ಇವರನ್ನು ಸರ್ಕಾರದ ಮುಖ್ಯ ಕಮೀಷನರ್ ನೇಮಿಸು ತ್ತಿದ್ದರು. ಕೊಡಗಿನ ಸೂಪರಿಂಟೆಂಡೆಂಟರು, ಸ್ಥಳೀಯ

ಮುಖ್ಯ ಸೈನಿಕ ಅಧಿಕಾರಿ (ಆಫಿಸರ್ ಕಮಾಂಡಿಂಗ್ ಅಫ್ ಮಡಿಕೇರಿ) ಮತ್ತು ಮಹದೇವ ಪೇಟೆಯ ಸುಬೇದಾರರು ಪದ ನಿಮಿತ್ತ ಅಧಿಕಾರಿಗಳಾಗಿದ್ದರು. ಮೂರು ವರ್ಷದ ನಂತರ 1873ರಲ್ಲಿ, ಇತರ ಪಟ್ಟಣಗಳಾದ ಕುಶಾಲನಗರ, ಸೋಮ ವಾರಪೇಟೆ, ಮತ್ತು ಕೊಡಲಿಪೇಟೆಗಳಿಗೆ ಮುನಿಸಿಪಲ್ ಕಾನೂನನ್ನು ವಿಸ್ತರಿಸಿ ಸ್ಥಳೀಯ ಮುನಿಸಿಪಲ್ ಕಮಿಟಿ ಗಳನ್ನು ರಚಿಸಲಾಯಿತು. ಆದರೆ ಪ್ರಾರಂಭದಲ್ಲಿ ಈ ಕಮಿಟಿ ಗಳ ಕಾರ್ಯವ್ಯಾಪ್ತಿ ಕೇವಲ ನಗರ ನೈರ್ಮಲ್ಯ ಕಾಪಾಡು ವುದಕ್ಕೆ ಮಾತ್ರ ಸೀಮಿತವಾಗಿತ್ತು. ಈ ಸ್ಥಳೀಯ ಕಮಿಟಿಗಳು ಪ್ರಮುಖ ಸರ್ಕಾರಿ ಇಲಾಖೆಗಳ ಹಿರಿಯ ಅಧಿಕಾರಿಗಳನ್ನು ಮತ್ತು ಸ್ಥಳೀಯ ಪ್ರಭಾವಶಾಲಿ ಮುಖಂಡರನ್ನು ಒಳ ಗೊಂಡಿದ್ದವು ಮತ್ತು ಕಂದಾಯ ಇಲಾಖೆಯ ಹಿರಿಯ ಅಧಿ ಕಾರಿಗಳೇ ಸ್ಥಳೀಯ ಸಮಿತಿಗಳ ಅಧ್ಯಕ್ಷರಾಗಿದ್ದರು. 1877ರಲ್ಲಿ ಮಡಿಕೇರಿ ಮುನಿಸಿಪಲ್ ಕಮಿಟಿಯಲ್ಲಿ ಐವರು ಅಧಿಕಾರಿ ಸದಸ್ಯರು, ಎಂಟು ಜನ ಅಧಿಕಾರೇತರರು ಇದ್ದರೆ, ವೀರರಾಜಪೇಟೆ ಕಮಿಟಿಯು ಇಬ್ಬರು ಅಧಿಕಾರಿಗಳು ಮತ್ತು ಆರುಜನ ಅಧಿಕಾರೇತರ ಸದಸ್ಯರನ್ನು ಒಳಗೊಂಡಿತ್ತು. 1896ರ ಸುಮಾರಿಗೆ ಲೆ||ಕ|| ರಾಬರ್ಟ್‌ಸನ್ ಕೊಡಗಿನ ಮುಖ್ಯ ಕಮಿಷನರ್ ಆಗಿದ್ದಾಗ, ಸ್ಥಳೀಯ ಜನರು ನಗರಾಡಳಿತದಲ್ಲಿ ಹೆಚ್ಚು ಹೆಚ್ಚು ಆಸಕ್ತಿ ವಹಿಸುವಂತಾಯಿತು ಎಂದು ಹಳೆಯ ದಾಖಲಾತಿಗಳಿಂದ ತಿಳಿದು ಬರುವುದು. ಅಂದಿನ ಪುರಸಭೆಗಳ ಆದಾಯದ ಮೂಲಗಳಲ್ಲಿ ಮನೆ ಗಂದಾಯ, ದನಗಳ ದೊಡ್ಡಿಗಳಿಂದ ಬರುವ ಆದಾಯ, ಲೋಕಲ್ ಫಂಡ್‌ನಿಂದ ಬರುವ ವಂತಿಗೆ, ಮಾರುಕಟ್ಟೆ ಸುಂಕ ಮತ್ತು ದಂಡದ ಹಣ ಇವೇ ಮುಂತಾದವು ಪ್ರಮುಖವಾಗಿ ದ್ದವು. ಈ ಜಿಲ್ಲೆಯಲ್ಲಿ ಅಕ್ಟ್ರಾಯ್ ಸುಂಕವನ್ನು 1870ರಲ್ಲಿ ಪ್ರಥಮಬಾರಿಗೆ ಮಡಿಕೇರಿ ಪುರಸಭೆಯು ಜಾರಿಯಲ್ಲಿ ತಂದು ನಂತರ ಅದನ್ನು ಕೈಬಿಟ್ಟಂತೆ ತೋರುವುದು. ಇದರ ನಂತರದ ವರ್ಷಗಳಲ್ಲಿ (1873–74ರಲ್ಲಿ) ಮಡಿಕೇರಿ ಪುರಸಭೆಯು ಮನೆಗಂದಾಯ ಪದ್ಧತಿಯನ್ನು ಪ್ರಾರಂಭಿಸಿತು. ಅಂದು ಮಡಿ ಕೇರಿ ಪುರಸಭೆಯನ್ನು ಮಹದೇವಪೇಟೆ ಪುರಸಭೆ ಎಂದು ಕರೆಯುತ್ತಿದ್ದರು. ಮನೆಗಂದಾಯವನ್ನು ಪ್ರಾರಂಭದಲ್ಲಿ ಆಸ್ತಿಯ ಮೌಲ್ಯಕ್ಕನುಗುಣವಾಗಿ ನಿರ್ಧರಿಸಲಾಗುತ್ತಿತ್ತು ಎಂದು ಇಂಪೀರಿಯಲ್ ಗ್ಯಾಸೆಟಿಯರ್‌ನಿಂದ ತಿಳಿದುಬರು ವುದು.

1873-74 ರಲ್ಲಿ ಮಡಿಕೇರಿ (ಅಂದಿನ ಮಹದೇವಪೇಟೆ) ಪುರಸಭೆಯು ಹೊಂದಿದ್ದ ಆದಾಯ ಹಾಗೂ ವೆಚ್ಚಗಳು ಕ್ರಮ ವಾಗಿ ರೂ. 4,683 ಮತ್ತು ರೂ. 3,556 ಆಗಿದ್ದವು. ಅದರಂತೆ ಸದರಿ ವರ್ಷದಲ್ಲಿ ವೀರರಾಜಪೇಟೆ (ಅಂದಿನ ವೀರ ರಾಜೇಂದ್ರಪೇಟೆ) ಪುರಸಭೆ ಹೊಂದಿದ್ದ ಆದಾಯ ವೆಚ್ಚಗಳು ಕ್ರಮವಾಗಿ ರೂ. 2,908 ಮತ್ತು ರೂ. 1,689 ಎಂದು ತಿಳಿದು ಬರುವುದು. ಬೆಳೆಯುತ್ತಿರುವ ನಗರಗಳಿಗೆ ಸುರಕ್ಷಿತ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವ ವೆಚ್ಚವನ್ನು ಭರಿಸುವ ಉದ್ದೇಶದಿಂದ ಈ ಜಿಲ್ಲೆಯ ನಗರ ಸಭೆಗಳು ತಮ್ಮ ಆದಾಯದಲ್ಲಿ ಹೆಚ್ಚಿನ ಭಾಗವನ್ನು ಸಂಗ್ರಹವಾಗಿ ಇಡು ತ್ತಿದ್ದವು ಎಂಬುದು ಹಳೆಯ ದಾಖಲೆಗಳಿಂದ ತಿಳಿದು ಬರುವುದು.

1907 ರಲ್ಲಿ ಪ್ರಪ್ರಥಮವಾಗಿ ಕೊಡಗು ಮುನಿಸಿಪಾಲಿಟಿಗೆ ಕಾನೂನು ಮತ್ತು ನಿಯಮಾವಳಿಗಳನ್ನು ರಚಿಸಲಾಯಿತು. ಇದರಿಂದ ಪುರಸಭೆಗಳು ತಮ್ಮದೇ ಆದ ಪ್ರತ್ಯೇಕ ಕಾನೂನು ಮತ್ತು ನಿಯಮಾವಳಿಗಳನ್ನು ಹೊಂದಿ ಹೆಚ್ಚು ಸಕ್ರಿಯವಾಗಿ ಕೆಲಸ ನಿರ್ವಹಿಸಲು ಸಹಾಯಕವಾಯಿತು. ಅಲ್ಲದೇ ಪುರಸಭೆ ಗಳು ತಮ್ಮ ಆದಾಯ ಮೂಲಗಳನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾಯಿತು. ಕೊಡಗಿನಲ್ಲಿ 1916ರ ಪೂರ್ವದಲ್ಲಿ ಪುರಸಭೆಗಳ ಆಡಳಿತವು ಸರ್ಕಾರದಿಂದ ನೇಮಿಸಲ್ಪಟ್ಟ ಸದಸ್ಯ ರಿಂದ ಅಂದರೆ ಜಿಲ್ಲಾ ಮ್ಯಾಜಿಸ್ಟ್ರೇಟರು, ಸ್ಥಳೀಯ ಸುಬೇದಾರ ಮತ್ತು ಪಾರುಪತ್ಯೆಗಾರ ಮುಂತಾದವರಿಂದ ನಡೆಸಲ್ಪಡುತ್ತಿತ್ತು. 1916 ರಲ್ಲಿ ಸ್ಥಳೀಯ ಪುರಸಭೆಗಳಿಗೆ ಚುನಾಯಿತ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಅಧಿಕಾರ ವನ್ನು ಕೊಡಗಿನ ಮುಖ್ಯ ಕಮಿಷನರ್ ನೀಡಿದರು. ಮಡಿಕೇರಿ ಮತ್ತು ವೀರರಾಜಪೇಟೆ ಪುರಸಭೆಗಳು ಮೊದಲಿಗೆ ಈ ಅಧಿಕಾರವನ್ನು ಪಡೆದವು. ಬ್ರಿಟಿಷ್ ಸರ್ಕಾರ 1924 ರಲ್ಲಿ ಕೊಡಗಿಗೆ ವಿಶಿಷ್ಟ ಸ್ಥಾನಮಾನ ನೀಡಿ 20 ಸದಸ್ಯರ ಸಂಖ್ಯಾ ಬಲವುಳ್ಳ (ಲೆಜಿಸ್ಲೇಟಿವ್ ಕೌನ್ಸಿಲ್) ವಿಧಾನ ಪರಿಷತ್ತನ್ನು ನಿಯಮಿಸಿದ ನಂತರ ಸ್ಥಳೀಯ ಸಂಸ್ಥೆಗಳು, ಅದರಲ್ಲಿಯೂ ಪುರಸಭೆಗಳು ಹೆಚ್ಚು ಸಂಖ್ಯೆಯಲ್ಲಿ ರಚನೆ ಗೊಂಡವು.

## ಪುರಸಭೆಗಳು

ಕೊಡಗಿನಲ್ಲಿ, ನಗರ ಪ್ರದೇಶಗಳಿಗೆ ಸೀಮಿತವಾದಂತೆ ಸ್ವಯಮಾಡಳಿತದ ಸ್ಥಳೀಯ ಸರ್ಕಾರಗಳು ಅಂದರೆ ಈಗಿನ ಪುರಸಭೆಗಳು ಪ್ರಯೋಗಾತ್ಮಕವಾಗಿ 1870–73ರ ಅವಧಿ ಯಲ್ಲಿ 'ಮುನಿಸಿಪಲ್ ಕಮಿಟಿಗಳ' ರೂಪದಲ್ಲಿ ರಚನೆ ಗೊಂಡವು. ಇದಾದ ಸುಮಾರು ನಾಲ್ಕು ದಶಕಗಳ ನಂತರ 1907ರಲ್ಲಿ ಕೊಡಗಿಗೆ ಅನ್ವಯವಾಗುವಂತೆ ಪ್ರಪ್ರಥಮವಾಗಿ

ಕೊಡಗು ಮುನಿಸಿಪಲ್ ವಿನಿಯಮಗಳನ್ನು (ಕೂರ್ಗ್ ಮುನಿಸಿಪಲ್ ರೆಗ್ಯುಲೇಷನ್ II) ಜಾರಿಗೆ ತರಲಾಯಿತು. ಇದರಿಂದ ಈ ಮೊದಲಿನ ಪುರಸಭೆಗಳು ಹೆಚ್ಚು ಹೆಚ್ಚು ಸಂಪನ್ಮೂಲಗಳನ್ನು ರೂಢಿಸಿಕೊಂಡು ನಾಗರಿಕರ ಮೂಲ ಭೂತ ಅವಶ್ಯಕತೆಗಳನ್ನು ಪೂರೈಸುವಲ್ಲಿ ಹೆಚ್ಚು ಸಕ್ರಿಯ ವಾಗಲು ಸಹಾಯಕವಾಯಿತು. ಕೊಡಗಿನ ಇತರೇ ಪಟ್ಟಣ ಗಳಾದ ಕುಶಾಲನಗರ, ಸೋಮವಾರಪೇಟೆ, ಕೊಡ್ಲಿಪೇಟೆ ಗಳಿಗೆ ಮುನಿಸಿಪಲ್ ನಿಯಮಾವಳಿಗಳನ್ನು ಅನ್ವಯಿಸಲಾ ಯಿತು. ಜಿಲ್ಲೆಯ ಇತರೇ ಪ್ರಮುಖ ಚಿಕ್ಕ ಚಿಕ್ಕ ಪಟ್ಟಣ ಗಳ ನಾಗರಿಕ ಅವಶ್ಯಕತೆಗಳನ್ನು ಪೂರೈಸಲು ಸಹಾಯಕ ವಾಗುವಂತೆ, ಮತ್ತು ಆಯಾಪ್ರದೇಶಗಳು ಶೀಘ್ರ ಗತಿಯಲ್ಲಿ ಅಭಿವೃದ್ಧಿ ಹೊಂದಲು ಸಹಾಯಕವಾಗುವಂತೆ, 'ಅಧಿಸೂಚಿತ ಪ್ರದೇಶ ಅಭಿವೃದ್ಧಿ ಮಂಡಳಿ ಗಳು' (ನೋಟಿಫೈಡ್ ಏರಿಯಾ ಕಮಿಟಿ) ಕಾನೂನುಬದ್ಧ ವಾಗಿ ರಚನೆಗೊಂಡವು. 1907ರ ಮುನಿಸಿಪಲ್ ರೆಗ್ಯು ಲೇಷನ್ ಮತ್ತು ಅದರ ಅನ್ವಯ ರಚಿಸಲಾದ ನಿಯಮಾವಳಿ ಗಳ ಅನ್ವಯ ಅಧಿಸೂಚಿತ ಪ್ರದೇಶ ಸಮಿತಿಗಳನ್ನು ರಚಿಸಲಾ ಯಿತು. ಕಾಲಕ್ರಮೇಣ, ಜಿಲ್ಲೆಯಾದ್ಯಂತ 8 ಅಧಿಸೂಚಿತ ಪ್ರದೇಶ ಸಮಿತಿಗಳು ರಚನೆಗೊಂಡವು. ಈ ಪ್ರದೇಶಗಳನ್ನು ಅಧಿಸೂಚಿತ ಪ್ರದೇಶಗಳೆಂದು ಸರ್ಕಾರ ಘೋಷಿಸುವ ಪೂರ್ವ ದಲ್ಲಿ ಈ ಪ್ರದೇಶಗಳ ಆಡಳಿತವು ಜಿಲ್ಲಾ ಬೋರ್ಡಿನ ಅಧೀನಕ್ಕೆ ಒಳಪಟ್ಟಿತ್ತು. ಅಧಿಸೂಚಿತ ಪ್ರದೇಶಗಳಲ್ಲಿ ಕೊಡಲಿ ಪೇಟೆ (1890), ಕುಶಾಲನಗರ (1908), ಸೋಮವಾರ ಪೇಟೆ (1912), ಮತ್ತು ಹೆಬ್ಬಾಲೆ (1938)ಗಳಲ್ಲಿ ಸ್ಥಳೀಯ ಸಮಿತಿಗಳು ಸ್ವಾತಂತ್ರ್ಯ ಪೂರ್ವದ ಹಲವಾರು ದಶಕಗಳ ಮೊದಲೇ ರಚನೆಗೊಂಡು ಪುರಸಭೆಯ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದರೆ ಇನ್ನುಳಿದ ಸ್ಥಳಗಳಾದ ಪೊನ್ನಂಪೇಟೆ (1952), ಸುಂಟಿಕೊಪ್ಪ 1954), ಶನಿವಾರ ಸಂತೆ (1954) ಮತ್ತು ಗೋಣಿಕೊಪ್ಪಲುಗಳಲ್ಲಿ (1958) ಇತ್ತೀಚಿನ ದಶಕಗಳಲ್ಲಿ ಈ ಸಂಸ್ಥೆಗಳನ್ನು ರಚಿಸುವ ಮೂಲಕ ನಗರಾಡಳಿತ ವ್ಯವಸ್ಥೆಯನ್ನು ಜಾರಿಯಲ್ಲಿ ತರಲಾಯಿತು. ಅಧಿಸೂಚಿತ ಪ್ರದೇಶಗಳ ಕಾರ್ಯನಿರ್ವಾಹಕ ಸಮಿತಿಗಳಿಗೆ ಪ್ರಾರಂಭದಲ್ಲಿ ಸ್ಥಳೀಯ ತಾಲೂಕುಗಳ ತಹಶೀಲ್ದಾರರು ಅಧ್ಯಕ್ಷರಾಗಿದ್ದು ಸಮಿತಿಗಳು ಪದನಿಮಿತ್ತ ಅಧಿಕಾರಿ ಸದಸ್ಯ ರನ್ನು ಮತ್ತು ಅಧಿಕಾರೇತರ ನಾಮಕರಣಗೊಂಡ ಸದಸ್ಯ ರನ್ನು ಒಳಗೊಂಡಿರುತ್ತಿದ್ದವು. ಕಾಲಕ್ರಮೇಣ ಅಧಿಕಾರಿ ಮತ್ತು ನಾಮಕರಣಗೊಂಡ ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡಿ ಚುನಾಯಿತ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು.

ಕರ್ನಾಟಕ ರಾಜ್ಯ ಪುನರ್ರಚನೆಯ ನಂತರ (1956) ಪ್ರಥಮ ಬಾರಿಗೆ ಸಮಗ್ರ ರಾಜ್ಯಕ್ಕೆ ಅನ್ವಯವಾಗುವ ಏಕ ರೂಪದ, ವ್ಯಾಪಕವಾದ ಕರ್ನಾಟಕ ಪುರಸಭೆಗಳ ಕಾನೂನು 1964ನ್ನು 1965 ರಿಂದ ಜಾರಿಗೆ ತರಲಾಯಿತು. ಅದರ ಅನ್ವಯ ಹತ್ತು ಸಾವಿರಕ್ಕಿಂತ ಹೆಚ್ಚು ಮತ್ತು 50 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ಪುರಸಭೆ (ಮುನಿಸಿಪಲ್ ಕೌನ್ಸಿಲ್) ಗಳನ್ನು ರಚಿಸಲಾಯಿತು. 50 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯ ಪ್ರದೇಶಗಳಿಗೆ ನಗರಸಭೆ (ಸಿಟಿ ಮುನಿಸಿಪಲ್ ಕೌನ್ಸಿಲ್) ಗಳನ್ನು ಸ್ಥಾಪಿಸ ಲಾಗುತ್ತದೆ.

ಪುರಸಭೆಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಕನಿಷ್ಠ 15 ಮತ್ತು ಗರಿಷ್ಠ 27ರ ವರೆಗೆ ಚುನಾಯಿತ ಸದಸ್ಯರು ಇರುವರು. ಅವರೆಲ್ಲರೂ ವಯಸ್ಕ ಮತದಾನದ ಆಧಾರದ ಮೇಲೆ ಆಯ್ಕೆಯಾಗುವರು, ಪರಿಶಿಷ್ಟಜಾತಿ/ಪರಿಶಿಷ್ಟವರ್ಗ ಮತ್ತು ಮಹಿಳೆಯರಿಗೆ ಸ್ಥಾನಗಳನ್ನು ಕಾಯ್ದಿರಿಸಲಾಗು ವುದು. ಪ್ರತೀ ಒಂದು ನಗರ/ಪುರಸಭಾ ಮಂಡಳಿಗೆ, ಸದಸ್ಯ ರಿಂದ ಒಂದು ವರ್ಷದ ಅವಧಿಗೆ ಆಯ್ಕೆಯಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಇರುತ್ತಾರೆ. ಎಲ್ಲಾ ಪೌರ ವಿಷಯಗಳನ್ನು ಪರಿಶೀಲಿಸಲು ಪ್ರತೀ ಒಂದು ಮಂಡಳಿಗೆ 12 ಜನ ಸದಸ್ಯರ ಸ್ಥಾಯೀಸಮಿತಿ ಇರುತ್ತದೆ. ತಾತ್ಕಾಲಿಕವಾಗಿ ಇತರ ಯಾವುದಾದರೂ ಸಮಿತಿಗಳನ್ನು ಪುರಸಭೆಯು ರಚಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶ ಇರುವುದು. ಆಯುಕ್ತರು ಅಥವಾ ಮುಖ್ಯಾಧಿಕಾರಿ ಪುರಸಭೆಯ ಮುಖ್ಯ ಕಾರ್ಯನಿರ್ವಾಹಕ ರಾಗಿರುವರು. 1983 ರಲ್ಲಿ ರಾಜ್ಯ ಸರ್ಕಾರವು ಪ್ರಥಮ ಬಾರಿಗೆ ಪುರಸಭೆ ಕಾನೂನು 1964, ಮತ್ತು ಗ್ರಾಮ ಪಂಚಾಯತಿ ಜಿಲ್ಲಾ ಬೋರ್ಡ್ ಕಾನೂನು 1959ಕ್ಕೆ ವ್ಯಾಪಕ ತಿದ್ದುಪಡಿಗಳನ್ನು ತರುವ ಮೂಲಕ ಪ್ರೌಢ ಮತ ದಾನದ ಹಕ್ಕನ್ನು 21 ರಿಂದ 18ಕ್ಕೆ ಇಳಿಸಲಾಯಿತು. ಅಲ್ಲದೇ ಈ ಸಂಸ್ಥೆಗಳಲ್ಲಿ ಮಹಿಳೆಯ ಪ್ರಾತಿನಿಧ್ಯದ ಮೀಸಲು ಸ್ಥಾನಗಳನ್ನು ಗಮನೀಯವಾಗಿ ಹೆಚ್ಚಿಸಿತು. ಪುರಸಭೆ/ನಗರ ಪಾಲಿಕೆಗೆ ವಹಿಸಿದ ಕಾರ್ಯಗಳನ್ನು ಕಡ್ಡಾಯ ಮತ್ತು ವಿವೇಚನಾಧೀನವಾದವುಗಳು ಎಂದು ಎರಡು ಬಗೆಯಲ್ಲಿ ವಿಂಗಡಿಸಲಾಗಿದೆ. ಪುರಸಭೆಯ ಆರ್ಥಿಕ ಸ್ಥಿತಿಗತಿಗಳನ್ನು ಗಮನಿಸಿ ವಿವೇಚನಾಧೀನ ಕಾರ್ಯಕ್ರಮಗಳನ್ನು ಕೈಗೊಳ್ಳ ಬಹುದು. ಇವೇ ಅಲ್ಲದೇ ಅನೇಕ ಅನಿವಾರ್ಯ ಕಾರ್ಯ ಗಳನ್ನು ಪುರಸಭೆಯು ಪೂರೈಸಬೇಕಾಗುವುದು.

ಪುರಸಭೆಗೆ ಆದಾಯದ ಮುಖ್ಯ ಮೂಲಗಳೆಂದರೆ ಆಸ್ತಿ ತೆರಿಗೆ, ವಾಹನಗಳು ಮತ್ತು ಪ್ರಾಣಿಗಳ ಮೇಲಿನ ಸುಂಕ, ನೈರ್ಮಲ್ಯ ಉಪಕರ, ನೀರಿನ ದರ, ದೀಪದ ತೆರಿಗೆ, ವೃತ್ತಿ, ಕಸಬು, ಉದ್ಯೋಗ ಮತ್ತು ನೌಕರಿಯ ಮೇಲಿನ ತೆರಿಗೆ, ಅಂಗಡಿ ಮತ್ತು ಕಚೇರಿಗಳ ಮೇಲಿನ ತೆರಿಗೆ ಮುಂತಾದವು ಗಳು. ಆದಾಯದ ಒಂದು ಮುಖ್ಯ ಮೂಲವಾಗಿದ್ದ ನಗರ ಸುಂಕ (ಆಕ್ಟ್ರಾಯ್) ವನ್ನು 1979 ರಿಂದ ರದ್ದುಗೊಳಿಸ ಲಾಗಿದ್ದು ಆ ನಷ್ಟವನ್ನು ರಾಜ್ಯ ಸರ್ಕಾರವು ಪುರಸಭೆಗಳಿಗೆ ಪ್ರವೇಶ ತೆರಿಗೆ ಮೂಲಕ ತುಂಬಿಕೊಡುತ್ತಿದೆ. ಪುರಸಭೆ ಗಳನ್ನು ರಚಿಸುವುದಕ್ಕಾಗದ ಪ್ರದೇಶಗಳಲ್ಲಿ ಪೌರಸೌಲಭ್ಯ ಗಳನ್ನು ಒದಗಿಸುವುದಕ್ಕಾಗಿ ಸರ್ಕಾರದ ಅಧಿಸೂಚನೆಯ ಮೂಲಕ ಅಧಿಸೂಚಿತ ಪ್ರದೇಶ ಸಮಿತಿಯನ್ನು ರಚಿಸಲು 1964ರ ಕಾನೂನಿನಲ್ಲಿ ಅವಕಾಶ ಇರುವುದು. ಕೊಡಗು ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ 1964ರ ಕಾನೂನಿಗೆ ಪೂರ್ವದಲ್ಲಿಯೇ, ಮಡಿಕೇರಿ ಮತ್ತು ವೀರರಾಜಪೇಟೆಯನ್ನು ಹೊರತುಪಡಿಸಿ ಉಳಿದ ಎಂಟು ಚಿಕ್ಕ ಪಟ್ಟಣ ಪ್ರದೇಶಗಳಿಗೆ ಅಧಿಸೂಚಿತ ಪ್ರದೇಶ ಸಮಿತಿಗಳನ್ನು ಬಹು ಹಿಂದಿನಿಂದಲೇ ಸ್ಥಾಪಿಸಲಾಗಿತ್ತು. ಅ.ಸೂ.ಪ್ರ.ಸ. ಗಳಲ್ಲಿ ಕೊಡಲಿಪೇಟೆ (1890) ಅತ್ಯಂತ ಹಳೆಯದು ಮತ್ತು ಗೋಣಿಕೊಪ್ಪಲು (1958) ಇತ್ತೀಚಿನದು. 1964ರ ಕಾನೂನು ಜಾರಿಯಲ್ಲಿ ಬಂದನಂತರ ಹೆಬ್ಬಾಲೆಯನ್ನು ಹೊರತುಪಡಿಸಿ ಎಲ್ಲಾ ಏಳು ಅ.ಸೂ.ಪ್ರ. ಸಮಿತಿಗಳನ್ನು ಪುರಸಭೆಗಳನ್ನಾಗಿ ಪರಿವರ್ತಿಸ ಲಾಯಿತು. ಮುಂದೆ 20-1-1986 ರಿಂದ ಮಡಿಕೇರಿ ಯನ್ನು ಹೊರತುಪಡಿಸಿ ಉಳಿದ ಎಂಟು ಪುರಸಭೆಗಳನ್ನು ಅವುಗಳ ಚುನಾಯಿತ ಸದಸ್ಯರ ಅವಧಿ ಮುಗಿಯುವವರೆಗೆ ಮಧ್ಯಂತರ ಮಂಡಲ ಪಂಚಾಯತಿಗಳನ್ನಾಗಿ ಪುನರ್ ರಚಿಸಲಾಯಿತು. ಪುರಸಭೆಗಳ ಮೇಲೆ ಜಿಲ್ಲಾಧಿಕಾರಿಗಳ ನಿಯಂತ್ರಣ ಇದ್ದರೆ, ಮಂಡಲ ಪಂಚಾಯತಿಗಳು ಜಿಲ್ಲಾ ಪರಿಷತ್ತಿನ ನಿಯಂತ್ರಣಕ್ಕೆ ಒಳಪಟ್ಟಿರುವವು.

1992 ರಲ್ಲಿ ಇದ್ದಂತೆ ಜಿಲ್ಲೆಯ ಮಂಡಲ ಪಂಚಾಯತಿ ಗಳು : 1) ಸೋಮವಾರಪೇಟೆ 2) ಕುಶಾಲನಗರ 3) ಸುಂಟಿಕೊಪ್ಪ 4) ಶನಿವಾರಸಂತೆ 5) ಕೊಡಲಿಪೇಟೆ 6) ವೀರರಾಜಪೇಟೆ 7) ಪೊನ್ನಂಪೇಟೆ 8) ಗೋಣಿ ಕೊಪ್ಪಲು.

ಈ ಕೆಳಗಿನ ತಖ್ತೆಯಲ್ಲಿ ಜಿಲ್ಲೆಯ ಪುರಸಭೆಗಳು ಮತ್ತು ಅಧಿಸೂಚಿತ ಪ್ರದೇಶಗಳ 1960–61ರ ಆದಾಯ, ವೆಚ್ಚ ಮತ್ತು ಸದಸ್ಯರ ಸಂಖ್ಯೆಯನ್ನು ಸೂಚಿಸುವ ವಿವರಣೆ ನೀಡಲಾಗಿದೆ.

| ಪುರಸಭೆ/ ಅಧಿಸೂಚಿತ ಪ್ರದೇಶ | ಆದಾಯ ರೂ. | ವೆಚ್ಚ ರೂ. | ಸದಸ್ಯರ ಸಂಖ್ಯೆ | |
|---|---|---|---|---|
| | | | ಅಧಿಕಾರಿಗಳು | ಅಧಿಕಾರೇತರರು |
| ಮಡಿಕೇರಿ | 2,94,903 | 3,04,756 | 3 | 17 |
| ವೀರರಾಜಪೇಟೆ | 1,51,069 | 1,66,295 | 3 | 16 |
| ಸೋಮವಾರಪೇಟೆ | 73,702 | 66,804 | 4 | 8 |
| ಕೊಡ್ಲಿಪೇಟೆ | 12,615 | 19,574 | 4 | 7 |
| ಪೊನ್ನಂಪೇಟೆ | 19,286 | 17,068 | 4 | 9 |
| ಸುಂಟಿಕೊಪ್ಪ | 14,362 | 16,259 | 4 | 6 |
| ಕುಶಾಲನಗರ | 34,882 | 34,922 | 4 | 6 |
| ಹೆಬ್ಬಾಲೆ | 7,586 | 16,908 | 3 | 6 |
| ಶನಿವಾರಸಂತೆ | 6,615 | 20,100 | 3 | 6 |
| ಗೋಣಿಕೊಪ್ಪಲು | 55,820 | 1,28,233 | 4 | 9 |

**ಕೊಡಗಿನ ಪುರಸಭೆಗಳ ವೈಶಿಷ್ಟ್ಯ**

ರಾಜ್ಯ ಸರ್ಕಾರವು 1978–79ರಲ್ಲಿ ರಾಜ್ಯದ ಪುರಸಭೆಗಳನ್ನು ಕುರಿತು ನಡೆಸಿದ ಆರ್ಥಿಕ ಸಮೀಕ್ಷೆಯ ವಿಶ್ಲೇಷಣಾ ವರದಿಯಂತೆ, ಕೊಡಗು ಜಿಲ್ಲೆಯಲ್ಲಿನ ಪುರಸಭೆಗಳು ಹೊಂದಿದ್ದ ತಲಾ ಆದಾಯವು ರೂ. 126.09 ರಾಜ್ಯದಲ್ಲಿಯೇ ಅತೀ ಹೆಚ್ಚಿನದಾಗಿತ್ತು ಎಂದು ತಿಳಿದು ಬರುವುದು. ಕೇವಲ ಆಕ್ಟ್ರಾಯ್ ಮೂಲ ಒಂದರಿಂದಲೇ ಸಂದಾಯವಾದ ಆದಾಯವನ್ನು ಪರಿಗಣಿಸಿದಾಗಲೂ ಈ ಜಿಲ್ಲೆಯ ತಲಾ ಆದಾಯವು (ಆಕ್ಟ್ರಾಯ್ ಮೂಲದಿಂದ) ಅತೀ ಹೆಚ್ಚಿನದು, ಎಂದರೆ ರೂ. 32.12 ಎಂದು ಕಂಡುಬರುವುದು. ಅದರಂತೆ ಕೇವಲ ಮಾರುಕಟ್ಟೆ ಸುಂಕ ಮತ್ತು ಕಸಾಯಿಖಾನೆಗಳ ಆದಾಯಮೂಲವನ್ನು ಪರಿಗಣಿಸಿದಾಗಲೂ ರಾಜ್ಯದಲ್ಲಿಯೇ ಈ ಜಿಲ್ಲೆಯ ಪುರಸಭೆಗಳ ತಲಾ ಆದಾಯ ಅತೀ ಹೆಚ್ಚಿನದಾಗಿತ್ತು (ರೂ. 9.89). ಆದಾಯದಂತೆ ವೆಚ್ಚದಲ್ಲಿಯೂ (ರೂ. 126.10) ಈ ಜಿಲ್ಲೆಯ ಪುರಸಭೆಗಳು ರಾಜ್ಯದಲ್ಲಿಯೇ ಮೊದಲನೇಯ ಸ್ಥಾನದಲ್ಲಿ ಇದ್ದುದಾಗಿ ಸಮೀಕ್ಷೆಯಿಂದ ಕಂಡುಬರುವುದು. ವೆಚ್ಚದ ಒಂದು ಭಾಗವಾದ ಸಾರ್ವಜನಿಕ ದೀಪದ ವ್ಯವಸ್ಥೆ ಮತ್ತು ಕುಡಿಯುವ ನೀರು ವ್ಯವಸ್ಥೆ ಈ ಎರಡೇ ಬಾಬುಗಳನ್ನು ಪರಿಗಣಿಸಿದರೂ ಕೊಡಗು ಜಿಲ್ಲೆಯ ಪುರಸಭೆಗಳು ಮಾಡಿದ ತಲಾ ವೆಚ್ಚ ರೂ. 18.47 ರಾಜ್ಯದಲ್ಲಿಯೇ ಹೆಚ್ಚಾಗಿತ್ತು ಎಂದು ತಿಳಿದು ಬರುವುದು. 1980–81, 81–82 ಮತ್ತು 82-83ರಲ್ಲಿ ಜಿಲ್ಲೆಯಲ್ಲಿ ಪುರಸಭೆಗಳ ತಲಾ ಆದಾಯ ಮತ್ತು ವೆಚ್ಚಗಳು ಕ್ರಮವಾಗಿ ಈ ರೀತಿ ಇದ್ದವು: ಆವರಣದಲ್ಲಿಯ ಸಂಖ್ಯೆಯು ವೆಚ್ಚವನ್ನು ಸೂಚಿಸುವುದು. ರೂ. 73.60 (33.89), ರೂ. 105.04 (35.90), ರೂ. 60.81 (42.80). ಕೊಡಗು ಜಿಲ್ಲೆಯಲ್ಲಿನ ಪುರಸಭೆಗಳ ತಲಾ ಆದಾಯವು 1981–82ರಲ್ಲಿ ರೂ. 105.04 ಆಗಿದ್ದು ಇದು ರಾಜ್ಯದಲ್ಲಿಯೇ ಅತೀ ಹೆಚ್ಚಿನದಾಗಿತ್ತು.

ಈ ಕೆಳಗಿನ ಕೋಷ್ಟಕದಲ್ಲಿ 1982–83ರಲ್ಲಿ ಇದ್ದಂತೆ ಪುರಸಭೆಗಳ ಆದಾಯ, 1981ರಲ್ಲಿ ಇದ್ದಂತೆ ಜನಸಂಖ್ಯೆ, ವಿಸ್ತೀರ್ಣ, ಮನೆಗಳ ಸಂಖ್ಯೆ ಮತ್ತು ನೌಕರರ ಸಂಖ್ಯೆಯನ್ನು ಸೂಚಿಸಲಾಗಿದೆ.

| ಪುರಸಭೆ | ಜನಸಂಖ್ಯೆ | ಆದಾಯ (82-83) | ವಿಸ್ತೀರ್ಣ ಚ.ಕಿ.ಮೀ. | ವಸತಿ ಮನೆಗಳ ಸಂಖ್ಯೆ | ನೌಕರರ ಸಂಖ್ಯೆ |
|---|---|---|---|---|---|
| **ಮಡಿಕೇರಿ** | **24,724** | **7,44,785** | **14.48** | **4,976** | **86** |
| **ಕುಶಾಲನಗರ** | **6,937** | **14,70,013** | **3.26** | **1,402** | **30** |
| ಗೋಣಿಕೊಪ್ಪಲು | 5,794 | 4,92,269 | 3.26 | 1,063 | 13 |
| ಪೊನ್ನಂಪೇಟೆ | 4,367 | 1,03,911 | 2.33 | 948 | 6 |
| ಕೊಡ್ಲಿಪೇಟೆ | 2,254 | 39,775 | 0.42 | 407 | 11 |
| ಶನಿವಾರಸಂತೆ | 2,691 | 1,73,930 | 0.72 | 543 | 14 |
| ಸೋಮವಾರಪೇಟೆ | 6,937 | 8,35,832 | 1.33 | 1,453 | 38 |
| ಸುಂಟಿಕೊಪ್ಪ | 2,166 | 1,05,780 | 0.16 | 805 | 13 |
| ವೀರರಾಜಪೇಟೆ | 11,676 | 8,47,760 | 2.83 | 2,312 | 54 |

ಮುಂದಿನ ಪುಟಗಳಲ್ಲಿ ಮಡಿಕೇರಿ ಪುರಸಭೆ ಮತ್ತು ಸದ್ಯದ ಮಂಡಲ ಪಂಚಾಯತಿಗಳಾದ ವೀರರಾಜಪೇಟೆ, ಸೋಮವಾರಪೇಟೆಗಳ ಸವಿವರವಾದ ಸಮೀಕ್ಷೆಯನ್ನು ನೀಡಲಾಗಿದೆ. ಇನ್ನುಳಿದ ಮಂಡಲ ಪಂಚಾಯತಿಗಳ ಅವಶ್ಯಕವಾದ ಮಾಹಿತಿಯನ್ನು ಒಂದು ಕೋಷ್ಟಕದಲ್ಲಿ ಕೊಡಲಾಗಿದೆ.

**ಮಡಿಕೇರಿ ಪುರಸಭೆ**

1870ರಲ್ಲಿ ಪ್ರಪ್ರಥಮವಾಗಿ ಮಡಿಕೇರಿ ಮತ್ತು ವೀರ ರಾಜೇಂದ್ರಪೇಟೆಗಳಿಗೆ ಮುನಿಸಿಪಲ್ ಕಮಿಟಿಗಳನ್ನು ರಚಿಸುವ ಮೂಲಕ ಅಂದಿನ ಕೊಡಗು ರಾಜ್ಯದಲ್ಲಿ ನಗರಾಡಳಿತಕ್ಕೆ ಸಂಬಂಧಪಟ್ಟಂತೆ ಸ್ಥಳೀಯ ಸರ್ಕಾರ ವ್ಯವಸ್ಥೆಯನ್ನು ಪ್ರಾರಂಭಿಸಲಾಯಿತು ಎಂದು ಹಿಂದೆ ಹೇಳಿದೆ. ಪ್ರಾರಂಭದಲ್ಲಿ ಮಡಿಕೇರಿ ಪುರಸಭೆಯನ್ನು 'ಮಹದೇವಪೇಟೆ ಮುನಿಸಿಪಲ್ ಕಮಿಟಿ' ಎಂದು ಕರೆಯಲಾಗುತ್ತಿತ್ತು. 1870ರ ಮುನಿಸಿಪಲ್ ಕಮಿಟಿಯು 9 ಜನ ಸದಸ್ಯರನ್ನು ಒಳಗೊಂಡಿತ್ತು. ಅದರಲ್ಲಿ ಮೂರು ಮಂದಿ ಪದನಿಮಿತ್ತ ಅಧಿಕಾರಿ ಸದಸ್ಯರಾಗಿದ್ದರೆ (ಕೊಡಗಿನ ಸೂಪರಿಂಟೆಂಡೆಂಟರು, ಸೈನ್ಯದ ಮುಖ್ಯಸ್ಥರು ಮತ್ತು ಮಹದೇವಪೇಟೆಯ ಸುಬೇದಾರರು), ಉಳಿದ ಆರು ಮಂದಿ ನಗರದ ಪ್ರಭಾವಶಾಲಿ ಗಣ್ಯವ್ಯಕ್ತಿಗಳಾಗಿದ್ದರು. ಅಧಿಕಾರೇತರ ಸದಸ್ಯರು ಸರ್ಕಾರದಿಂದ ನಾಮಕರಣಗೊಂಡವರಾಗಿದ್ದರು. ಕೊಡಗಿನ ಮುಖ್ಯ ಕಮೀಷನರ್ ಕಮಿಟಿಯ ಅಧ್ಯಕ್ಷರಾಗಿದ್ದರು. ಪುರಸಭೆಯ ಆಡಳಿತ ಪ್ರಾರಂಭವಾದ ಹೊಸದರಲ್ಲಿ (1871) ನಗರದ ಜನಸಂಖ್ಯೆ 8,146 ಇದ್ದರೆ ಮನೆಗಳ ಸಂಖ್ಯೆ 1,637 ಆಗಿತ್ತು. 1817ರಲ್ಲಿ ಮಡಿಕೇರಿಯಲ್ಲಿದ್ದ ಮನೆಗಳ ಸಂಖ್ಯೆ 300 ಎಂದು ತಿಳಿದು ಬರುವುದು.

ಹಳೆಯ ದಾಖಲಾತಿಗಳ ಪ್ರಕಾರ 1870ರಲ್ಲಿಯೇ ಪ್ರಥಮ ಬಾರಿಗೆ ಆಕ್ಟ್ರಾಯ್ ಸುಂಕವನ್ನು ಮತ್ತು 1873–74ರಲ್ಲಿ ಮನೆಗಂದಾಯವನ್ನು ವಿಧಿಸುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಅಂದಿನ ಮಡಿಕೇರಿ ಪುರಸಭೆಯು ಮನೆಗಂದಾಯವನ್ನು ಆಸ್ತಿಯ ಮೌಲ್ಯಕ್ಕನುಗುಣವಾಗಿ ವಿಧಿಸುತ್ತಿತ್ತು. ಒಂದುನೂರು ರೂಪಾಯಿ ಮತ್ತು ಅದಕ್ಕೂ ಹೆಚ್ಚಿನ ಮೌಲ್ಯದ ಆಸ್ತಿಗೆ ಒಂದು ರೂಪಾಯಿ ತೆರಿಗೆ, 500 ರೂ. ಮತ್ತು ಅದಕ್ಕೂ ಹೆಚ್ಚಿನ ಮೌಲ್ಯದ ಆಸ್ತಿಗೆ ಎರಡು ರೂಪಾಯಿ, 1,000 ರೂ. ಮತ್ತು ಹೆಚ್ಚಿನ ಮೌಲ್ಯದ ಆಸ್ತಿಗೆ ಐದು ರೂಪಾಯಿ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಒಂದು ನೂರು ರೂಪಾಯಿಗಿಂತ ಕಡಿಮೆ ಮೌಲ್ಯದ ಆಸ್ತಿಗೆ ಯಾವುದೇ ತೆರಿಗೆ ಇರಲಿಲ್ಲ.

1907ರಲ್ಲಿ, ಕೊಡಗು ಮುನಿಸಿಪಲ್ ನಿಯಮಾವಳಿ–1907 IIರ ಅನ್ವಯ, ಮುನಿಸಿಪಲ್ ಕಮಿಟಿಯು ಶಾಸನಬದ್ಧ ಪುರಸಭೆಯಾಗಿ 16 ಜನ ಸದಸ್ಯರನ್ನೊಳಗೊಂಡು ಪುನರ್‌ರಚಿಸಲಾಯಿತು. ಈ 16 ಸದಸ್ಯರಲ್ಲಿ ಬೇರೆ ಬೇರೆ ಸಮುದಾಯಗಳ (ಧಾರ್ಮಿಕ ಸಂಗಡಗಳು ಸೇರಿದಂತೆ) ಪ್ರತಿನಿಧಿಗಳು ಇದ್ದರು. ಇವರೆಂದರೆ, ಯುರೋಪಿಯನ್ನರು ಕ್ರಿಶ್ಚಿಯನ್ನರು ಮುಂತಾದ ಸಂಗಡದಿಂದ ಒಬ್ಬ ಪ್ರತಿನಿಧಿ, ಕೊಡವರಿಂದ ಮೂರು ಸದಸ್ಯರು, ಮುಸ್ಲಿಮ್ ಮತ್ತು ಹಿಂದು ಮತದವರಿಂದ ಕ್ರಮವಾಗಿ ಎರಡು ಮತ್ತು ಆರು ಸದಸ್ಯರು ಹಾಗೂ ನಾಲ್ವರು ನಾಮಕರಣಗೊಂಡ ಅಧಿಕಾರಿಗಳು. ಇವರಲ್ಲಿ ಮಡಿಕೇರಿ ಉಪವಿಭಾಗದ ಲೋಕೋಪಯೋಗಿ ಇಲಾಖೆಯ ಅಧಿಕಾರಿ, ಶಿಕ್ಷಣ ಇಲಾಖೆಯ ಅಧಿಕಾರಿ, ಹಿರಿಯ ಆರೋಗ್ಯಾಧಿಕಾರಿ ಮತ್ತು ಮಡಿಕೇರಿಯ ಸುಬೇದಾರ ಇವರುಗಳಿದ್ದರು. ಪುರಸಭೆಯ ಅಧಿಕಾರಾವಧಿಯು ಮೂರು ವರ್ಷದ್ದಾಗಿತ್ತು. ಪುರಸಭೆಯಲ್ಲಿ ಬೇರೆ ಬೇರೆ ಸಮುದಾಯಗಳನ್ನು ಪ್ರತಿನಿಧಿಸುತ್ತಿದ್ದ ಸದಸ್ಯರು ಆಯಾ ಸಮುದಾಯದ ಮತದಾರರಿಂದ ಆಯ್ಕೆಯಾಗುತ್ತಿದ್ದರು. 1961ರಲ್ಲಿ ಮುಖ್ಯ ಕಮೀಷನರ ಆಜ್ಞೆಯ ಪ್ರಕಾರ ಪುರಸಭೆಯಲ್ಲಿನ ಚುನಾಯಿತ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಅಲ್ಲದೆ, ಅಧಿಕಾರೇತರ ಸದಸ್ಯರು ಪುರಸಭೆಯ ಅಧ್ಯಕ್ಷರಾಗಿ ಚುನಾಯಿತರಾಗಲು ಅವಕಾಶ ಮಾಡಿಕೊಡಲಾಯಿತು. ಹಾಗೂ ಹಣಕಾಸಿನ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ಪುರಸಭೆಗೆ ಹೆಚ್ಚಿನ ಅಧಿಕಾರವನ್ನು ಕೊಡಲಾಯಿತು. ಹೆಚ್ಚಿನ ಅಧಿಕಾರದತ್ತವಾದ ಪುರಸಭೆಯು ಅದೇ ವರ್ಷ ವೃತ್ತಿ ತೆರಿಗೆ, ಸುಂಕದ ಕಟ್ಟೆಯ ತೆರಿಗೆ, ಸರ್ಕಾರೀ ಕಟ್ಟಡಗಳ ಮೇಲಿನ ತೆರಿಗೆ ಮುಂತಾದ ಹೊಸ ತೆರಿಗೆಗಳನ್ನು ವಿಧಿಸಲು ಆರಂಭಿಸಿತು. 1916ರಲ್ಲಿ ರಾ|| ಬ|| ಕೊಡಂದೇರ ಕುಟ್ಟಯ್ಯನವರು ಮಡಿಕೇರಿ ಪುರಸಭೆಯ ಮೊದಲನೇಯ ಚುನಾಯಿತ ಅಧ್ಯಕ್ಷರಾಗಿ ಆಯ್ಕೆಗೊಂಡರು.

1936ರಲ್ಲಿ ಮುಖ್ಯ ಕಮೀಷನರ್‌ರ ಆದೇಶದ ಪ್ರಕಾರ ಪುರಾಡಳಿತ ಪ್ರದೇಶವನ್ನು 12 ವಿಭಾಗಗಳಾಗಿ ವಿಂಗಡಿಸಿ ಪ್ರತಿನಿಧಿಗಳ ಸಂಖ್ಯೆಯನ್ನು 20ಕ್ಕೆ ಹೆಚ್ಚಿಸಲಾಯಿತು. ಅವರಲ್ಲಿ 16 ಜನ ಚುನಾಯಿತ ಪ್ರತಿನಿಧಿಗಳು, ಮೂವರು ಪದನಿಮಿತ್ತ ನಾಮಕರಣಗೊಂಡ ಸದಸ್ಯರು ಮತ್ತು ಒಬ್ಬ ಚುನಾಯಿತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳನ್ನು ಪ್ರತಿನಿಧಿಸುವ ಸದಸ್ಯರಿದ್ದರು. ಮುಂದೆ 1947ರಲ್ಲಿ ಪುನಃ ಆಕ್ಟ್ರಾಯ್ ಸುಂಕವನ್ನು ಜಾರಿಯಲ್ಲಿ ತಂದ ನಂತರ ಪುರಸಭೆಯ ಆದಾಯದಲ್ಲಿ ಗಣನೀಯವಾದ ಹೆಚ್ಚಳ ಉಂಟಾಗಿ ಹೆಚ್ಚು ಹೆಚ್ಚು ಅಭಿವೃದ್ಧಿಪರ ಚಟುವಟಿಕೆಗಳನ್ನು ಕೈಗೊಳ್ಳುವಲ್ಲಿ ಪುರಸಭೆಯು ಶಕ್ತವಾಯಿತು. 1940–41ರಲ್ಲಿ ರೂ. 63,225 ಇದ್ದ ಪುರಸಭೆಯ ಆದಾಯ 1947ರಲ್ಲಿ ರೂ. 1.75 ಲಕ್ಷಕ್ಕೆ ಹೆಚ್ಚಳಗೊಂಡಿತು. ಅದರಂತೆ ಪುರಸಭೆಯ ವೆಚ್ಚವೂ ಸಹ ರೂ. 37,600 ರಿಂದ ರೂ. 1.50 ಲಕ್ಷಕ್ಕೆ ಹೆಚ್ಚಳಗೊಂಡಿತು. 1952ರಲ್ಲಿ ಪ್ರಥಮ ಬಾರಿಗೆ ಪುರಸಭೆಗೆ ವಯಸ್ಕ

(21 ವರ್ಷ) ಮತದಾನ ಪದ್ಧತಿಯಂತೆ ಚುನಾವಣೆಗಳು ನಡೆದವು.

ಕೊಡಗು ಕರ್ನಾಟಕ ರಾಜ್ಯಕ್ಕೆ ಸೇರಿದ ನಂತರ ಕರ್ನಾಟಕ ಪುರಸಭೆಗಳ ಕಾನೂನು 1964ರ ಅನ್ವಯ ಪುರಸಭೆಯು 1969 ರಿಂದ ಹಲವಾರು ಬಾರಿ ಪುನರ್ರಚನೆಯಾಗಿದ್ದು, ಇತ್ತೀಚಿನ ಪುರಸಭಾ ಚುನಾವಣೆಗಳು ಮೇ 1990ರಲ್ಲಿ ನಡೆದು ಪುರಸಭೆಯು 15ಜನ ಪ್ರತಿನಿಧಿಗಳನ್ನೊಳಗೊಂಡಿದ್ದು ಅವರಲ್ಲಿ ನಾಲ್ಕು ಮೀಸಲು ಸ್ಥಾನಗಳಿರುವವು; ಮೂವರು ಮಹಿಳೆಯರು ಮತ್ತು ಒಬ್ಬ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರುಗಳು ಸೇರಿರುವರು.

1951ರಲ್ಲಿ ಮಡಿಕೇರಿಯಲ್ಲಿದ್ದ ಮನೆಗಳ ಸಂಖ್ಯೆ 1,420, ನಗರದ ವಿಸ್ತೀರ್ಣ 4.66 ಚ.ಕಿ.ಮೀ. ಆಗಿದ್ದರೆ ಜನಸಂಖ್ಯೆ 10,117 ಆಗಿತ್ತು. 1981ರಲ್ಲಿ ಪುರಸಭೆಯ ವಿಸ್ತೀರ್ಣ 8.91 ಚ.ಕಿ.ಮೀ. ಇದ್ದದ್ದು 1991ರಲ್ಲಿ 13.65 ಚ.ಕಿ.ಮೀ. ಆಯಿತು. ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಮನೆಗಳ ಸಂಖ್ಯೆ 1981ರಲ್ಲಿ 4,847. 1981 ಮತ್ತು 1991ರಲ್ಲಿ ಮಡಿಕೇರಿ ನಗರದ ಜನಸಂಖ್ಯೆ ಕ್ರಮವಾಗಿ 24,724 ಮತ್ತು 28,729 ಆಗಿತ್ತು. 1991ರಲ್ಲಿ ನಗರ ಪ್ರದೇಶದಲ್ಲಿ ಕಂದಾಯ ನಿಗದಿಪಡಿಸಲಾದ ಕಟ್ಟಡಗಳ ಸಂಖ್ಯೆ ಮತ್ತು ಖಾಲಿ ನಿವೇಶನಗಳ ಸಂಖ್ಯೆ ಕ್ರಮವಾಗಿ 3,170 ಮತ್ತು 583 ಎಂದು ವರದಿಯಾಗಿದೆ. ಇದಲ್ಲದೆ ನಗರದಲ್ಲಿರುವ ಸರ್ಕಾರಿ ಕಟ್ಟಡಗಳ ಸಂಖ್ಯೆ 93. 1991ನೇ ವರ್ಷದಲ್ಲಿ ತೆರಿಗೆ ಸಂದಾಯ ಮಾಡುವವರ ಸಂಖ್ಯೆ 3,567 ಮತ್ತು ಸರಾಸರಿ ತೆರಿಗೆಯ ಪ್ರಮಾಣ ಆಸ್ತಿ ಮೌಲ್ಯದ ಶೇ. 6.85 ಎಂದು ವರದಿಯಾಗಿದೆ. ನಗರವನ್ನು ಐದು ವಿಭಾಗ ಮತ್ತು 21 ಬ್ಲಾಕ್‌ಗಳಾಗಿ ವಿಂಗಡಿಸಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ನಗರದ ಬೆಳವಣಿಗೆಯು ತೀವ್ರ ಗತಿಯಲ್ಲಿ ಮುಂದುವರೆಯುತ್ತಿದ್ದು ಅನೇಕ ಬಡಾವಣೆಗಳು ಹೊಸದಾಗಿ ರಚನೆಗೊಂಡಿವೆ. ಮಡಿಕೇರಿ ಗೃಹನಿರ್ಮಾಣ ಸಹಕಾರ ಸಂಘ ಮತ್ತು ಇತರೇ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಗೃಹನಿರ್ಮಾಣ ಚಟುವಟಿಕೆಗಳಿಗೆ ಸಹಾಯಕವಾಗಿವೆ. 1982 ರಿಂದ ನಗರ ಯೋಜನಾ ಪ್ರಾಧಿಕಾರವು ಕಾರ್ಯಾರಂಭ ಮಾಡಿದ್ದು ನಗರದ ವ್ಯವಸ್ಥಿತ ಬೆಳವಣಿಗೆ ಸಹಾಯಕವಾಗಿದೆ.

1981–82ರಲ್ಲಿ ಪುರಸಭೆಯು ರೂ. 45,000 ವೆಚ್ಚದಿಂದ ಸುಮಾರು ಎಂಟು ಎಕರೆ ಜಾಗವನ್ನು ಖರೀದಿಸಿ ಅದನ್ನು ನಿವೇಶನಗಳನ್ನಾಗಿ ಅಭಿವೃದ್ಧಿ ಪಡಿಸಿದೆ. ಇದಕ್ಕೂ ಪೂರ್ವದಲ್ಲಿ, ಅಂದರೆ 1977ರಲ್ಲಿ ಸರ್ಕಾರವು ಬಡಾವಣೆಗಳ ಅಭಿವೃದ್ಧಿಗಾಗಿ ರೂ. 92,000 ಮಂಜೂರು ಮಾಡಿದ್ದು ಅದನ್ನು ಪುರಸಭೆಯು ಸಂಪೂರ್ಣವಾಗಿ ವಿನಿಯೋಗಿಸಿಕೊಂಡಿದೆ ಎಂದು ವರದಿಯಾಗಿದೆ. ನಗರ ಸೌಂದರ್ಯ ಮತ್ತು ಗೃಹ ಅಲಂಕರಣಕ್ಕೆ ಹೆಚ್ಚಿನ ಗಮನಕೊಡುವ ಇಲ್ಲಿಯ ನಿವಾಸಿಗಳು ತಮ್ಮ ಮನೆಯ ಮುಂದೆ ತುಂಬಾ ಚೆಲುವಾದ ವಿಶಿಷ್ಟವೆನಿಸುವ ಮರಗಿಡಗಳನ್ನು, ಹೂವುಗಳನ್ನು ಶ್ರದ್ಧೆಯಿಂದ ಬೆಳೆಸುವರು.

ನೀರು ಸರಬರಾಜು : ಸುರಕ್ಷಿತ ಕುಡಿಯುವ ನೀರಿನ ಯೋಜನೆಗಳನ್ನು ಕೈಗೊಳ್ಳುವ ಪೂರ್ವದಲ್ಲಿ ಮಡಿಕೇರಿಯೂ ಸೇರಿದಂತೆ ಕೊಡಗಿನಲ್ಲಿ ನಿಸರ್ಗ ನಿರ್ಮಿತ ಕೆರೆಗಳು ಮತ್ತು ಬಾವಿಗಳು ನೀರಿನ ಮೂಲವಾಗಿದ್ದವು. ಮಳೆಗಾಲದಲ್ಲಿ ಸಂಗ್ರಹಿಸಿದ ನೀರನ್ನು ಬೇಸಿಗೆಯಲ್ಲಿ ಉಪಯೋಗಿಸಲಾಗುತ್ತಿತ್ತು.

ಮಡಿಕೇರಿ ನಗರಕ್ಕೆ ಶುದ್ಧವಾದ ಕುಡಿಯುವ ನೀರನ್ನು ಪೂರೈಸುವ ಪ್ರಥಮ ಯೋಜನೆಯನ್ನು ಸುಮಾರು 1895 ರಷ್ಟು ಹಿಂದೆಯೇ ಪ್ರಾರಂಭಿಸಲಾಯಿತು. ಅದರ ಮುಖ್ಯ ರೂವಾರಿಗಳು ದಿ॥ ರಾ॥ ಬ॥ ಚೆಪ್ಪುಡಿರ ಸೋಮಯ್ಯನವರು. ಇವರು ತಮ್ಮ ತಂದೆಯವರ (ಸಿ. ಸುಬ್ಬಯ್ಯನವರು) ಸ್ಮರಣಾರ್ಥ ಮಡಿಕೇರಿಯ ಉತ್ತರ ದಿಕ್ಕಿನಲ್ಲಿ ಕೃತಕವಾದ ಜಲಾಶಯವನ್ನು (ಮಹದೇವಪೇಟೆ ಜಲಾಶಯ) ನಿರ್ಮಿಸುವ ಮೂಲಕ ಸುರಕ್ಷಿತವಾದ ನೀರು ಪೂರೈಸುವ ವ್ಯವಸ್ಥೆ ಮಾಡಿದರು. ಈ ಯೋಜನೆಯನ್ನು ಅಂದು ಸುಮಾರು 14,000 ಜನಸಂಖ್ಯೆಗೆ ಯೋಜಿಸಲಾಗಿತ್ತು. ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಬೆಳೆಯುತ್ತಿರುವ ನೀರಿನ ಅವಶ್ಯಕತೆಯನ್ನು ಪೂರೈಸಲು ಮುಂದೆ ಎರಡು ಹೊಸ ಜಲಾಶಯಗಳನ್ನು 'ಡಿಪೋ ಜಲಾಗಾರ' ಮತ್ತು 'ರೋಶನ್ ಆರಾ' ಜಲಾಗಾರಗಳನ್ನು ನಿರ್ಮಿಸಲಾಯಿತು. ಕಾಲಕ್ರಮೇಣ ಈ ಯೋಜನೆಯೂ ಸಹ ಬೆಳೆಯುತ್ತಿರುವ ನಗರದ ನೀರಿನ ಅವಶ್ಯಕತೆಯನ್ನು ಪೂರೈಸಲು ಅಸಮರ್ಪಕವೆಂದು ಕಂಡುಬಂದ ನಂತರ ಪುರಸಭೆಯು 1968ರಲ್ಲಿ ಬೃಹತ್ ಪ್ರಮಾಣದ 'ಮಡಿಕೇರಿ ಸುರಕ್ಷಿತ ಕುಡಿಯುವ ನೀರಿನ ಯೋಜನೆ'ಯನ್ನು ರೂಪಿಸಿತು. ಈ ಯೋಜನೆಯ ಅನ್ವಯ ನಗರದಿಂದ ಆರು ಕಿ.ಮಿ. ದೂರ ಇರುವ ಕೂಟು ಹೊಳೆಗೆ ಗಾಳೀಬೀಡಿನ ಹತ್ತಿರ ಜಲಾಶಯ ನಿರ್ಮಿಸಿ ಅಲ್ಲಿಂದ ನೀರನ್ನು ಪೂರೈಸಲಾಗುತ್ತಿದೆ. ಈ ಯೋಜನೆಯ ಮೊದಲನೇ ಹಂತವು 1963ರಲ್ಲಿ ಪ್ರಾರಂಭ

ವಾಗಿ 1968ರಲ್ಲಿ ಪೂರ್ಣಗೊಂಡಿತು ಎಂದು ವರದಿಯಾಗಿದೆ. ಈ ಯೋಜನೆಯ ವೆಚ್ಚವನ್ನು ಭರಿಸಲು ಸಹಾಯಕವಾಗು ವಂತೆ ಪುರಸಭೆಯು ತನ್ನ ಆದಾಯವನ್ನು ಹೆಚ್ಚುವರಿ ತೆರಿಗೆ ಗಳ ಮೂಲಕ ಹೆಚ್ಚಿಸಿಕೊಂಡರೂ ಸಂಪೂರ್ಣ ವೆಚ್ಚವನ್ನು ಭರಿಸಲಾಗದೆ ಸರ್ಕಾರದ ಸಹಾಯವನ್ನು ಯಾಚಿಸಿತು ಎಂದು ತಿಳಿದು ಬರುವುದು. ಮೊದಲನೇಯ ಹಂತದ ಯೋಜನಾ ವೆಚ್ಚ ಸುಮಾರು ರೂ. 20 ಲಕ್ಷ ಎಂದು ವರದಿ ತಿಳಿಸುವುದು. ಈಗ (1992) ಎರಡನೇಯ ಹಂತದ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯಸರ್ಕಾರ ರೂ. 2.04 ಕೋಟಿ ಮಂಜೂರು ಮಾಡಿದೆ ಎಂದು ವರದಿಯಾಗಿದೆ. ಕೂಟುಹೊಳೆ ಜಲಾಶಯದಿಂದ ಮಡಿಕೇರಿಗೆ ಪ್ರಸಕ್ತ ದಿನ ಒಂದಕ್ಕೆ ವಿವಿಧ ಸಾಮರ್ಥ್ಯದ 9 ಒವರ್ ಹೆಡ್ ಟ್ಯಾಂಕ್‌ಗಳಿಂದ ಸುಮಾರು 5.10 ಲಕ್ಷ ಗ್ಯಾಲನ್ ನೀರು ಪೂರೈಕೆಯಾಗುತ್ತಿದೆ. ಕೂಟು ಹೊಳೆಯ ದ್ವಿತೀಯ ಹಂತದ ಯೋಜನೆ ಕಾರ್ಯಗತವಾದ ಬಳಿಕ ನಗರಕ್ಕೆ ದಿನ ಒಂದಕ್ಕೆ ಸುಮಾರು 10 ಲಕ್ಷ ಗ್ಯಾಲನ್ ನೀರು ಪೂರೈಕೆಯಾಗುವ ಅಂದಾಜಿದೆ. ನೀರು ಪೂರೈಕೆ ಯೋಜನೆಗೆ 1972ರಲ್ಲಿ ಸರ್ಕಾರವು ರೂ. 15.19 ಲಕ್ಷ ಸಹಾಯ ಧನದ ರೂಪದಲ್ಲಿ ನೀಡಿದೆ. ಈಗ (1992), ಪ್ರತೀದಿನ ಪ್ರತೀ ವ್ಯಕ್ತಿಗೆ ಸರಬರಾಜಾಗುವ ನೀರಿನ ಪ್ರಮಾಣ ಸುಮಾರು 15 ಗ್ಯಾಲನ್ ಎಂದು ವರದಿಯಾಗಿದೆ. 1985ರಲ್ಲಿ ನಗರದಲ್ಲಿದ್ದ ಸಾರ್ವಜನಿಕ ಮತ್ತು ಖಾಸಗಿ ನಲ್ಲಿಗಳ ಸಂಖ್ಯೆ ಕ್ರಮವಾಗಿ 158 ಮತ್ತು 2,193 ಆಗಿದ್ದರೆ 1990ರಲ್ಲಿ ಈ ಸಂಖ್ಯೆ ಕ್ರಮವಾಗಿ 205 ಮತ್ತು 2,693 ಆಗಿತ್ತು. ಇದಲ್ಲದೇ ನಗರಾದ್ಯಂತ 36 ಕೊಳವೆ ಬಾವಿಗಳನ್ನು ಕೊರೆಸ ಲಾಗಿದೆ. ನೀರಿನ ತೆರಿಗೆಯ ರೂಪದಲ್ಲಿ ಪುರಸಭೆಗೆ ವಾರ್ಷಿಕ ರೂ. 4.16 ಲಕ್ಷ ಆದಾಯ ಇದ್ದರೆ ನೀರು ಪೂರೈಕೆ ಯೋಜನೆಯ ವಾರ್ಷಿಕ ನಿರ್ವಹಣಾ ವೆಚ್ಚ ರೂ. 14.40 ಲಕ್ಷ ಎಂದು ವರದಿಯಾಗಿದೆ.

ಸ್ವಾತಂತ್ರ್ಯಪೂರ್ವ ಮತ್ತು ನಂತರದ ಹಲವು ದಶಕಗಳ ವರೆಗೆ ಕೊಡಗು ಜಿಲ್ಲೆಯು ಮಡಿಕೇರಿಯನ್ನು ಒಳಗೊಂಡಂತೆ ಮಲೇರಿಯಾದ ತವರಾಗಿತ್ತು. ಈಗ ಹಿಂದಿನ ಸಾಂಕ್ರಾಮಿಕ ರೋಗಗಳ ಹಾವಳಿಯನ್ನು ಬಹುಮಟ್ಟಿಗೆ ನಿಯಂತ್ರಿಸಲಾಗಿದೆ. 1954 ರಿಂದ ಪುರಸಭೆಯು ಮಹದೇವಪೇಟೆಯಲ್ಲಿ ಹೊರ ರೋಗಿಗಳಿಗೆ ಒಂದು ಔಷಧಾಲಯವನ್ನು ನಡೆಸಿಕೊಂಡು ಬರುತ್ತಿದೆ. ನಗರದಲ್ಲಿ ಯಾವುದೇ ಒಳಚರಂಡಿ ಯೋಜನೆ ಯನ್ನು ಜಾರಿಗೊಳಿಸಿರುವುದಿಲ್ಲ. ಕೇವಲ ತೆರೆದ ಚರಂಡಿ ಗಳಿದ್ದು, ಅವುಗಳ ಒಟ್ಟು ಉದ್ದ 12,180 ಮೀಟರ್. ತಲೆಯ ಮೇಲೆ ಮಲ ಸಾಗಿಸುವ ಪದ್ಧತಿಯನ್ನು ರದ್ದು ಪಡಿಸಿ ಇಂಗು ಶೌಚಾಲಯಗಳನ್ನು ಬಳಸಲಾಗುತ್ತಿದೆ. ನಗರದ ನೈರ್ಮಲ್ಯವನ್ನು ಕಾಪಾಡಲು ಒಬ್ಬ ನೈರ್ಮಲ್ಯ ಸಹಾಯ ಕರು ಮತ್ತು ಅವರ ಅಧೀನದಲ್ಲಿ 43 ಪೌರ ಕಾರ್ಮಿಕರು ಇರುವರು.

**ಇತರೇ ಸೌಲಭ್ಯಗಳು :** ಈ ಹಿಂದೆ ನಾನಾ ಕಾರಣಗಳಿಂದ ಮಡಿಕೇರಿಯಲ್ಲಿ ನೆಲೆಸಿದ್ದ ಯುರೋಪಿಯನ್ನರಿಂದಾಗಿ ಮಡಿ ಕೇರಿ ಊರಿನ ವ್ಯಾಪ್ತಿಯಲ್ಲಿ ಚಿಕ್ಕದಾಗಿದ್ದರೂ ಸುಸಂಸ್ಕೃತ ನಾಗರಿಕ ಜೀವನದ ಅವಶ್ಯಕಗಳಾದ ಮನರಂಜನಾ ಕ್ಲಬ್, ಅಂಗಡಿ, ವಾಹನ, ಶಿಕ್ಷಣ, ವಾಚನಾಲಯ, ವೈದ್ಯಕೀಯ ನೆರವು, ಪೋಲೀಸ್ ಠಾಣೆ, ರೇಸ್‌ಕೋರ್ಸ್, ಈಜುಕೊಳ, ಮುಂತಾದ ಸೌಲಭ್ಯಗಳು ಇಂದಿಗೂ ಹಲವಾರು ಬದಲಾವಣೆ ಗಳೊಂದಿಗೆ ಮುಂದುವರೆಯುತ್ತಿವೆ. ಈ ಹಿಂದೆ ಕೇವಲ ಭಜನಾ ಮಂದಿರಗಳ ಆಶ್ರಯದಲ್ಲಿ ನಡೆಯುತ್ತಿದ್ದ ದಸರಾ ಉತ್ಸವಕ್ಕೆ ಸಾರ್ವಜನಿಕ ರಂಗದಲ್ಲಿ ವಿಶೇಷ ಸ್ಥಾನವನ್ನು ಕಲ್ಪಿ ಸುವಲ್ಲಿ ಮಡಿಕೇರಿ ಪುರಸಭೆ ವಿಶೇಷ ನೆರವು ನೀಡಿ ಪ್ರೋತ್ಸಾಹಿಸುತ್ತಿದೆ.

1992ರಲ್ಲಿ ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು ರಸ್ತೆಗಳ ಉದ್ದ ಸುಮಾರು 62.5 ಕಿ.ಮೀ. ಅದರಲ್ಲಿ 55 ಕಿ.ಮೀ. ಟಾರು ರಸ್ತೆ, 5 ಕಿ.ಮೀ. ಜಲ್ಲಿ ರಸ್ತೆ, ಉಳಿದದ್ದು ಮಣ್ಣು ರಸ್ತೆ. 1971ರ ಪೂರ್ವದಲ್ಲಿ ಪುರಸಭೆಯು ಮೂರು ಹಿರಿಯ ಪ್ರಾಥಮಿಕ ಶಾಲೆಗಳನ್ನು ನಡೆಸುತ್ತಿತ್ತು. ಪುರಸಭೆಯು ವಾರ್ಷಿಕ ಸುಮಾರು ರೂ. 25,000 ವೆಚ್ಚದಿಂದ ಒಂದು ಉದ್ಯಾನವನ್ನು ನಿರ್ವಹಿಸುತ್ತಿದೆ.

1940 ರಷ್ಟು ಪೂರ್ವದಲ್ಲಿಯೇ ಮಡಿಕೇರಿಗೆ ಮದ್ರಾಸ್ ಮೂಲದ ಕೊರ್ಗ್ ಇಲೆಕ್ಟ್ರಿಸಿಟಿ ಕಂಪನಿಯು ಡಿಸೆಲ್ ಯಂತ್ರದಿಂದ ವಿದ್ಯುತ್ತನ್ನು ಪೂರೈಸಲಾಗುತ್ತಿತ್ತು. 1979 ರಲ್ಲಿ ಮಡಿಕೇರಿ ಪುರಸಭೆಯ ವ್ಯಾಪ್ತಿಯಲ್ಲಿ ವಿವಿಧ ಬಗೆಯ ವಿದ್ಯುತ್ ಸಂಪರ್ಕಗಳು ಈ ರೀತಿ ಇದ್ದವು. ಗೃಹೋಪಯೋಗಿ (2,483), ಕೈಗಾರಿಕೆ (246), ವಾಣಿಜ್ಯ (679), ಬೀದಿ ದೀಪಗಳು (1,320) ಮತ್ತು ಇತರೆ ನಾಲ್ಕು. ಪ್ರಸಕ್ತ (1992) ನಗರದಲ್ಲಿ ಇರುವ ವಿವಿಧ ಬಗೆಯ ಬೀದಿ ದೀಪಗಳ ಸಂಖ್ಯೆ 1,081; ಅವುಗಳಲ್ಲಿ 34 ಸೋಡಿಯಂ ವೇಪರ್, 68 ಮರ್ಕ್ಯುರಿ, 810 ಟ್ಯೂಬ್‌ಲೈಟುಗಳು ಮತ್ತು 169 ಸಾಮಾನ್ಯ ದೀಪಗಳು. ಬೀದಿ ದೀಪಗಳ ವ್ಯವಸ್ಥೆಗೆ ಪುರಸಭೆ

90-91 ಮತ್ತು 89-90ರಲ್ಲಿ ಮಾಡಿದ ವೆಚ್ಚದ ಮೊತ್ತ ಕ್ರಮವಾಗಿ ರೂ. 3.12 ಲಕ್ಷ ಮತ್ತು ರೂ. 2.87 ಲಕ್ಷ ಆಗಿತ್ತು.

ಹಣಕಾಸು : ಕಳೆದ ಐದು ವರ್ಷಗಳಲ್ಲಿ ಪುರಸಭೆಯು (86-87 ರಿಂದ 90-91) ಸರ್ಕಾರದಿಂದ ಪಡೆದ ವಿವಿಧ ಅನುದಾನಗಳ ವಿವರ : ಆಕ್ಟ್ರಾಯ್ ಅನುದಾನ ರೂ. 93.42 ಲಕ್ಷ, ಅಭಿವೃದ್ಧಿ ಅನುದಾನ ರೂ. 2.50 ಲಕ್ಷ, ನೀರು ಸರಬರಾಜು ಸುಧಾರಣೆ ಅನುದಾನ ರೂ. 3 ಲಕ್ಷ ಮತ್ತು ನೈಸರ್ಗಿಕ ವಿಪತ್ತು ಅನುದಾನ ರೂ. 50,000. ಪುರಸಭೆಯ ಸಾಮಾನ್ಯ ಆದಾಯ ಮತ್ತು ಖರ್ಚುಗಳು 1990-91ರಲ್ಲಿ ಕ್ರಮವಾಗಿ ರೂ. 49.15 ಲಕ್ಷ ಮತ್ತು ರೂ. 48.10 ಲಕ್ಷ ಎಂದು ತಿಳಿದುಬರುವುದು. ಅದರ ಹಿಂದಿನ ವರ್ಷದ ಸಾಮಾನ್ಯ ಆದಾಯ ವೆಚ್ಚಗಳು ಕ್ರಮವಾಗಿ ರೂ. 48.27 ಲಕ್ಷ ಮತ್ತು ರೂ. 64.38 ಲಕ್ಷ ಎಂದು ವರದಿಯಾಗಿದೆ. ಆಕ್ಟ್ರಾಯ್ ರದ್ದಾಗುವ ಪೂರ್ವದ ಮೊದಲಿನ ಮೂರು ವರ್ಷಗಳಲ್ಲಿ ಆಕ್ಟ್ರಾಯ್ ಮೂಲದಿಂದ ಸಂದಾಯವಾದ ಆದಾಯ ಈ ರೀತಿ ಇತ್ತು : 1975-76 ರೂ. 5.25 ಲಕ್ಷ, 1976-77 ರೂ. 6.99 ಲಕ್ಷ ಹಾಗೂ 1977-78 ರೂ. 7.65 ಲಕ್ಷ. ಆಕ್ಟ್ರಾಯ್ ರದ್ದಾದನಂತರ ಪುರಸಭೆಗೆ ಸರ್ಕಾರದಿಂದ ದೊರೆತ ಆಕ್ಟ್ರಾಯ್ ಅನುದಾನ 1987-88, 88-89 ಮತ್ತು 89-90ರಲ್ಲಿ ಅನುಕ್ರಮವಾಗಿ ರೂ. 18.24 ಲಕ್ಷ, ರೂ. 20.52 ಲಕ್ಷ ಮತ್ತು ರೂ. 23.08 ಲಕ್ಷ ಎಂದು ವರದಿ ತಿಳಿಸುವುದು.

ಪ್ರತೀ ಪುರಸಭೆಯು ಕಾನೂನಿನ ನಿಯಮಾನುಸಾರ ತನ್ನ ಆದಾಯದ ಶೇ. 18ರಷ್ಟು ಮೊಬಲಗನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿವಿಧ ಅಭಿವೃದ್ಧಿ ಯೋಜನೆಗೆ ವ್ಯಯ ಮಾಡಬೇಕು. ಅದರ ಅನ್ವಯ ಪುರಸಭೆಯು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಾಲೋನಿಯಲ್ಲಿ ದೇವಾಲಯ ನಿರ್ಮಾಣ, ಪೌರ ಕಾರ್ಮಿಕರಿಗೆ ಸಾಮೂಹಿಕ ವಿಮೆ, ಕಂಬಳಿ ಮತ್ತು ಪಾದರಕ್ಷೆಗಳ ಪೂರೈಕೆ, ರಸ್ತೆ ಸೌಲಭ್ಯ, ವೈದ್ಯಕೀಯ ನೆರವು, ಶಾಲಾ ಮಕ್ಕಳಿಗೆ ಸಮವಸ್ತ್ರ, ಭಾಗ್ಯಜ್ಯೋತಿ, ಸಮಾಜ ಮಂದಿರಗಳ ನಿರ್ಮಾಣ ಮುಂತಾದ ವಿವಿಧ ಕಲ್ಯಾಣ ಕಾರ್ಯಗಳಿಗೆ ವ್ಯಯ ಮಾಡಿದೆ. 1987-88, 1988-89 ಹಾಗೂ 1989-90ರ ಸಾಲಿನಲ್ಲಿ ಪುರಸಭೆಯು ಶೇ. 18ರ ಮೀಸಲು ನಿಧಿಯಿಂದ ಮಾಡಿದ ವೆಚ್ಚ ಕ್ರಮವಾಗಿ ರೂ. 1.47, ಲಕ್ಷ, ರೂ. 1.54 ಲಕ್ಷ ಮತ್ತು ರೂ. 1.44 ಲಕ್ಷ ಎಂದು ವರದಿಯಾಗಿದೆ. 1990-91ರಲ್ಲಿ ಈ ಬಾಬಿನಲ್ಲಿ ಕಾಯ್ದಿರಿಸಿದ ಹಣ ರೂ. 1.30 ಲಕ್ಷ ಎಂದು ತಿಳಿದು ಬಂದಿದೆ. 1990-91ನೇ ಸಾಲಿನ ಆಡಳಿತ ವರದಿಯಂತೆ, ಪುರಸಭೆಗೆ ವಿವಿಧ ತೆರಿಗೆಗಳ ಮೂಲದಿಂದ ಸಂದಾಯವಾಗಬೇಕಾಗಿದ್ದ (ಬೇಡಿಕೆ) ಆದಾಯದಲ್ಲಿ, ಮನೆ ಕಂದಾಯ ರೂ. 12.14 ಲಕ್ಷ, ನೀರಿನ ಕಂದಾಯ ರೂ. 3.97 ಲಕ್ಷ, ಬಸ್ ನಿಲ್ದಾಣ ಶುಲ್ಕ ರೂ. 14,000, ಮಾರುಕಟ್ಟೆ ಸುಂಕ ರೂ. 47,900, ಕುರಿ, ಹಂದಿ, ಕೋಳಿಗಳ ಮಾಂಸದ ಮಾರುಕಟ್ಟೆಗಳಿಂದ ರೂ. 82,400, ಕಟ್ಟಡಗಳ ಬಾಡಿಗೆ ರೂಪದಲ್ಲಿ ರೂ. 5.07 ಲಕ್ಷ ಎಂದು ವರದಿ ತಿಳಿಸುವುದು.

1916ರಿಂದ 1953ರವರೆಗೆ ಪುರಸಭೆಯ ಕಚೇರಿಯು ಕೋಟೆಯ ಆವರಣದ ಒಂದು ಚಿಕ್ಕ ಕೊಠಡಿಯಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. 1954ರಲ್ಲಿ 'ಕೊರೊನೇಷನ್ ಗಾರ್ಡನ್' ಎಂದು ಪ್ರಸಿದ್ಧವಾದ ನಿವೇಶನವನ್ನು ಗೊರವಂಡ ನಂಜಪ್ಪನವರಿಂದ ಪುರಸಭೆಯು ದಾನವಾಗಿ ಪಡೆದು ತನ್ನದೇ ಆದ ಕಟ್ಟಡವನ್ನು (ಪುರಭವನ) ಸುಮಾರು ಎರಡು ಲಕ್ಷ ರೂ. ವೆಚ್ಚದಲ್ಲಿ ಸರ್ಕಾರದ ಸಹಾಯಧನವನ್ನೂ ಪಡೆದು ಕಟ್ಟಿಸಿತು. ಈ ವಿಶಾಲವಾದ ಕಟ್ಟಡಕ್ಕೆ ಕಚೇರಿಯನ್ನು ಸ್ಥಳಾಂತರಿಸಿತು. ತನ್ನ ಆದಾಯ ಮೂಲಗಳನ್ನು ಹೆಚ್ಚಿಸುವಲ್ಲಿ ಸಹಾಯಕವಾಗುವಂತೆ ಪುರಸಭೆಯು 1953ರಲ್ಲಿ ರೂ. 1.80 ಲಕ್ಷ ವೆಚ್ಚದಲ್ಲಿ ವಸತಿ ಗೃಹಗಳನ್ನು, 1989ರಲ್ಲಿ ರೂ. 14.60 ಲಕ್ಷ ವೆಚ್ಚದಲ್ಲಿ ಹೊಸಮಾರುಕಟ್ಟೆ ಸಂಕೀರ್ಣ ಮತ್ತು ಹೊಸ ವ್ಯಾಪಾರ ಮಳಿಗೆಗಳನ್ನು ನಿರ್ಮಾಣ ಮಾಡಿತು.

1989-90ರಲ್ಲಿ ಪುರಸಭೆಯು ತನ್ನ ಆದಾಯದಲ್ಲಿ ವಿವಿಧ ಬಾಬುಗಳಿಗೆ ಖರ್ಚು ಮಾಡಿದ ಶೇಕಡಾ ಪ್ರಮಾಣ ಈ ರೀತಿ ಇರುವುದು. ಜನಾರೋಗ್ಯ ಮತ್ತು ನೈರ್ಮಲ್ಯ (ಶೇ. 4), ಪುರಸಭೆಯು ಕೈಗೊಂಡ ಕಾಮಗಾರಿಗಳು (ಶೇ. 12), ನೀರು ಸರಬರಾಜು (ಶೇ. 15), ರಸ್ತೆ ಮತ್ತು ದೀಪಗಳ ನಿರ್ವಹಣೆ (ಶೇ. 20), ಚರಂಡಿ ಮತ್ತು ಸಾಂಕ್ರಾಮಿಕ ರೋಗ ನಿಯಂತ್ರಣ (ಶೇ. 10), ಸಿಬ್ಬಂದಿ ಪ್ರಭಾರ (ಶೇ. 25) ಮತ್ತು ಇತರೇ (ಶೇ. 14). ಇತ್ತೀಚಿನ ಹಲವು ವರ್ಷಗಳ ಪುರಸಭೆಯ ಆದಾಯ ವೆಚ್ಚಗಳು ಲಕ್ಷ ರೂ.ಗಳಲ್ಲಿ ಈ ಕೆಳಗಿನಂತೆ ಇರುವವು. ವೆಚ್ಚವನ್ನು ಆವರಣದಲ್ಲಿ ಸೂಚಿಸಲಾಗಿದೆ : 1975-76 : 10.55 (9.41); 1977-78 : 14.90 (13.55); 1983-84 : 35.68 (31.82); 1985-86 : 34.79 (29.34); 1987-88 : 46.56 (42.43); ಹಾಗೂ 1989-90 : 65.43 (65.22). ಪುರಸಭೆಯ ಶತಮಾನೋ

ತ್ಸವವು 1977–78ರಲ್ಲಿ ಆಚರಿಸಲ್ಪಟ್ಟಿತು. 1992ರಲ್ಲಿ ಪುರಸಭೆಯ ಒಟ್ಟು ನೌಕರರ ಸಂಖ್ಯೆ ಪೌರ ಕಾರ್ಮಿಕರೂ ಸೇರಿದಂತೆ 82 ಆಗಿದೆ.

**ಪುರಸಭೆ ವೀರರಾಜಪೇಟೆ**

ದೊಡ್ಡವೀರರಾಜೇಂದ್ರ ದೊರೆಯ ಹೆಸರಿನಲ್ಲಿ 1792ರಲ್ಲಿ ಕಟ್ಟಲಾದ ವೀರರಾಜಪೇಟೆಯ ನಗರಾಡಳಿತವು ಪ್ರಪ್ರಥಮವಾಗಿ 1870ರಲ್ಲಿ ಸ್ಥಳೀಯ 'ಮುನಿಸಿಪಲ್ ಕಮಿಟಿ'ಯನ್ನು ರಚಿಸುವ ಮೂಲಕ ಪ್ರಾರಂಭವಾಯಿತು. (ಅದೇ ವರ್ಷ ಮಡಿಕೇರಿಯ ಪುರಸಭೆಯೂ ಪ್ರಾರಂಭವಾಯಿತು). ಅಂದಿನ 'ಮುನಿಸಿಪಲ್ ಕಮಿಟಿಯು' ಒಂಬತ್ತು ಜನ ಸದಸ್ಯರನ್ನೊಳಗೊಂಡಿತ್ತು. ಅವರಲ್ಲಿ ಮೂವರು ಪದನಿಮಿತ್ತ ಸರ್ಕಾರಿ ಅಧಿಕಾರಿಗಳಾಗಿದ್ದರೆ ಉಳಿದ ಆರು ಜನರು ನಗರದ ವಿವಿಧ ಧಾರ್ಮಿಕ ಸಮುದಾಯಗಳನ್ನು ಪ್ರತಿನಿಧಿಸುವ ಪ್ರಭಾವಶಾಲಿ ಗಣ್ಯ ನಾಗರಿಕರಾಗಿದ್ದರು. ಪುರಸಭೆಯ ಪ್ರತಿನಿಧಿಗಳನ್ನು ಕೊಡಗಿನ ಮುಖ್ಯ ಕಮೀಷನರ್ ನಾಮಕರಣ ಮಾಡುತ್ತಿದ್ದರು. ಪದನಿಮಿತ್ತ ಸದಸ್ಯರಲ್ಲಿ, ಸಹಾಯಕ ಸೂಪರಿಂಟೆಂಡರು, ಸಹಾಯಕ ಇಂಜಿನಿಯರ್ ಮತ್ತು ಸ್ಥಳೀಯ ಸುಬೇದಾರರು ಸೇರಿರುತ್ತಿದ್ದರು. 1925 ರಿಂದ ಪುರಸಭೆಯು ಅಧ್ಯಕ್ಷರನ್ನು ಚುನಾಯಿತ ಅಧಿಕಾರೇತರ ಸಹ ಸದಸ್ಯರು ಆಯ್ಕೆ ಮಾಡುವ ಸೌಲಭ್ಯವನ್ನು ಒದಗಿಸಲಾಯಿತು. 1952ರಲ್ಲಿ ಪ್ರಥಮ ಬಾರಿಗೆ ಪುರಸಭೆಗೆ ಪ್ರೌಢ ವಯಸ್ಕ ಮತದಾನ ಪದ್ಧತಿಯಂತೆ ಚುನಾವಣೆಗಳು ನಡೆದವು. ಕೊಡಗು ಕರ್ನಾಟಕದಲ್ಲಿ ಸೇರ್ಪಡೆಯಾದ ನಂತರ ವೀರರಾಜಪೇಟೆಗೆ ಕರ್ನಾಟಕ ಪುರಸಭೆಗಳ ಕಾನೂನು 1964ರ ಅನ್ವಯ ಪುರಸಭೆಯ ಸ್ಥಾನಮಾನ ಲಭಿಸಿತು. ಹೊಸ ಕಾನೂನಿನ್ವಯ ಪುರಸಭೆಗೆ ಮೊದಲನೇಯ ಚುನಾವಣೆಯು 1967ರಲ್ಲಿ ನಡೆದು ಒಂದು ಮೀಸಲು ಸ್ಥಾನವೂ ಸೇರಿದಂತೆ ಪುರಸಮಿತಿಯು 18 ಜನ ಪ್ರತಿನಿಧಿಗಳನ್ನು ಒಳಗೊಂಡಿತ್ತು. 1964ರ ಕಾನೂನಿನ ಅನ್ವಯ ಇತ್ತೀಚಿನ ಚುನಾವಣೆಗಳು 1983ರಲ್ಲಿ ನಡೆದವು. ಕರ್ನಾಟಕ ಜಿಲ್ಲಾ ಪರಿಷತ್ತು, ತಾಲೂಕು ಪಂಚಾಯತ್ ಸಮಿತಿ, ಮಂಡಲ ಪಂಚಾಯತಿ, ಮತ್ತು ನ್ಯಾಯ ಪಂಚಾಯತಿಗಳ ಕಾನೂನು 1985ರ ಪ್ರಕಾರ ದಿನಾಂಕ 20–1–86 ರಿಂದ ಪುರಸಭೆಯು ಮಂಡಲ ಪಂಚಾಯತಿಯಾಗಿ ಪರಿವರ್ತಿಸಲ್ಪಟ್ಟಿದೆ. ಮಂಡಲ ಪಂಚಾಯತಿಯ ಕಾರ್ಯವ್ಯಾಪ್ತಿಗೆ ವೀರರಾಜಪೇಟೆಯಲ್ಲದೇ ಸುತ್ತಲಿನ ಕಂದಾಯ ಗ್ರಾಮಗಳಾದ ಬೇಟೋಳಿ, ಕುಕ್ಲೂರ್, ಮಗ್ಗುಲ ಮತ್ತು ಅಂಬಟ್ಟಿ ಸೇರಿವೆ. ಹೊಸ ಮಂಡಲ ಪಂಚಾಯತಿಗೆ 1990ರ ಏಪ್ರಿಲ್‌ನಲ್ಲಿ ಚುನಾವಣೆಗಳು ನಡೆದು ಅದು ಪುನರ್ರಚನೆಗೊಂಡಿತು. ಪ್ರಧಾನರು ಮತ್ತು ಉಪಪ್ರಧಾನರೂ ಸೇರಿದಂತೆ ಮಂಡಲ ಪಂಚಾಯತಿಯು 25 ಜನ ಚುನಾಯಿತ ಸದಸ್ಯರನ್ನು ಹೊಂದಿರುವುದು. ಅದರಲ್ಲಿ ಮೀಸಲು ಸ್ಥಾನಗಳು 6 ; ಅವರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಸದಸ್ಯರ ಸಂಖ್ಯೆ 5 ಮತ್ತು ಮಹಿಳೆಯರ ಸಂಖ್ಯೆ ಒಂದು.

1971 ರಿಂದ 1991ರ ವರೆಗೆ ಪುರಸಭೆ (ಮಂಡಲ)ಯ ವಿಸ್ತೀರ್ಣದಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ. ವಿಸ್ತೀರ್ಣ 5.18 ಚ.ಕಿ.ಮೀ. ಇದ್ದರೆ, ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಮನೆಗಳ ಸಂಖ್ಯೆ (ಕಂದಾಯ ಗ್ರಾಮಗಳನ್ನು ಹೊರತುಪಡಿಸಿ) 1971ರಲ್ಲಿ (428), 1981ರಲ್ಲಿ (915) ಮತ್ತು 1990ರಲ್ಲಿ 1,451 ಎಂದು ಪುರಸಭೆಯ ವರದಿ ತಿಳಿಸುವುದು. ಮನೆಗಳ ಸಂಖ್ಯೆಯಷ್ಟೇ ತೆರಿಗೆದಾರರು ಇದ್ದು ಸರಾಸರಿ ಕರಭಾರ ವ್ಯಕ್ತಿಗೆ 1990ರಲ್ಲಿ ರೂ. 22.62 ಇದ್ದರೆ, 1981ರಲ್ಲಿ ರೂ. 8.87, ಮತ್ತು 1971ರಲ್ಲಿ ರೂ. 4.76 ಇತ್ತು ಎಂದು ತಿಳಿದು ಬರುವುದು. ಕಂದಾಯ ವಸೂಲಿಯ ಅನುಕೂಲತೆಗಾಗಿ ಊರನ್ನು 14 ವಿಭಾಗಗಳಾಗಿ ಮತ್ತು ಚುನಾವಣೆಯ ದೃಷ್ಟಿಯಿಂದ ನಾಲ್ಕು ಡಿವಿಜನ್‌ಗಳಾಗಿ ವಿಂಗಡಿಸಲಾಗಿದೆ.

1981ರಲ್ಲಿ ಪಟ್ಟಣದ ಜನಸಂಖ್ಯೆ 11,676 ಇತ್ತು. ಇದು ಜಿಲ್ಲೆಯ ಎರಡನೇಯ ಪ್ರಮುಖ ಪಟ್ಟಣವಾಗಿದೆ. ಊರಿನ ಬೆಳವಣಿಗೆಯು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿದ್ದು ಅನೇಕ ಹೊಸ ಬಡಾವಣೆಗಳು ಮೂಡಿ ಬಂದಿರುವವು.

ನೀರು ಪೂರೈಕೆ : ಪ್ರಾರಂಭದಲ್ಲಿ ತೆರೆದ ಬಾವಿಗಳು ಕುಡಿಯುವ ನೀರಿನ ಮೂಲಗಳಾಗಿದ್ದವು. 1964 ರಿಂದ ಸುರಕ್ಷಿತವಾದ ನೀರನ್ನು ಸಮೀಪದ ಕದನೂರು ಹೊಳೆಯಿಂದ ಪೂರೈಸಲಾಗುತ್ತಿದೆ. ಈ ಯೋಜನೆಯನ್ನು 1956ರಷ್ಟು ಹಿಂದೆಯೇ ಪ್ರಾರಂಭಿಸಿ 1964ರಲ್ಲಿ ಪೂರ್ಣಗೊಳಿಸಲಾಯಿತು. ಈ ಯೋಜನೆಗೆ ಸರ್ಕಾರ ಸಾಲದ ರೂಪದಲ್ಲಿ ನೀಡಿದ ಸಹಾಯಧನ ರೂ. 7.5 ಲಕ್ಷ ಎಂದು ವರದಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ (1990) ಹೆಚ್ಚುತ್ತಿರುವ ನೀರಿನ ಬೇಡಿಕೆಯನ್ನು ಪೂರೈಸಲು ಸಹಾಯಕವಾಗುವಂತೆ 35 ಕೊಳವೆ ಬಾವಿಗಳನ್ನು ಜಿಲ್ಲಾ ಪರಿಷತ್ತಿನ ವತಿಯಿಂದ ವ್ಯವಸ್ಥೆ ಮಾಡಲಾಗಿದೆ. ಕದನೂರು ಹೊಳೆಯ ನೀರನ್ನು ಶಿವಕೇರಿಯಲ್ಲಿರುವ ಶೇಖರಣ ಕೇಂದ್ರದಲ್ಲಿ ಶುದ್ಧೀಕರಿಸಿ ನಂತರ ನಗರಕ್ಕೆ ಸರಬರಾಜು ಮಾಡಲಾಗುವುದು. ಶುದ್ಧೀಕರಿಸಿದ ನೀರು ಸಂಗ್ರಹಿಸಿಡಲು ಒಟ್ಟು ಮೂರು ಜಲಾಗಾರಗಳಿದ್ದು ಅವುಗಳ

ಧಾರಣಕ್ಷಮತೆ ಸುಮಾರು 6 ಲಕ್ಷ ಗ್ಯಾಲನ್ ಎಂದು ವರದಿ ತಿಳಿಸುವುದು. ಈ ಜಲಾಗಾರಗಳನ್ನು 1959 ರಿಂದ 1964ರ ಅವಧಿಯಲ್ಲಿ ಕಟ್ಟಲಾಯಿತು. ಈಗ (1992) ನಗರದ ದಿನನಿತ್ಯದ ಸರಾಸರಿ ನೀರು ಸರಬರಾಜಿನ ಪ್ರಮಾಣ ಮತ್ತು ಅದರ ತಲಾವಾರು ಹಂಚಿಕೆ ಕ್ರಮವಾಗಿ 10 ಲಕ್ಷ ಲೀಟರ್ ಮತ್ತು 77 ಲೀಟರ್ ಎಂದು ವರದಿ ತಿಳಿಸುವುದು.

1990ರಲ್ಲಿ ನಗರದ ಪರಿಮಿತಿಯಲ್ಲಿ ಇದ್ದ ಖಾಸಗಿ ಮತ್ತು ಸಾರ್ವಜನಿಕ ಕೊಳಾಯಿಗಳ ಸಂಖ್ಯೆ ಕ್ರಮವಾಗಿ 844 115 ಆಗಿದ್ದರೆ, 1985ರಲ್ಲಿ ಈ ಸಂಖ್ಯೆಗಳು ಕ್ರಮವಾಗಿ 700 ಮತ್ತು 108 ಆಗಿತ್ತು. 1988–89ರಲ್ಲಿ ರಲ್ಲಿ ವಿದ್ಯುಚ್ಛಕ್ತಿಯ ವೆಚ್ಚವೂ ಸೇರಿ ನೀರು ಪೂರೈಕೆಗೆ ಪುರ ಸಭೆಯು ಮಾಡಿದ ಖರ್ಚು ರೂ. 3 92 ಲಕ್ಷ.

ಇತ್ತೀಚಿನ ವರ್ಷಗಳಲ್ಲಿ ಪುರಸಭೆಯ ವ್ಯಾಪ್ತಿಯಲ್ಲಿ ಸಾಂಕ್ರಾಮಿಕ ರೋಗಗಳನ್ನು ಬಹುಮಟ್ಟಿಗೆ ನಿಯಂತ್ರಿಸ ಲಾಗಿದೆ. ಒಳಚರಂಡಿ ಯೋಜನೆ ಅಳವಡಿಸಲಾಗಿಲ್ಲ. 'ಪೆಟ್ಟಿಗೆ' ಮಾದರಿಯ ತೆರೆದ ಚರಂಡಿಗಳಿದ್ದು ಅವುಗಳ ಒಟ್ಟು ಉದ್ದ ಸುಮಾರು 604 ಮೀಟರ್. ಇತ್ತೀಚಿನ ಮೂರು ವರ್ಷಗಳಲ್ಲಿ ಪುರಸಭೆಯು ಹೊಸ ಚರಂಡಿಗಳ ನಿರ್ಮಾಣ ಮತ್ತು ಅವುಗಳ ದುರಸ್ತಿಗೆ ಮಾಡಿದ ವೆಚ್ಚ ರೂ. 2.42 ಲಕ್ಷ. 88–89ರಲ್ಲಿ ಈ ಬಾಬಿಗೆ ಮಾಡಲಾದ ವೆಚ್ಚ ಸುಮಾರು ರೂ. 11,000. ನಗರದಲ್ಲಿ ಭಂಗಿಗಳು ತಲೆಯಮೇಲೆ ಮಲ ಹೊರುವುದನ್ನು ನಿಲ್ಲಿಸಲಾಗಿದ್ದು ನಗರದ ಸ್ವಚ್ಛತೆಯನ್ನು ಕಾಪಾಡಲು 15 ಜನ ಪೌರಕಾರ್ಮಿಕರು ಮತ್ತು ಇತರೇ ಸಿಬ್ಬಂದಿ ಇರುವರು. 1988–89ರಲ್ಲಿ ಜನಾರೋಗ್ಯ ಮತ್ತು ನೈರ್ಮಲ್ಯ ಕಾಪಾಡಲು ಮಂಡಲ ಪಂಚಾಯತಿ ಮಾಡಿದ ವೆಚ್ಚ ರೂ. 2.93 ಲಕ್ಷ.

ಪುರಸಭೆಯು 1974ರವರೆಗೆ ಒಂದು ಹಿರಿಯ ಪ್ರಾಥಮಿಕ ಶಾಲೆಯನ್ನು ನಡೆಸುತ್ತಿತ್ತು. ಸದ್ಯ ನಾಲ್ಕು ಶಿಶುವಿಹಾರಗಳನ್ನು ನಡೆಸುತ್ತಿದ್ದು 89–90 ಮತ್ತು ಅದರ ಹಿಂದಿನ ವರ್ಷ ಶಿಶುವಿಹಾರ ನಡೆಸಲು ಪುರಸಭೆಯು ಮಾಡಿದ ವೆಚ್ಚ ಕ್ರಮವಾಗಿ ರೂ. 1.18 ಲಕ್ಷ ಮತ್ತು ರೂ. 1.16 ಲಕ್ಷ ಎಂದು ವರದಿ ತಿಳಿಸುವುದು. ನಗರದಲ್ಲಿರುವ ಒಟ್ಟು ರಸ್ತೆಗಳ ಉದ್ದ 17.5 ಕಿ.ಮೀ. ಅವುಗಳಲ್ಲಿ 9 ಕಿ.ಮೀ. ರಸ್ತೆಯನ್ನು ಮಂಡಲ ಪಂಚಾಯತಿ ನಿರ್ವಹಿಸುತ್ತಿದೆ. 1988-89ರಲ್ಲಿ, ರಸ್ತೆಗಳ ನಿರ್ವಹಣೆ ಮತ್ತು ದುರಸ್ತಿಗಾಗಿ ಮಂಡಲ ಪಂಚಾಯತಿಯು ಮಾಡಿದ ಒಟ್ಟು ವೆಚ್ಚ ರೂ. 37,450. 1955ರಲ್ಲಿ ಮೊದಲ ಬಾರಿಗೆ ನಗರಕ್ಕೆ ವಿದ್ಯುತ್ ದೀಪಗಳ ಸೌಲಭ್ಯವನ್ನು ಒದಗಿಸಲಾಯಿತು. 1985–86ರಲ್ಲಿ ನಗರದ ಪರಿಮಿತಿಯಲ್ಲಿ ಇದ್ದ ವಿವಿಧ ವಿದ್ಯುತ್ ಸಂಪರ್ಕಗಳು ಹೀಗಿದ್ದವು. 921 ಮನೆ ದೀಪಗಳು, 477 ಬೀದಿ ದೀಪಗಳು ಮತ್ತು 41 ವಾಣಿಜ್ಯ ಸಂಪರ್ಕಗಳು ಇದ್ದವು; 1989-90ರಲ್ಲಿ ಇವುಗಳ ಸಂಖ್ಯೆಯು ಕ್ರಮವಾಗಿ 1056, 558 ಮತ್ತು 63ಕ್ಕೆ ಹೆಚ್ಚಳಗೊಂಡವು. 1988-89ನೇ ಸಾಲಿನಲ್ಲಿ ಈ ಬಾಬಿಗೆ ಪಂಚಾಯತಿಯು ಮಾಡಿದ ವೆಚ್ಚ ರೂ. 1.19 ಲಕ್ಷ.

ಈ ಮಂಡಲ ಪಂಚಾಯತಿಯು 1987-88, 88-89, 89-90 ಮತ್ತು 1990-91ನೇ ವರ್ಷಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಶೇ. 20ರ ಮೀಸಲು ನಿಧಿಯಿಂದ ವೆಚ್ಚಮಾಡಿದ ಹಣ ಕ್ರಮವಾಗಿ ರೂ.13,058, ರೂ. 53,683, ರೂ. 32,986 ಮತ್ತು ರೂ.59,120 ಎಂದು ವರದಿಯಾಗಿದ್ದು ಈ ಹಣವನ್ನು, ಮನೆ, ಚರಂಡಿ, ಶೌಚಾಲಯ, ರಸ್ತೆ ಇವುಗಳ ನಿರ್ಮಾಣ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಮನೆಗಳಿಗೆ ವಿದ್ಯುತ್ತಿನ ಅಳ ವಡಿಕೆ ಮುಂತಾದವುಗಳ ವೆಚ್ಚ ಭರಿಸಲು ವ್ಯಯ ಮಾಡ ಲಾಗಿದೆ.

**ಹಣಕಾಸು :** ಪುರಸಭೆಗೆ ಸರ್ಕಾರದಿಂದ 1985–86ರಲ್ಲಿ ರೂ. 4.50 ಲಕ್ಷ ಆಕ್ಟ್ರಾಯ್ ಅನುದಾನ ಮತ್ತು ರೂ. 30,000 ಅಭಿವೃದ್ಧಿ ಅನುದಾನ ಮಂಜೂರಾಗಿದ್ದರೆ ಅದರ ಮುಂದಿನ ವರ್ಷ ರೂ. 5.30 ಲಕ್ಷ ಆಕ್ಟ್ರಾಯ್ ಅನುದಾನ, ಹಾಗೂ ರೂ. 2,000. ಜನಾರೋಗ್ಯ ಸಹಾಯ ಧನ ಮಂಜೂರಾಗಿರುವುದು. ಮಂಡಲ ಪಂಚಾಯತಿಯಾಗಿ ಪರಿವರ್ತನೆಯಾದ ಮುಂದಿನ ವರ್ಷಗಳಲ್ಲಿ ಅಂದರೆ 87-88 ಮತ್ತು 88-89ರಲ್ಲಿ ಪಂಚಾಯತಿಗೆ ದೊರೆತ ಆಕ್ಟ್ರಾಯ್ ಅನುದಾನ ಕ್ರಮವಾಗಿ ರೂ. 3.31 ಲಕ್ಷ ಮತ್ತು ರೂ. 12.83 ಲಕ್ಷ ಆಗಿದ್ದರೆ, ಜಿಲ್ಲಾ ಪರಿಷತ್ತಿನಿಂದ ಅಭಿವೃದ್ಧಿ ಕಾರ್ಯಗಳಿಗೆ ದೊರೆತ ತಲಾ ಅನುದಾನದ ಮೊತ್ತ ಕ್ರಮ ವಾಗಿ ರೂ. 87,570 ಮತ್ತು ರೂ. 85,392 ಎಂದು ವರದಿಯಾಗಿದೆ. 89-90, 90-91 ಮತ್ತು 91-92ನೇ ಸಾಲುಗಳಿಗೆ ದೊರೆತ ತಲಾ ಅನುದಾನದ ಮೊತ್ತ ಕ್ರಮವಾಗಿ ರೂ. 85,963, ರೂ. 43,785 ಹಾಗೂ ರೂ. 1.09 ಲಕ್ಷ ಎಂದು ತಿಳಿದುಬರುವುದು.

ಆಕ್ಟ್ರಾಯ್ ರದ್ದಾಗುವ ಮೂರು ವರ್ಷದ ಪೂರ್ವದಲ್ಲಿ ಅಂದರೆ 1976-77, 77-78 ಮತ್ತು 78-79ರಲ್ಲಿ ಪುರಸಭೆಗೆ ಆಕ್ಟ್ರಾಯ್ ಮೂಲದಿಂದ ಸಂದಾಯವಾಗುತ್ತಿದ್ದ ಆದಾಯವು ಕ್ರಮವಾಗಿ ರೂ. 3.02 ಲಕ್ಷ, ರೂ. 3.15 ಲಕ್ಷ ಮತ್ತು ರೂ. 3.65 ಲಕ್ಷ ಆಗಿತ್ತು. 1987-88, 88-89 ಮತ್ತು 91-92ರಲ್ಲಿ ಮಂಡಲವು ಪಡೆದ ಆಕ್ಟ್ರಾಯ್ ಅನುದಾನ ಕ್ರಮವಾಗಿ ರೂ. 3.31 ಲಕ್ಷ ರೂ. 12.83 ಲಕ್ಷ ಮತ್ತು ರೂ. 6.61 ಲಕ್ಷ ಎಂದು ತಿಳಿದು ಬರುವುದು.

1988-89ನೇ ಸಾಲಿನಲ್ಲಿ ಮಂಡಲ ವಿಧಿಸಿದ ವಿವಿಧ ಕರಗಳ ಬೇಡಿಕೆ ಮತ್ತು ವಸೂಲಾತಿ ಈ ರೀತಿ ಇತ್ತು. ಆವರಣದಲ್ಲಿರುವ ಅಂಕಿಅಂಶಗಳು ವಸೂಲಾತಿಯನ್ನು ಸೂಚಿಸುತ್ತವೆ. ಮನೆ ಕಂದಾಯ ರೂ. 4.47 ಲಕ್ಷ (ರೂ. 4.50 ಲಕ್ಷ), ಮಾರ್ಕೆಟ್ ಸುಂಕ (ಫೀ) ರೂ. 52,175 (ರೂ. 52,175), ಪರವಾನಗಿ ಶುಲ್ಕ ರೂ. 53,865 (ರೂ. 39,080), ವಾಚನಾಲಯ ಉಪಕರ ರೂ. 11,520 (ರೂ. 5,010). ಪುರಸಭೆಯು ತನ್ನ ಒಟ್ಟು ಆದಾಯದಲ್ಲಿ ವಿವಿಧ ಬಾಬುಗಳಿಗೆ 1979-80 ಮತ್ತು 1989-90ನೇ ವರ್ಷಗಳಿಗೆ ಸಂಬಂಧಪಟ್ಟಂತೆ ಮಾಡಲಾದ ವೆಚ್ಚದ ತುಲನಾತ್ಮಕ ಶೇಕಡಾವಾರು ವಿವರ ಈ ರೀತಿ ಇರುವುದು : 1979-80 ರಲ್ಲಿ ಪುರಸಭೆಯು ಒಟ್ಟು ಆದಾಯ ವೆಚ್ಚಗಳು ಕ್ರಮವಾಗಿ ರೂ. 10.25 ಲಕ್ಷ ಮತ್ತು ರೂ. 7.47 ಲಕ್ಷ ಆಗಿದ್ದರೆ 1989-90 ರಲ್ಲಿ ಮಂಡಲ ಪಂಚಾಯತಿಯ ಒಟ್ಟು ಆದಾಯ ವೆಚ್ಚಗಳು ಕ್ರಮವಾಗಿ ರೂ. 20.09 ಲಕ್ಷ ಮತ್ತು ರೂ. 18.28 ಲಕ್ಷ ಎಂದು ವರದಿಯಾಗಿದೆ. 1989-90 ಮತ್ತು 1979-80 ರಲ್ಲಿ ವಿವಿಧ ಬಾಬುಗಳ ತುಲನಾತ್ಮಕ ವೆಚ್ಚದ ಶೇಕಡಾ ಪ್ರಮಾಣ ಈ ರೀತಿ ಇರುವುದು : ಆವರಣದಲ್ಲಿರುವ ಸಂಖ್ಯೆಯು 1979-80ರ ಶೇಕಡಾವಾರು ವೆಚ್ಚದ ಪ್ರಮಾಣವನ್ನು ಸೂಚಿಸುವುದು. ಜನಾರೋಗ್ಯ ಮತ್ತು ನೈರ್ಮಲ್ಯ ಶೇ. 16 5 (9), ನೀರು ಸರಬರಾಜು 13.73 (13), ರಸ್ತೆ ಮತ್ತು ದೀಪಗಳ ನಿರ್ವಹಣೆ 8.75(3.4), ಚರಂಡಿ ಮತ್ತು ಸಾಂಕ್ರಾಮಿಕ ರೋಗ 1.41 (0.27), ಇತರೇ 51.05 (46.63). ಪುರಸಭೆಯು ಕಾರ್ಯಾಲಯವನ್ನು ('ಪುರಭವನ') 1932ರಲ್ಲಿ ಕಟ್ಟಿಸಿದ್ದು, 1956 ರಲ್ಲಿ ಅದನ್ನು ವಿಸ್ತರಿಸಲಾಯಿತು. 1992 ರಲ್ಲಿ ಪಂಚಾಯತಿಯ ನೌಕರರ ಸಂಖ್ಯೆ 12 ಜನ ಪೌರ ಕಾರ್ಮಿಕರೂ ಸೇರಿದಂತೆ 29. ಇತ್ತೀಚಿನ ಹಲವಾರು ವರ್ಷಗಳ ಪುರಸಭೆಯ ಒಟ್ಟು ಆದಾಯ ಮತ್ತು ವೆಚ್ಚಗಳನ್ನು ಈ ಮುಂದೆ ಸೂಚಿಸಲಾಗಿದೆ. ಮೊತ್ತ ಲಕ್ಷ ರೂ.ಗಳಲ್ಲಿ ಇದ್ದು ಆವರಣದಲ್ಲಿರುವ ಸಂಖ್ಯೆಯು ವೆಚ್ಚವನ್ನು ಸೂಚಿಸುವುದು : 1980-81 : 8 87 (8.92); 1984-85 : 16.50 (16.57); 1986-87 : 15.61 (15.57); 1988-89 : 23.65 (16.83); 1989-90 : 11.39 (18.28).

1992-93ನೇಯ ಸಾಲಿಗೆ, ಮಂಡಲ ಪಂಚಾಯತಿಯು ಯಾವುದೇ ಹೆಚ್ಚುವರಿ ತೆರಿಗೆ ವಿಧಿಸದೇ, ರೂ. 1.75 ಲಕ್ಷದ ಉಳಿತಾಯದ ಮುಂಗಡ ಪತ್ರವನ್ನು ಅನುಮೋದಿಸಿದೆ. ಸದರಿ ವರ್ಷದಲ್ಲಿ ರೂ. 32.48 ಲಕ್ಷ ಆದಾಯ ನಿರೀಕ್ಷಿಸಲಾಗಿದ್ದು ರೂ. 30.73 ಲಕ್ಷ ಅಂದಾಜು ವೆಚ್ಚ ಮಾಡಲು ನಿರ್ಧರಿಸಲಾಗಿದೆ ಎಂದು ವರದಿಯಾಗಿದೆ.

**ಮಂಡಲ ಪಂಚಾಯತಿ, ಸೋಮವಾರಪೇಟೆ**

ಜಿಲ್ಲೆಯ ಪ್ರಮುಖ ವಾಣಿಜ್ಯ ವ್ಯಾಪಾರ ಕೇಂದ್ರಗಳಲ್ಲಿ ಒಂದಾದ ಸೋಮವಾರಪೇಟೆಯು ಪೌರಾಡಳಿತವು 'ಕೂರ್ಗ್ ಮುನಿಸಿಪಲ್ ರೆಗ್ಯುಲೇಷನ್ 1907'ರ ಅನ್ವಯ 1912 ರಷ್ಟು ಹಿಂದೆಯೇ 'ಅಧಿಸೂಚಿತ ಪ್ರದೇಶ' ಸಮಿತಿಯನ್ನು ರಚಿಸುವ ಮೂಲಕ ಪ್ರಾರಂಭವಾಯಿತು. ಸದರಿ ಸಮಿತಿಗೆ ಸ್ಥಳೀಯ ತಹಶೀಲ್‌ದಾರರು ಅಧ್ಯಕ್ಷರಾಗಿದ್ದರೆ ಉಳಿದ ಪ್ರತಿನಿಧಿಗಳು ಸರ್ಕಾರದಿಂದ ನಾಮಕರಣಗೊಂಡವರಾಗಿರುತ್ತಿದ್ದರು. ಅಧಿಸೂಚಿತ ಪ್ರದೇಶ ಸಮಿತಿಯು 12 ಜನ ಸದಸ್ಯರನ್ನೊಳಗೊಂಡಿದ್ದು ಅವರಲ್ಲಿ ಏಳು ಜನರು ಚುನಾಯಿತ ಸದಸ್ಯರು, ಉಳಿದವರು (ಐದು) ಸರ್ಕಾರದಿಂದ ನಾಮಕರಣಗೊಂಡ ಸದಸ್ಯರಾಗುತ್ತಿದ್ದರು. ನಾಮಕರಣಗೊಂಡವರಲ್ಲಿ ನಾಲ್ವರು ಪದನಿಮಿತ್ತ ಸರ್ಕಾರಿ ಅಧಿಕಾರಿಗಳಾಗಿದ್ದರೆ ಒಬ್ಬ ಹರಿಜನ ಸದಸ್ಯರು ಇರುತ್ತಿದ್ದರು. 1944 ರಿಂದ ಅಧಿಕಾರೇತರ ಸದಸ್ಯರನ್ನು ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನಾಗಿ ಚುನಾಯಿಸುವ ಕ್ರಮವನ್ನು ಜಾರಿಗೆ ತರಲಾಯಿತು.

ಕೊಡಗು ಕರ್ನಾಟಕಕ್ಕೆ ಸೇರ್ಪಡೆಯಾದನಂತರ, ಕರ್ನಾಟಕ ಪುರಸಭೆಗಳ ಕಾನೂನು 1964ರ ಅನ್ವಯ ಈ ಅಧಿಸೂಚಿತ ಪ್ರದೇಶವು 1965 ಏಪ್ರಿಲ್ ಒಂದನೇ ದಿನಾಂಕದಿಂದ ಪುರಸಭೆಯಾಗಿ ಪುನರ್ ರಚನೆಗೊಂಡಿತು. ಈ ಕಾನೂನಿನ ಅನ್ವಯ, ಪುರಸಭೆಗೆ 1978ರಲ್ಲಿ ಚುನಾವಣೆಗಳು ನಡೆದಾಗ ಪುರಸಮಿತಿಯು ಮೂರು ಮೀಸಲು ಸ್ಥಾನಗಳು (2 ಹರಿಜನ/ಗಿರಿಜನರಿಗೆ, ಒಂದು ಮಹಿಳೆಯರಿಗೆ) ಸೇರಿದಂತೆ 15 ಜನ ಪುರ ಪ್ರತಿನಿಧಿಗಳನ್ನೊಳಗೊಂಡಿತ್ತು.

ಕರ್ನಾಟಕ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿ ಕಾನೂನು 1985ರ ಅನ್ವಯ, ದಿ. 20.1.1986 ರಿಂದ ಹಿಂದಿನ ಪುರಸಭೆಯು ಮಧ್ಯಂತರ ಮಂಡಲ ಪಂಚಾಯತಿಯಾಗಿ ಮುಂದುವರಿದು ಪುರಸಭೆಯ ಸದಸ್ಯರ ಅವಧಿ ಮುಗಿದ ನಂತರ 20.6.90 ರಿಂದ ಹಿಂದಿನ ಪುರಸಭೆಯು ಪ್ರಥಮ ಬಾರಿಗೆ ಮಂಡಲ ಪಂಚಾಯತಿಯಾಗಿ ಪುನರ್ರಚನೆಗೊಂಡಿತು. ಪ್ರಧಾನರೂ ಮತ್ತು ಉಪ ಪ್ರಧಾನರೂ ಸೇರಿದಂತೆ ಮಂಡಲ ಪಂಚಾಯತಿಯು 16 ಪ್ರತಿನಿಧಿಗಳನ್ನು ಒಳಗೊಂಡಿದ್ದು ಅವರಲ್ಲಿ ಒಬ್ಬ ಮಹಿಳಾ ಪ್ರತಿನಿಧಿ ಸೇರಿದಂತೆ ನಾಲ್ಕು ಜನ ಪರಿಶಿಷ್ಟ ಜಾತಿಗೆ ಸೇರಿದ ಮೀಸಲು ಸ್ಥಾನದವರಾಗಿದ್ದು, ಮೂವರು ಸಾಮಾನ್ಯ ಮಹಿಳಾ ಮೀಸಲು ಸ್ಥಾನದವರಾಗಿರುತ್ತಾರೆ.

ಮಂಡಲ ಪಂಚಾಯತಿಯ ಕಾರ್ಯ ಚಟುವಟಿಕೆಗಳು ಸುಗಮವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಯಲು ಸಹಾಯಕವಾಗುವಂತೆ ಕಾನೂನಿನನ್ವಯ ರಚಿತವಾದ ಮೂರು ಉಪ ಸಮಿತಿಗಳನ್ನು (ಉತ್ಪಾದನಾ ಸಮಿತಿ, ಸೌಕರ್ಯ ಸಮಿತಿ ಮತ್ತು ಸಾಮಾಜಿಕ ನ್ಯಾಯ ಸಮಿತಿ) ಮಂಡಲವು ಹೊಂದಿರುವುದು.

ಮಂಡಲ ಪಂಚಾಯತಿಯ ಕಾರ್ಯವ್ಯಾಪ್ತಿ ಹಿಂದಿನ ಪುರಸಭೆಯ ಪ್ರದೇಶಕ್ಕೆ ಸೀಮಿತವಾಗಿದ್ದು, 1981ರಲ್ಲಿ ನಗರವು 6,936 ಜನಸಂಖ್ಯೆಯನ್ನು, 970 ಮನೆಗಳನ್ನು ಮತ್ತು 1.33 ಚ.ಕಿ.ಮೀ. ವಿಸ್ತೀರ್ಣ ಸರಹದ್ದನ್ನು ಹೊಂದಿತ್ತು. 1991ರಲ್ಲಿ ನಗರದ ಜನಸಂಖ್ಯೆ 7,092 ಇತ್ತು. 1991 ರಲ್ಲಿ ಮಂಡಲದ ಪರಿಮಿತಿಯಲ್ಲಿ ನಿವೇಶನ ಮತ್ತು ಕಟ್ಟಡ ಕರದಾತರ ಸಂಖ್ಯೆ 1,246 ಇದ್ದರೆ, ನೀರಿನ ತೆರಿಗೆದಾರರ ಸಂಖ್ಯೆ 1,020 ಆಗಿತ್ತು. ಬೆಳೆಯುತ್ತಿರುವ ನಗರವು ಇತ್ತೀಚಿನ ದಶಕಗಳಲ್ಲಿ ಅನೇಕ ಬಡಾವಣೆಗಳನ್ನು ಹೊಂದಿದ್ದು ಅವುಗಳಲ್ಲಿ ಮಹದೇಶ್ವರ ಬ್ಲಾಕ್, ರೇಂಜ್ ಆಫೀಸ್ ಬ್ಲಾಕ್, ವಲ್ಲಭಭಾಯಿ ಬ್ಲಾಕ್ ಮುಂತಾದವುಗಳು ಮುಖ್ಯವಾದವುಗಳು.

ಪ್ರಾರಂಭದಲ್ಲಿ ಕೆರೆಗಳು ಮತ್ತು ಬಾವಿಗಳು ನಗರಕ್ಕೆ ಕುಡಿಯುವ ನೀರನ್ನು ಒದಗಿಸುವ ಮೂಲಾಧಾರವಾಗಿದ್ದರೆ, 1960ರ ದಶಕದ ನಂತರ ಸುರಕ್ಷಿತವಾದ ಕುಡಿಯುವ ನೀರನ್ನು ನಲ್ಲಿಗಳ ಮೂಲಕ ಪೂರೈಸುವ ವ್ಯವಸ್ಥೆ ಮಾಡಲಾಗಿದೆ. ಕಕ್ಕೆಹೊಳೆ (ಸೋಮವಾರಪೇಟೆಯಿಂದ 2 ಕಿ.ಮೀ.) ಮತ್ತು ದುದ್ದಗಲ್ ಹೊಳೆ (ಸೋಮವಾರಪೇಟೆಯಿಂದ 6 ಕಿ.ಮೀ.)ಗಳಿಗೆ ಪಂಪುಗಳನ್ನು ಅಳವಡಿಸಿ ಶುದ್ಧೀಕರಿಸಿದ ನೀರನ್ನು ಪೂರೈಸಲಾಗುತ್ತಿದೆ. ಕಕ್ಕೆಹೊಳೆ ಒಂದು ಮತ್ತು ಎರಡನೇಯ ಹಂತದ ಯೋಜನೆಗಳನ್ನು 1959ರಲ್ಲಿ ಪ್ರಾರಂಭಿಸಿ 1965ರಲ್ಲಿ ಸುಮಾರು ರೂ. 4.55 ಲಕ್ಷ ವೆಚ್ಚದಿಂದ ಪೂರೈಸಲಾಯಿತು. ದುದ್ದಗಲ್ ಹೊಳೆ ಯೋಜನೆಯನ್ನು 1981ರಲ್ಲಿ ಪ್ರಾರಂಭಿಸಿ 1987ರಲ್ಲ ಪೂರೈಸಲಾಯಿತು. ಈ ಯೋಜನೆಯ ವೆಚ್ಚ ರೂ. 35 ಲಕ್ಷ. ಈ ಎರಡೂ ಯೋಜನೆಗಳನ್ನು ಕರ್ನಾಟಕ ಪಟ್ಟಣ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ, ಬೆಂಗಳೂರು ಇವರು ಪೂರೈಸಿ ಪುರಸಭೆಗೆ ವರ್ಗಾಯಿಸಿದರು. ಇದೂ ಅಲ್ಲದೇ ಇತ್ತೀಚೆಗೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಯಿಂದ 19 ಕೊಳವೆ ಬಾವಿಗಳನ್ನು ತೋಡಿಸಲಾಗಿದೆಯಲ್ಲದೇ ನಗರ ಪರಿಮಿತಿಯಲ್ಲಿ ಇರುವ 25 ತೆರೆದ ಬಾವಿಗಳನ್ನು ಬಳಕಲಾಗುತ್ತದೆ. ನಗರದಲ್ಲಿರುವ ಜಲಾಗಾರಗಳ ಸಂಖ್ಯೆ ಐದು (ಎರಡು ಮೇಲ್ಕಟ್ಟಿದವು ಮತ್ತು ಮೂರು ಭೂಮಟ್ಟದವು); ಇವುಗಳ ಒಟ್ಟು ನೀರು ಸಂಗ್ರಹಣಾ ಸಾಮರ್ಥ್ಯ 1.10 ಲಕ್ಷ ಗ್ಯಾಲನ್. ಪ್ರತೀ ದಿನ ಪೂರೈಕೆಯಾಗುತ್ತಿರುವ ನೀರಿನ ಪ್ರಮಾಣ ತಲಾ ಸುಮಾರು 125 ಲೀಟರ್ ಎಂದು ವರದಿಯಾಗಿದೆ. ಸೋಮವಾರಪೇಟೆ ಪಟ್ಟಣಕ್ಕೆ ಮಾತ್ರವಲ್ಲದೇ ಪಕ್ಕದ ಹಾನಗಲ್ಲು ಮಂಡಲ ವ್ಯಾಪ್ತಿಯ ಹೌಸಿಂಗ್‌ಬೋರ್ಡ್ ಕಾಲನಿಗೂ ಕೊಳವೆ ನೀರಿನ ಸರಬರಾಜು ವ್ಯವಸ್ಥೆ ಮಾಡಲಾಗಿದೆ. ಪಟ್ಟಣದ ಪರಿಮಿತಿಯಲ್ಲಿ ಇರುವ ಸಾರ್ವಜನಿಕ ಕೊಳಾಯಿಗಳ ಸಂಖ್ಯೆ 125 ಆಗಿದ್ದರೆ, ಗೃಹ ಉಪಯೋಗಿ ಬಳಕೆಯ ಕೊಳಾಯಿಗಳ ಸಂಖ್ಯೆ 900 ಮತ್ತು ಗೃಹೇತರ ಕೊಳಾಯಿಗಳ ಸಂಖ್ಯೆ 120 ಎಂದು ವರದಿಯಾಗಿದೆ. 1989-90, 90-91 ಮತ್ತು 91-92ನೇ ಸಾಲಿನಲ್ಲಿ ಕುಡಿಯುವ ನೀರು ಪೂರೈಕೆಗೆ ಮಂಡಲ ಪಂಚಾಯತಿಯು ಭರಿಸಿದ ವೆಚ್ಚ ಕ್ರಮವಾಗಿ ರೂ. 74,712, ರೂ. 1.10 ಲಕ್ಷ ಮತ್ತು ರೂ. 2.42 ಲಕ್ಷ ಆಗಿದ್ದರೆ, ನೀರಿನ ದರದ ರೂಪದಲ್ಲಿ ಸಂದಾಯವಾದ ವಾರ್ಷಿಕ ಆದಾಯ 91-92 ರಲ್ಲಿ ರೂ. 1.15 ಲಕ್ಷ ಎಂದು ವರದಿಯಾಗಿದೆ. ನಗರದಲ್ಲಿ ಒಳಚರಂಡಿ ಸೌಲಭ್ಯ ಇರುವುದಿಲ್ಲ. ನಗರದ ಪರಿಮಿತಿಯಲ್ಲಿರುವ ತೆರೆದ ಮೋರಿಗಳ (ಚರಂಡಿ) ಒಟ್ಟು ಉದ್ದ ಸುಮಾರು 8,467 ಮೀಟರ್, ಸಾರ್ವಜನಿಕ ಮೂತ್ರ ಮತ್ತು ಶೌಚಾಲಯಗಳ ಸಂಖ್ಯೆ 13. ಕಳೆದ ಮೂರು ವರ್ಷಗಳಲ್ಲಿ (89-90 ರಿಂದ 91-92) ಚರಂಡಿ ವ್ಯವಸ್ಥೆ ಮತ್ತು ನೈರ್ಮಲ್ಯ ಕಾಪಾಡಲು ಮಂಡಲವು ಭರಿಸಿದ ವೆಚ್ಚ ಅನುಕ್ರಮವಾಗಿ ರೂ. 90,681, ರೂ. 38,853 ಮತ್ತು ರೂ. 58,143.

ಊರಿನ ಪರಿಮಿತಿಯಲ್ಲಿ ಇರುವ ವಿವಿಧ ಬಗೆಯ ರಸ್ತೆಗಳ ಉದ್ದ ಸುಮಾರು 20 ಕಿ.ಮೀ; ಅದರ ಪೈಕಿ ಸುಮಾರು 17 ಕಿ.ಮೀ. ರಸ್ತೆಯನ್ನು ಮಂಡಲವು ನಿರ್ವಹಿಸುವುದು. ಪ್ರಥಮ ಬಾರಿಗೆ 1951 ರಲ್ಲಿ ನಗರವನ್ನು ವಿದ್ಯುದೀಕರಣ ಗೊಳಿಸಲಾಯಿತು. 1992 ರಲ್ಲಿ ನಗರ ಮಿತಿಯಲ್ಲಿ ಇರುವ ವಿವಿಧ ವಿನ್ಯಾಸಗಳ ಬೀದಿ ದೀಪಗಳ ಸಂಪರ್ಕಗಳ ಸಂಖ್ಯೆ 449 ಇದ್ದರೆ, ಗೃಹಬಳಕೆ ವಿದ್ಯುತ್ ಸಂಪರ್ಕಗಳ ಸಂಖ್ಯೆ 5,060, ಸರ್ವಗೃಹ ವಿದ್ಯುತ್ (ಎ.ಇ.ಹೆಚ್.) ಸಂಪರ್ಕಗಳ ಸಂಖ್ಯೆ 952 ಮತ್ತು ವಾಣಿಜ್ಯ ಸಂಪರ್ಕಗಳ ಸಂಖ್ಯೆ 1,172 ಎಂದು ವರದಿಯಾಗಿದೆ. ಮಂಡಲವು 91-92 ರಲ್ಲಿ ಬೀದಿ ದೀಪಗಳ ವ್ಯವಸ್ಥೆಗೆ ರೂ. 44,795 ವ್ಯಯ ಮಾಡಿದ್ದರೆ ಅದರ ಹಿಂದಿನ ಎರಡು ವರ್ಷಗಳಲ್ಲಿ ಅನುಕ್ರಮವಾಗಿ ಮಾಡಿದ ವೆಚ್ಚ ರೂ. 28,723 (90-91) ಮತ್ತು ರೂ. 49,228 (89-90).

ಮಂಡಲವು ತನ್ನ ಪರಿಮಿತಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಲ್ಯಾಣ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಶೇ. 20ರ ಕಾಯ್ದಿರಿಸಿದ ನಿಧಿಯಿಂದ 1989-90, 90-91 ಮತ್ತು 91-92ರ ಸಾಲಿಗೆ ಅನುಕ್ರಮವಾಗಿ ರೂ. 1.95 ಲಕ್ಷ, ರೂ. 68,602 ಮತ್ತು ರೂ. 1.57 ಲಕ್ಷ ವ್ಯಯ ಮಾಡಿರುವುದು. ಈ ಯೋಜನೆಯಲ್ಲಿ ಪ್ರಮುಖವಾಗಿ ಹಣವನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ವಾಸದ ಮನೆಗಳ ದುರಸ್ತಿ, ನೀರು ಪೂರೈಕೆ, ದಾರಿ ದೀಪ, ಡಾ|| ಅಂಬೇಡ್ಕರ್ ವೃತ್ತ ನಿರ್ಮಾಣ, ವಿದ್ಯಾರ್ಥಿಗಳಿಗೆ ಸಮವಸ್ತ್ರ, ಮುಂತಾದವುಗಳಿಗೆ ವ್ಯಯ ಮಾಡಲಾಗಿದೆ. ಮಂಡಲ ಪಂಚಾಯತಿಯ ಇತರೇ ಅಭಿವೃದ್ಧಿ ವೆಚ್ಚಗಳಲ್ಲಿ ಕಟ್ಟಡಗಳ ನಿರ್ಮಾಣಕ್ಕೆ 1989–90, 90–91 ಮತ್ತು 91–92ರಲ್ಲಿ ಮಾಡಿದ ವೆಚ್ಚ ಅನುಕ್ರಮವಾಗಿ ರೂ. 1.17 ಲಕ್ಷ, ರೂ. 27,064 ಮತ್ತು ರೂ. 22,113 ಎಂದು ವರದಿಯಾಗಿದೆ. ಅದರಂತೆ ಮಾರುಕಟ್ಟೆ ಮಳಿಗೆಗಳಿಗೆ ಮೇಲಿನ ಅವಧಿಯಲ್ಲಿ ಮಾಡಿದ ವೆಚ್ಚ ಅನುಕ್ರಮವಾಗಿ ರೂ. 27,422 ರೂ. 16,978 ಮತ್ತು ರೂ. 67,758 ಎಂದು ಕಂಡು ಬರುವುದು.

ಮಂಡಲದ ಸಾಮಾನ್ಯ ವಾರ್ಷಿಕ ಆದಾಯದ ಮೂಲಗಳಲ್ಲಿ ಬಹುಪಾಲು (ರೂ. 2 ಲಕ್ಷ) ಮನೆಗಂದಾಯ ರೂಪದಲ್ಲಿ, ರೂ. 1.20 ಲಕ್ಷ ಸ್ಥಿರ ಸ್ವತ್ತುಗಳ ಮೇಲಿನ ಬಾಡಿಗೆ ರೂಪದಲ್ಲಿ, ರೂ. 1.50 ಲಕ್ಷ, ಸಂತೆ ಮಾರುಕಟ್ಟೆಗಳ ಸುಂಕ ಮೂಲಕ, ರೂ. 1.25 ಲಕ್ಷ ಕುರಿ, ಕೋಳಿ, ಮಾಂಸ, ಮೀನು ಮುಂತಾದ ಮಾರುಕಟ್ಟೆಗಳ ಹರಾಜು ಮೂಲಕ ಸಂದಾಯವಾಗುವುದು. ಸೋಮವಾರಪೇಟೆಯ ವಾರದ ಸಂತೆಯು ಜಿಲ್ಲೆಯಲ್ಲಿಯೇ ಬಹು ದೊಡ್ಡ ಸಂತೆ ಎಂದು ಹೇಳಲಾಗಿದ್ದು, ವಾರ್ಷಿಕ ಸುಮಾರು ರೂ. 1.50 ಲಕ್ಷ ಆದಾಯ ಈ ಮೂಲದಿಂದ ಸಂದಾಯವಾಗುವುದು. ಮಂಡಲವು 94 ವಿವಿಧ ವ್ಯಾಪಾರ ಮಳಿಗೆಗಳನ್ನು ಹೊಂದಿದೆ. 1991–92ರಲ್ಲಿ ಮಂಡಲ ಪಂಚಾಯತಿಗೆ ಸರ್ಕಾರದ ಅನುದಾನವೂ ಸೇರಿದಂತೆ, ದಂಡದ ಹಣ, ಮನರಂಜನಾ ತೆರಿಗೆ, ಸ್ಟ್ಯಾಂಪ್ ಶುಲ್ಕ, ಲೈಸನ್ಸ್ ಫೀ ಮತ್ತು ಇತರೇ ಶುಲ್ಕ ಸೇರಿದಂತೆ ಸಂದಾಯವಾದ ಆದಾಯ ರೂ. 12.15 ಲಕ್ಷ ಎಂದು ವರದಿಯಾಗಿದೆ. ಮಂಡಲದ ಸ್ಥಿರಾಸ್ತಿಗಳಲ್ಲಿ ತನ್ನದೇ ಆದ 20 ವಾಸದ ಮನೆಗಳೂ ಸೇರಿವೆ.

ಹಿಂದಿನ ಪುರಸಭೆಯು ಮಂಡಲ ಪಂಚಾಯತಿ ಎಂದು ಪುನರ್ರಚನೆಗೊಂಡ ನಂತರ ಜಿಲ್ಲಾ ಪರಿಷತ್ತಿನಿಂದ 1988-89 ರಿಂದ 1991–92ರ ವರೆಗೆ ಪಡೆದ ತಲಾ ಅನುದಾನದ ಮೊತ್ತ ಪ್ರತೀವರ್ಷ ರೂ. 52,020 ಎಂದು ತಿಳಿದು ಬರುವುದು. 1987–88ರಲ್ಲಿ ಮಂಡಲ ಪಂಚಾಯತಿಗೆ ಸರ್ಕಾರದಿಂದ ನೀಡಲ್ಪಟ್ಟ ಆಕ್ಟ್ರಾಯ್ ಅನುದಾನದ ಮೊತ್ತ ರೂ. 2.32 ಲಕ್ಷ ಆಗಿದ್ದರೆ ಅದರ ಮುಂದಿನ ಮೂರು ವರ್ಷಗಳಲ್ಲಿ 90–91ರ ವರೆಗೆ ಪಡೆದ ಅನುದಾನ ಪ್ರತೀ ವರ್ಷ ರೂ. 2.47 ಲಕ್ಷ. ಮಂಡಲ ಪಂಚಾಯತಿಯ ಒಟ್ಟು ನೌಕರರ ಸಂಖ್ಯೆ 42. ಇತ್ತೀಚಿನ ಹಲವು ವರ್ಷಗಳಲ್ಲಿ ಮಂಡಲ ಪಂಚಾಯತಿಯ ಆದಾಯ ವೆಚ್ಚಗಳು ಈ ರೀತಿ ಇದ್ದವು : (ಮೊತ್ತ ಲಕ್ಷ ರೂ.ನಲ್ಲಿ ; ಆವರಣದಲ್ಲಿ ವೆಚ್ಚವನ್ನು ಸೂಚಿಸಲಾಗಿದೆ). 1985–86 : 9.79 (12.42) 1987–88 : 11.40 (10.40) ; 1989–90 : 12.88 (15.70) ; 19990–91 : 9.87 (9.99); ಹಾಗೂ 1991–92 : 15.29 (14.78).

ಜಿಲ್ಲೆಯ ಪುರಸಭೆಗಳ/ಮಂಡಲ ಪಂಚಾಯತಿಗಳ ಇತ್ತೀಚಿನ ಹಲವು ವರ್ಷಗಳ ಕ್ರೋಢೀಕೃತ ಹಣಕಾಸಿನ ಕೆಲವು ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

(ಮೊತ್ತ ಸಾವಿರ ರೂ.ಗಳಲ್ಲಿ)

ಆದಾಯ

| ವರ್ಷ | ತೆರಿಗೆಗಳು (ರೇಟ್ಸ್ ಆ್ಯಂಡ್ ಟ್ಯಾಕ್ಸಸ್) | ಸರ್ಕಾರದ ಅನುದಾನ | ಇತರೇ | ಆರಂಭದ ಶಿಲ್ಕು | ಒಟ್ಟು |
|---|---|---|---|---|---|
| 1984-85 | 886 | 143 | 331 | 528 | 1,888 |
| 1985-86 | 1,056 | 1,263 | 255 | 690 | 3,264 |
| 1986-87 | 1,031 | 2,091 | 401 | 597 | 4,120 |
| 1987-88 | 1,036 | 1,724 | 451 | 180 | 3,391 |
| 1988-89 | 1,389 | 2,031 | 552 | 103 | 4,075 |

ವೆಚ್ಚ

| ವರ್ಷ | ಸಾಮಾನ್ಯ ವೆಚ್ಚ | ಅಸಾಧಾರಣ ವೆಚ್ಚ | ಅಖೈರು ಶಿಲ್ಕು | ಒಟ್ಟು |
|---|---|---|---|---|
| 1984-85 | 3,225 | 942 | 690 | 4,857 |
| 1985-86 | 2,934 | 637 | 597 | 4,168 |
| 1986-87 | 4,346 | 504 | 180 | 5,030 |
| 1987-88 | 4,204 | 534 | 103 | 4,841 |
| 1988-89 | 4,993 | 1,030 | 84 | 6,107 |

ಜಿಲ್ಲೆಯ ಎಲ್ಲ ಮಂಡಲ ಪಂಚಾಯತಿಗಳಿಗೆ ಸಂಬಂಧಪಟ್ಟಂತೆ ಅವಶ್ಯಕವಾದ ಮಾಹಿತಿಯನ್ನು (1992-93) ಈ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

| ಮಂಡಲ ಪಂಚಾಯತಿಯ ಹೆಸರು | ಪುರಸಭೆ/ಅಧಿಸೂಚಿತ ಪ್ರದೇಶ ರಚನೆಯಾದ ವರ್ಷ | ಜನಸಂಖ್ಯೆ 1981 | ಮನೆಗಳ ಸಂಖ್ಯೆ | ವಿಸ್ತೀರ್ಣ ಚ.ಕಿ.ಮೀ. |
|---|---|---|---|---|
| ಗೋಣಿಕೊಪ್ಪಲು | 1958 | 5,391 | 1,063 | 3.26 |
| ಕೊಡ್ಲಿಪೇಟೆ | 1890 | 2,254 | 407 | 0.42 |
| ಕುಶಾಲನಗರ | 1908 | 6,936 | 1,402 | 3.26 |
| ಪೊನ್ನಂಪೇಟೆ | 1952 | 4,367 | 948 | 2.33 |
| ಶನಿವಾರಸಂತೆ | 1954 | 2,691 | 543 | 0.72 |
| ಸೋಮವಾರಪೇಟೆ | 1912 | 6,936 | 1,453 | 1.33 |
| ಸುಂಟಿಕೊಪ್ಪ | 1954 | 2,166 | 505 | 0.16 |
| ವೀರರಾಜಪೇಟೆ | 1870 | 11,676 | 2,312 | 2.83 |

## ನಗರ ಪ್ರವೇಶ ತೆರಿಗೆ (ಆಕ್ಟ್ರಾಯ್)

ಭಾರತದಲ್ಲಿ ವ್ಯಾಪಾರಿ ವಸ್ತುಗಳ ಮೇಲೆ ನಗರ ಪ್ರವೇಶ ಸುಂಕವನ್ನು ರದ್ದು ಮಾಡಿದ 16 ರಾಜ್ಯಗಳ ಪೈಕಿ ಕರ್ನಾಟಕವೂ ಒಂದು. ಕರ್ನಾಟಕದಾದ್ಯಂತ 1979 ಏಪ್ರಿಲ್ ಒಂದರಿಂದ ವ್ಯಾಪಾರಿ ಸರಕುಗಳ ಮೇಲೆ ನಗರ ಪ್ರವೇಶ ಸುಂಕ (ಆಕ್ಟ್ರಾಯ್/ಜಕಾತಿ)ವನ್ನು ರದ್ದು ಪಡಿಸಲಾಯಿತು. ಇದರಿಂದ ಪುರಸಭೆ/ನಗರಸಭೆ/ಮಹಾನಗರ ಪಾಲಿಕೆಗಳ ಆದಾಯದಲ್ಲಿ ಗಣನೀಯ ಪ್ರಮಾಣದ ಕೊರತೆಯಾಯಿತು. ಈ ಕೊರತೆಯನ್ನು ತುಂಬಿಕೊಡಲು ಸರ್ಕಾರವು 1979ರ ಸ್ಥಳೀಯ ಪ್ರದೇಶಗಳ ಅನುಭೋಗ, ಉಪಯೋಗ ಅಥವಾ ಮಾರಾಟ ವಸ್ತುಗಳ ಮೇಲೆ ಪ್ರವೇಶ ತೆರಿಗೆ ಅಧಿನಿಯಮಗಳನ್ನು ತೆರಿಗೆಯನ್ನು ಸಂಗ್ರಹಿಸಿ ಆಕ್ಟ್ರಾಯ್ ಅನುದಾನದ ಮೂಲಕ ಸ್ಥಳೀಯ ಸಂಸ್ಥೆಗಳಿಗೆ ನೀಡುತ್ತಿವೆ. ಇದರೊಂದಿಗೆ ಅಭಿವೃದ್ಧಿ ಅನುದಾನ, ನೌಕರ ಭತ್ಯೆ ಅನುದಾನ, ಮುಂತಾದವುಗಳನ್ನು ಸಹ ನೀಡಲಾಗುವುದು. ಇತ್ತೀಚೆಗೆ (1987) ಕಾನೂನಿಗೆ ವ್ಯಾಪಕ ತಿದ್ದುಪಡಿಯನ್ನು ತಂದು ಸದರಿ ಕಾನೂನನ್ನು ವಿಸ್ತರಿಸಿ ಮಂಡಲ ಪಂಚಾಯತಿಗಳಿಗೂ ಪ್ರವೇಶ ತೆರಿಗೆ ಅನ್ವಯವಾಗುವಂತೆ ಮಾಡಲಾಗಿದೆ. 1992 ಮೇ ಒಂದರಿಂದ ಸರ್ಕಾರವು ಪ್ರವೇಶ ತೆರಿಗೆಯನ್ನು 80 ವಿವಿಧ ಬಗೆಯ ವಸ್ತುಗಳ ಮೇಲೆ ಶೇ. ಒಂದರಿಂದ ಐದರ ಪ್ರಮಾಣದಲ್ಲಿ ವಿಧಿಸುತ್ತಿದೆ. ಈ ಕಾನೂನಿನ ಅನ್ವಯ ವಾರ್ಷಿಕ ರೂ. 75,000ಕ್ಕಿಂತ ಹೆಚ್ಚು ವಹಿವಾಟು ನಡೆಸುವ ವರ್ತಕರು ನೋಂದಾಯಿಸಿಕೊಳ್ಳಬೇಕು. ಜನಸಾಮಾನ್ಯರು ದಿನನಿತ್ಯ ಬಳಸುವ ವಸ್ತುಗಳಾದ ಖಾದ್ಯತೈಲ, ಬೆಣ್ಣೆ, ತುಪ್ಪ, ಬೆಲ್ಲ, ಬಟ್ಟೆ, ಸಾಬೂನು ಬೀಡಿ, ರೇಜರ್, ಸಂಸ್ಕರಿಸಿದ ಆಹಾರ, ಔಷಧಿ, ಕ್ರಿಮಿನಾಶಕ ಇಟ್ಟಿಗೆ, ಅಲ್ಯುಮಿನಿಯಂ ಪಾತ್ರೆ ಮುಂತಾದ 23 ವಸ್ತುಗಳಿಗೆ ಪ್ರವೇಶ ತೆರಿಗೆಯಿಂದ ಸಂಪೂರ್ಣ ವಿನಾಯತಿ ನೀಡಲಾಗಿದೆ.

## ಆಯಗಾರ ಪದ್ಧತಿ

ಇತಿಹಾಸ ಕಾಲದ ಆರಂಭದಿಂದಲೂ ಪ್ರತೀ ಗ್ರಾಮವು ಸಾಮಾನ್ಯವಾಗಿ ಹನ್ನೆರಡು ವಿವಿಧ ಬಗೆಯ ವ್ಯವಸಾಯ ವೃತ್ತಿಗೆ ಪೂರಕವಾದ ಗ್ರಾಮೀಣ ಕಸಬುಗಳನ್ನು ನಿರ್ವಹಿಸುವ ಕುಟುಂಬಗಳ ಒಂದು ಸಮುದಾಯವನ್ನು ಹೊಂದಿರುತ್ತಿತ್ತು. ಈ ಸಮುದಾಯವನ್ನು ದಕ್ಷಿಣ ಮೈಸೂರು ಪ್ರದೇಶದಲ್ಲಿ ಕೊಡಗು ಸೇರಿದಂತೆ 'ಕೈವಾಡದವರು' 'ಅಡದೆಯವರು' ಎಂದು ರೂಢಿಯಲ್ಲಿ ಅನ್ವರ್ಥಕ ನಾಮದಿಂದ ಕರೆಯುತ್ತಿದ್ದರು. ಪರ್ಶಿಯನ್‌ನಲ್ಲಿ ಇವನ್ನು "ಬಾರಾ ಬಲೂತಿ' ಎನ್ನುವರು. ಉತ್ತರ ಕರ್ನಾಟಕ ಭಾಗದಲ್ಲಿ ಇವರನ್ನು 'ಅಯಗಾರರು' ಎಂದು ಕರೆಯುವುದು ರೂಢಿಯಲ್ಲಿದೆ. ಈ ಪ್ರಾಚೀನ ಗ್ರಾಮೀಣ ಸಹಬಾಳುವೆ ಪದ್ಧತಿಯೂ ಇಂದಿಗೂ ವ್ಯವಸಾಯ ಪ್ರಧಾನವಾದ ಗ್ರಾಮೀಣ ಭಾಗದಲ್ಲಿ ಕಾಲಮಾನಕ್ಕೆ ತಕ್ಕಂತೆ ಉಂಟಾದ ಬದಲಾವಣೆಗಳೊಂದಿಗೆ ಮುಂದುವರೆಯುತ್ತಿದೆ. ಸಾಮಾನ್ಯವಾಗಿ ಕಂಡುಬರುವಂತೆ ಗ್ರಾಮದ ಹನ್ನೆರಡು ಜನ ಆಯಗಾರರೆಂದರೆ ಶಾನುಭೋಗ (ಲೆಕ್ಕಿಗ), ಗೌಡ (ಊರ ಮುಖ್ಯಸ್ಥ), ಕಮ್ಮಾರ, ಬಡಗಿ, ಅಗಸ, ಪಂಚಾಂಗಿ(ಜ್ಯೋತಿಷಿ),ನಾಯಿಂದ, ಚಮ್ಮಾರ, ಅಕ್ಕಸಾಲಿ, ತಳಾರಿ (ತಳವಾರ), ನೀರಗಂಟಿ (ಕೆರೆ ಕಾಯುವವ) ಮತ್ತು ಕುಂಬಾರ. ಮದ್ರಾಸ್ ಮತ್ತು ಮೈಸೂರು ಪ್ರದೇಶಗಳಲ್ಲಿ ಬ್ರಿಟಿಷರು ಹೊಸ ಭೂಕಂದಾಯ ವ್ಯವಸ್ಥೆಯನ್ನು ಪ್ರಾರಂಭಿಸಿದ ಬಳಿಕ ಗ್ರಾಮದ ಆಡಳಿತದ ನೇರಸಂಬಂಧ ಇರುವ ಗ್ರಾಮಾಧಿಕಾರಿಗಳು ಅವರ ನೇಮಕ, ಅವರ ನಡಾವಳಿ ಮುಂತಾದವುಗಳು ನಿಯಮಾವಳಿಗೆ ಒಳಪಟ್ಟಿದ್ದವಲ್ಲದೇ, ಇವರಿಗೆ ಶಾಸನಬದ್ಧ ಸ್ಥಾನವನ್ನು ನೀಡಿ ಅವರ ವಶದಲ್ಲಿದ್ದ ಜಮೀನುಗಳನ್ನು ಕಂದಾಯ ಮುಕ್ತವಾಗಿ ಅಥವಾ ರಿಯಾಯತಿ ಕಂದಾಯದಂತೆ ಅನುಭವಿಸುವ ಅಧಿಕಾರವನ್ನು ನೀಡಲಾಗಿತ್ತು.

ಕೊಡಗಿನಲ್ಲಿ ರಾಜ್ಯದ ಇತರ ಭಾಗಗಳಲ್ಲಿ ಇದ್ದುದಕ್ಕಿಂತ ಸಾಕಷ್ಟು ಭಿನ್ನವಾದ ಗ್ರಾಮ ಸಿಬ್ಬಂದಿಯ ರಚನೆ ಇತ್ತು. ಪ್ರತೀ ಗ್ರಾಮಕ್ಕೂ ಗ್ರಾಮ ಲೆಕ್ಕಿಗನು ಅಲ್ಲಿ ಇರಲಿಲ್ಲ. ನಾಡಕಾರಕೂನರು ಹಾಗೂ ಶಾನುಭೋಗರನ್ನೊಳಗೊಂಡ ಸಿಬ್ಬಂದಿಯುಳ್ಳ ಒಬ್ಬ ಪಾರುಪತ್ಯಗಾರ ಗ್ರಾಮಗಳ ಗುಂಪಿಗೆ (ನಾಡು) ಇರುತ್ತಿದ್ದ. ಬಹಳ ಹಿಂದಿನಿಂದ ಕೊಡಗು ನಾಡುಗಳಾಗಿ ವಿಭಜಿತವಾಗಿದ್ದು 1835 ರಿಂದ ಅದು 19 ನಾಡುಗಳಾಗಿ ವಿಂಗಡಿಸಲ್ಪಟ್ಟು ಪ್ರತೀ ನಾಡಿನ ಉಸ್ತುವಾರಿಯನ್ನು ಪಾರುಪತ್ಯಗಾರರು ನೋಡಿಕೊಳ್ಳುತ್ತಿದ್ದರು. ಪ್ರತೀ ನಾಡು ಅನೇಕ ವಿಭಾಗಗಳಾಗಿ ವಿಂಗಡಿಸಲ್ಪಟ್ಟು ಒಂದೊಂದು ವಿಭಾಗದಲ್ಲಿ ಕನಿಷ್ಠ ನಾಲ್ಕರಿಂದ ಗರಿಷ್ಠ 30ರ ವರೆಗೆ ಹಳ್ಳಿಗಳು ಶಾನುಭೋಗರ ಉಸ್ತುವಾರಿಯಲ್ಲಿ ಇರುತ್ತಿದ್ದವು. ಕೊಡಗಿನ ಹೊರಗಡೆಯ ಪ್ರದೇಶಗಳಲ್ಲಿ ತೋಟಿ ಮತ್ತು ಉಗ್ರಾಣಿಗಳಿಗೆ ಸಮನಾದ 'ಕುಳವಾಡಿ'ಗಳು ಕೊಡಗಿನಲ್ಲಿದ್ದರು. ಪಟೇಲ ಮತ್ತು ಕುಳವಾಡಿಗಳ ಹುದ್ದೆಗಳು ಆನುವಂಶಿಕವಾಗಿದ್ದವು. ಪಟೇಲರಿಗೆ ಸಾಮಾನ್ಯ ಕಂದಾಯದ ಅರ್ಧ ದರವುಳ್ಳ 'ಗೌಡುಂಬಳಿ' ಎಂಬ ಇನಾಮು ಜಮೀನು ಪ್ರತಿಫಲ ಅಥವಾ ಗ್ರಾಮದ ಕಂದಾಯವನ್ನಾಧರಿಸಿದ ನಗದು ಪ್ರತಿಫಲ ಅಥವಾ ಎರಡೂ ಇರುತ್ತಿತ್ತು.

ಕೊಡಗಿನ ಆಯಗಾರರಲ್ಲಿ ಬಡಗಿಯು ವಿಶೇಷವಾದ ಹಕ್ಕು (ಹೆಂಗಸರು ಆಭರಣ ಧರಿಸಲು ಕಿವಿ ಚುಚ್ಚುವುದು) ಹೊಂದಿದ್ದನು. ಕೊಡಗಿನಲ್ಲಿ ಹರಿಜನರೂ ಸಹ ತಾವು ಸೇವೆ ಸಲ್ಲಿಸುವ ಕುಟುಂಬದಿಂದ ಬತ್ತ ಅಥವಾ ರಾಗಿಯ ರೂಪದಲ್ಲಿ ವಾರ್ಷಿಕ ಹಡದಿಯನ್ನು (ಆಯ) ಪಡೆಯುವ ಸಂಪ್ರದಾಯ ಇದ್ದುದಾಗಿ ತಿಳಿದು ಬರುವುದು. ಹಬ್ಬಗಳಲ್ಲಿ ಅವರು ವಾದ್ಯಗಳನ್ನು ನುಡಿಸುತ್ತಿದ್ದರು. ಹಡದಿಯ ಪ್ರಮಾಣ ಕುಟುಂಬದಲ್ಲಿನ ಮದುವೆಯಾದ ಪ್ರತೀ ಗಂಡಸರಿಗೆ 24 ಸೇರು ಬತ್ತದಂತೆ ನೀಡಲಾಗುತ್ತಿತ್ತು ಎಂದು ತಿಳಿದು ಬರುವುದು. ಕುಳವಾಡಿಗಳಿಗೆ 'ಸಾಯಿ ಮಣ್ಣು' ಎಂಬ ಇನಾಮು ಜಮೀನು ಅಥವಾ ವರ್ಷಕ್ಕೆ 18 ರೂ. ನಗದು ಮತ್ತು ರೂಢಿಯಂತೆ ರೈತರಿಂದ ಸುಗ್ಗಿಯ ಕಾಲಕ್ಕೆ ವಸೂಲಿ ಮಾಡುವ 'ಮಾಮೂಲು' ಅವರ ಪ್ರತಿಫಲದಲ್ಲಿ ಸೇರುತ್ತಿತ್ತು. 1961ರ ಕರ್ನಾಟಕ ಗ್ರಾಮಾಧಿಕಾರಿಗಳ ನಿರ್ಮೂಲನ ಶಾಸನದ ಪ್ರಕಾರ ಈ ಎಲ್ಲಾ ಆನುವಂಶಿಕ ಹುದ್ದೆಗಳನ್ನು ರದ್ದುಪಡಿಸಲಾಯಿತು.

## ಕೊಡಗು ಜಿಲ್ಲಾ ಮಂಡಲಿ (ಬೋರ್ಡ್)

ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಸಹಾಯಕವಾಗುವಂತೆ, 1900ರಲ್ಲಿ (ಕೊಡಗು ಶಾಸನ ಸಂಖ್ಯೆ Iರ ಅನ್ವಯ) ಶಾಸನಬದ್ಧ 'ಕೊಡಗು ಜಿಲ್ಲಾ ಫಂಡ್' ನಿಯಮಾವಳಿಗಳು ರಚನೆಯಾಗುವ ಪೂರ್ವದಲ್ಲಿ, 'ಧೂಳಿ ತೆರಿಗೆ' ಮತ್ತು 'ನೇಗಿಲು ತೆರಿಗೆ'ಗಳನ್ನು ವಿಧಿಸಿ ಹಣವನ್ನು ಸಂಗ್ರಹ ಮಾಡಲಾಗುತ್ತಿತ್ತು. ಇವುಗಳಲ್ಲದೇ 'ಮನೆ ಹಣ' (ಮನೆ ಕಂದಾಯ)ವನ್ನು ವಸೂಲಿ ಮಾಡಲಾಗುತ್ತಿತ್ತು. ಈ ತೆರಿಗೆಗಳನ್ನು ರಾಜರ ಕಾಲದಿಂದಲೂ ವಿಧಿಸಲಾಗುತ್ತಿತ್ತು. 1900ರಲ್ಲಿ ಜಿಲ್ಲಾ ಫಂಡ್ ರಚನೆಯಾದ ನಂತರ ಮೇಲಿನ ಎರಡೂ ತೆರಿಗೆಗಳನ್ನು ರದ್ದುಗೊಳಿಸಿ ಅವುಗಳಿಗೆ ಪ್ರತಿಯಾಗಿ ಹೊಸ ಸ್ಥಳೀಯ ಉಪತೆರಿಗೆ (ಸೆಸ್) ಯನ್ನು ನಿಗದಿತ ಭೂಕಂದಾಯದ ಪ್ರತೀ ರೂಪಾಯಿಯ ಮೇಲೆ ಒಂದು ಆಣೆಯಂತೆ ವಿಧಿಸಲಾಯಿತು. ಈ ಹೊಸ ತೆರಿಗೆಯನ್ನು 1901–1902ರಲ್ಲಿ ಜಾರಿಗೆ ತರಲಾಯಿತು.

ಈ ಹಿಂದೆ ಧೂಳಿ ತೆರಿಗೆಯನ್ನು ಯಾವ ತಾರತಮ್ಯ ಇಲ್ಲದೇ ಸಣ್ಣ ಮತ್ತು ದೊಡ್ಡ ಹಿಡುವಳಿದಾರರ ಮೇಲೆ ಏಕರೂಪವಾಗಿ ವಿಧಿಸಲಾಗುತ್ತಿತ್ತು. ನೇಗಿಲು ತೆರಿಗೆಯನ್ನು ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಸೌಲಭ್ಯಗಳನ್ನು ಒದಗಿಸಲು ವಿಧಿಸಲಾಗುತ್ತಿತ್ತು. ಈ ವ್ಯವಸ್ಥೆಯೇ ಮುಂದುವರಿದು ಕಾಲಕ್ರಮೇಣ ಬದಲಾವಣೆಗೊಂಡು ಗ್ರಾಮೀಣ ಪ್ರದೇಶದಲ್ಲಿ ಮೂರು ಹಂತಗಳ ಪಂಚಾಯತ್ ರಾಜ್ಯ ಸಂಸ್ಥೆಗಳು ಮೂಡಿಬರಲು ಕಾರಣವಾಯಿತು.

ಜಿಲ್ಲಾ ಬೋರ್ಡ್ ರಚನೆಯಾದಾಗ (1901) ಪ್ರಾರಂಭದಲ್ಲಿ 16 ಜನ ಸದಸ್ಯರನ್ನೊಳಗೊಂಡಿತ್ತು. ಅದರಲ್ಲಿ ಐದು ಜನ ಪದನಿಮಿತ್ತ ಸರ್ಕಾರಿ ಅಧಿಕಾರಿಗಳು, ಒಂಬತ್ತು ಜನ ನಾಮಕರಣ ಸದಸ್ಯರು ಮತ್ತು ಕೇವಲ ಇಬ್ಬರು ಚುನಾಯಿತ ಸದಸ್ಯರಿದ್ದರು. ಕೊಡಗಿನ ಮುಖ್ಯ ಕಮೀಷನರ್ ಜಿಲ್ಲಾ ಮಂಡಳಿಯ ಅಧ್ಯಕ್ಷರಾಗಿದ್ದರು. ಕೊಡಗಿಗೆ ಪ್ರತ್ಯೇಕವಾದ ಶಾಸನ ಪರಿಷತ್ತು 1924ರಲ್ಲಿ ರಚನೆಗೊಂಡ ನಂತರದ ದಶಕಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅನೇಕ ತೀವ್ರತರ ಬದಲಾವಣೆಗಳನ್ನು ತರಲಾಯಿತು. ಚುನಾಯಿತ ಪ್ರತಿನಿಧಿಗಳಿಗೆ ಸ್ಥಳೀಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಹೆಚ್ಚಿನ ಮಹತ್ವ ನೀಡಲಾಯಿತು. ಜಿಲ್ಲಾ ಮಂಡಳಿಯು ರಚನೆಗೊಂಡ ನಂತರ ಪ್ರಾರಂಭದಿಂದಲೂ ಅದರ ಅಭಿವೃದ್ಧಿಪರ ಚಟುವಟಿಕೆಗಳು ಹೆಚ್ಚುತ್ತ ಹೋದವು ಮತ್ತು ಅದಕ್ಕನುಗುಣವಾಗಿ ಆದಾಯವೂ ಹೆಚ್ಚುತ್ತಾ ಹೋಯಿತು. 1907ರಲ್ಲಿ ಮಂಡಳಿಯ ಆದಾಯ ರೂ. 6,658 ಇದ್ದದ್ದು ಒಂದು ದಶಕದ ನಂತರ (1917) ರೂ. 94,772ಕ್ಕೆ ಏರಿ ಮುಂದಿನ ದಶಕದಲ್ಲಿ (1927) ರೂ. 1.38 ಲಕ್ಷಕ್ಕೆ ಮುಟ್ಟಿತು.

ಸುಂಕದ ಕಟ್ಟೆ, ಸಂತೆಮಾಳಗಳು ಹಾಗೂ ಹಾಯಿಗಡಗಳ (ಫೆರಿ) ನಿರ್ವಹಣೆ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ವ್ಯವಸ್ಥೆ, ಪ್ರವಾಸಿ ಬಂಗಲೆಗಳ ನಿರ್ವಹಣೆ,ಗ್ರಾಮೀಣ ಆಸ್ಪತ್ರೆ ಮುಂತಾದವುಗಳು ಜಿಲ್ಲಾ ಬೋರ್ಡಿನ ಆಡಳಿತ ಮತ್ತು ನಿಯಂತ್ರಣಕ್ಕೆ ಒಳಪಟ್ಟಿದ್ದವು. 1932ರ ಕೊನೆಯಲ್ಲಿ ಅಧಿಕಾರೇತರ ಸದಸ್ಯರನ್ನು ಜಿಲ್ಲಾ ಬೋರ್ಡಿನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಸಂಪ್ರದಾಯವು ಪ್ರಾರಂಭವಾಯಿತು. ಈ ಸಂಪ್ರದಾಯವು 1952ರ ವರೆಗೆ ಮುಂದುವರಿದು ನಂತರ 1952ರಲ್ಲಿ ಜಿಲ್ಲಾ ಬೋರ್ಡಿನ ಆಡಳಿತವನ್ನು ಕೊಡಗಿನ ಉಪ ವಿಭಾಗಾಧಿಕಾರಿಗೆ ವಹಿಸಲಾಯಿತು.

1949–50ರಲ್ಲಿ ಜಿಲ್ಲಾ ಬೋರ್ಡಿನ ಅಂಗರಚನೆಯಲ್ಲಿ ಬದಲಾವಣೆ ಆಯಿತು. ಅದರ ಅನ್ವಯ ಅದುವರೆಗೆ ಯುರೋಪಿಯನ್ನರಿಗೆ ಮೀಸಲಾಗಿದ್ದ ಎರಡು ಸ್ಥಾನಗಳನ್ನು ರದ್ದುಪಡಿಸಿ, ಜಿಲ್ಲಾ ಮಂಡಳಿಯ ಸದಸ್ಯರ ಸಂಖ್ಯೆಯನ್ನು 20 ರಿಂದ 18ಕ್ಕೆ ಇಳಿಸಲಾಯಿತು. 1950-51 ಮತ್ತು ಅದರ ಮುಂದಿನ ವರ್ಷದಲ್ಲಿ ಜಿಲ್ಲಾ ಬೋರ್ಡಿಗೆ ಸರ್ಕಾರ

ನೀಡಿದ ಅನುದಾನದ ಮೊತ್ತ ಕ್ರಮವಾಗಿ ರೂ. 3.05 ಲಕ್ಷ ಮತ್ತು ರೂ. 3.31 ಲಕ್ಷ ಎಂದು ಗೊತ್ತಾಗುವುದು. ಜಿಲ್ಲಾ ಬೋರ್ಡ್ ರದ್ದಾಗುವ ಪೂರ್ವದಲ್ಲಿ 1950-51ರಲ್ಲಿ ಅದರ ಒಟ್ಟು ಆದಾಯ ರೂ. 5.90 ಲಕ್ಷ ಆಗಿದ್ದರೆ ಖರ್ಚು ರೂ. 5 ಲಕ್ಷ ಆಗಿತ್ತು. ಅದರ ಮುಂದಿನ ವರ್ಷ (1951-52) ದಲ್ಲಿ ಆದಾಯ ವೆಚ್ಚಗಳು ಕ್ರಮವಾಗಿ ರೂ. 6.25 ಲಕ್ಷ ಮತ್ತು ರೂ. 5.36 ಲಕ್ಷ ಎಂದು ತಿಳಿದು ಬರುವುದು. ವರ್ಷದ ಒಟ್ಟು ವೆಚ್ಚದಲ್ಲಿ ರೂ. 3.19 ಲಕ್ಷ ಶಿಕ್ಷಣಕ್ಕೆ ವೆಚ್ಚವಾಗಿದ್ದರೆ, ಸಾರ್ವಜನಿಕ ಆರೋಗ್ಯಕ್ಕೆ ಮಾಡಿದ ವೆಚ್ಚ ರೂ. 90,000 ಎಂದು ತಿಳಿದು ಬರುವುದು. ಜಿಲ್ಲಾ ಬೋರ್ಡಿನ ಆದಾಯ ಮೂಲಗಳಲ್ಲಿ ಭೂಕಂದಾಯದ ಮೇಲಿನ ಉಪಕರ, ಮಾರುಕಟ್ಟೆ ಸುಂಕ, ಮನೆಗಂದಾಯ, ವೃತ್ತಿ ತೆರಿಗೆ, ಸರ್ಕಾರದ ಅನುದಾನ ಮತ್ತು ಶಾಲಾಶುಲ್ಕ ಮುಂತಾದವುಗಳು ಮುಖ್ಯವಾಗಿದ್ದವು.

### ಜಿಲ್ಲಾ ಬೋರ್ಡಿನ ಚಟುವಟಿಕೆಗಳು

ಗ್ರಾಮೀಣ ಪ್ರದೇಶದಲ್ಲಿನ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಜಿಲ್ಲಾ ಮಂಡಳಿಯ ಬಹುಮುಖ್ಯವಾದ ಹೊಣೆಯಾಗಿತ್ತು. ಕೊಡಗು ಜಿಲ್ಲಾ ಮಂಡಳಿಯ ಆಡಳಿತ ನಿರ್ವಹಣೆಗೆ ಒಳಪಟ್ಟ ಎಲ್ಲಾ ಶಾಲೆಗಳು ಕೊಡಗಿನ ವಿದ್ಯಾ ಇಲಾಖೆಗೆ ಅಧೀನವಾದವುಗಳಾಗಿದ್ದವು. 1931 ರಲ್ಲಿ ಜಿಲ್ಲಾ ಬೋರ್ಡಿನ ಶಾಲೆಗಳ ಸಂಖ್ಯೆ 88 ಇದ್ದು ವಿದ್ಯಾರ್ಥಿಗಳ ಸಂಖ್ಯೆ 6,071 ಇತ್ತು. ಜಿಲ್ಲಾ ಬೋರ್ಡಿನ ಆದಾಯದಲ್ಲಿ ಬಹುಭಾಗ ಶಿಕ್ಷಣ ಸಂಸ್ಥೆಗಳ ನಿರ್ವಹಣೆಗೆ ವ್ಯಯವಾಗುತ್ತಿತ್ತು. 1941-42 ರಲ್ಲಿ ಜಿಲ್ಲಾ ಬೋರ್ಡ್ 78 ಶಾಲೆಗಳನ್ನು ಹೊಂದಿದ್ದು, ಅವುಗಳಲ್ಲಿನ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಮತ್ತು ಶಿಕ್ಷಕರ ಸಂಖ್ಯೆ ಕ್ರಮವಾಗಿ 8,367 ಮತ್ತು 207 ಎಂದು ತಿಳಿದು ಬರುವುದು. 1942 ರಲ್ಲಿ ಸರ್ಕಾರದ ಅನುದಾನವನ್ನು ಒಳಗೊಂಡಂತೆ ಶಿಕ್ಷಣ ನಿರ್ವಹಣೆಗೆ ಜಿಲ್ಲಾ ಮಂಡಳಿ ಮಾಡಿದ ವೆಚ್ಚ ಸುಮಾರು ರೂ. 2.43 ಲಕ್ಷ ಆಗಿದ್ದರೆ, 1951–52 ರಲ್ಲಿ ಮಾಡಿದ ವೆಚ್ಚ ರೂ. 3.19 ಲಕ್ಷ ಆಗಿತ್ತು. ಪುರಸಭೆಗಳು ಮತ್ತು ಅಧಿಸೂಚಿತ ಪ್ರದೇಶ ಅಭಿವೃದ್ಧಿ ಸಮಿತಿಗಳು ತಮ್ಮ ಕಾರ್ಯವ್ಯಾಪ್ತಿ ಪ್ರದೇಶದಲ್ಲಿನ ಶಾಲಾ ನಿರ್ವಹಣಾ ವೆಚ್ಚವನ್ನು ಭರಿಸುತ್ತಿದ್ದವು. ಜಿಲ್ಲಾ ಬೋರ್ಡು ಗ್ರಾಮೀಣ ಪ್ರದೇಶದಲ್ಲಿ ಸಂಪರ್ಕ ಕಲ್ಪಿಸುವ ರಸ್ತೆಗಳ ನಿರ್ವಹಣೆಯಲ್ಲದೇ, ಸಾರ್ವಜನಿಕರು ಉಪಯೋಗಿಸಲು ಸೇತುವೆಗಳ ನಿರ್ಮಾಣ, ಹಾಯ್ಗಡಗಳ ದೋಣಿಗಳ ದುರಸ್ತಿ, ಕುಡಿಯುವ ನೀರಿನ ಬಾವಿಗಳ ನಿರ್ಮಾಣ ಮುಂತಾದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು. ಭಾಗಮಂಡಲ, ಹೆಬ್ಬಾಲೆ ಮತ್ತು ಕೊಡ್ಲಿಪೇಟೆಗಳಲ್ಲಿ ಬೋರ್ಡು ಆಯುರ್ವೇದ ವೈದ್ಯಶಾಲೆಗಳನ್ನು ತೆರೆದಿತ್ತು. 1953ರ ಏಪ್ರಿಲ್‌ನಲ್ಲಿ ಈ ಸಂಸ್ಥೆಗಳನ್ನು ಸರ್ಕಾರ ವಹಿಸಿಕೊಂಡಿತು.

1952 ಜೂನ್ 15 ರಂದು ಜಿಲ್ಲಾ ಮಂಡಳಿಯ ಚುನಾಯಿತ ಸದಸ್ಯರ ಅಧಿಕಾರ ಅವಧಿ ಮುಗಿದ ನಂತರ ಹೊಸದಾಗಿ ಚುನಾವಣೆಗಳನ್ನು ನಡೆಸಿ ಬೋರ್ಡುಗಳನ್ನು ಮುಂದುವರಿಸದೆ ಅವುಗಳನ್ನು ಕಾನೂನುಬದ್ಧವಾಗಿ 1953 ಏಪ್ರಿಲ್ ಒಂದರಿಂದ ರದ್ದುಗೊಳಿಸಲಾಯಿತು. ಈ ಮಧ್ಯದಲ್ಲಿ ಆಡಳಿತಾಧಿಕಾರಿಯನ್ನು ನೇಮಿಸಲಾಗಿತ್ತು; ಹಾಗೂ ರದ್ದುಗೊಳಿಸಲಾದ ಮಂಡಳಿಯ ಸಿಬ್ಬಂದಿಯನ್ನು ಸರ್ಕಾರಿ ನೌಕರರೆಂದು ಪರಿಗಣಿಸಲಾಯಿತು. ಸ್ವಾತಂತ್ರ್ಯಾನಂತರದ ದಶಕಗಳಲ್ಲಿ ಅವರಲ್ಲಿಯೂ ವಿಶೇಷವಾಗಿ ಕರ್ನಾಟಕ ರಾಜ್ಯ ನಿರ್ಮಾಣಗೊಂಡ ನಂತರ ಇತ್ತೀಚಿನ ಸುಮಾರು ನಾಲ್ಕು ದಶಕಗಳ ಅವಧಿಯಲ್ಲಿ ಪಂಚಾಯತ್ ರಾಜ್ ಪರಿಕಲ್ಪನೆಯಲ್ಲಿ ಅಮೂಲಾಗ್ರವಾದ ಬದಲಾವಣೆಗಳಾಗಿದ್ದು ಅವುಗಳನ್ನು ಮುಂದೆ ವಿವರಿಸಲಾಗಿದೆ.

## ಗ್ರಾಮ ಪಂಚಾಯತಿಗಳು

ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ವಿಕೇಂದ್ರಿಕೃತ ಆಡಳಿತ ವ್ಯವಸ್ಥೆಯಲ್ಲಿ ಏರಿಕೆಯ ಕ್ರಮದಲ್ಲಿ ಪ್ರಾಥಮಿಕ ಹಂತದ ಸಂಸ್ಥೆಯಾದ ಗ್ರಾಮಸಭೆ/ಗ್ರಾಮಪಂಚಾಯತಗಳು ಬಹು ಮುಖ್ಯವಾದವುಗಳು. ಗ್ರಾಮೀಣ ಜನರಿಗೆ ಆಡಳಿತ ವಿಕೇಂದ್ರಿಕರಣ ಮತ್ತು ಅಭಿವೃದ್ಧಿ ಕಾರ್ಯಗಳ ಫಲಶ್ರುತಿ ಪ್ರವಹಿಸುವುದು ಈ ಸಂಸ್ಥೆಗಳ ಮೂಲಕವೇ. ಗ್ರಾಮೀಣ ಆಡಳಿತ ವ್ಯವಸ್ಥೆಯ ಮೂಲ ನಾಡಿ ಗ್ರಾಮ ಪಂಚಾಯತಿ ಅಥವಾ ಗ್ರಾಮಸಭೆ. 1927ರಲ್ಲಿ ಕೊಡಗಿನಲ್ಲಿ ಗ್ರಾಮ ಸಭೆಗಳು/ಪಂಚಾಯತಿಗಳು ಪ್ರಪ್ರಥಮವಾಗಿ ಶಾಸನಬದ್ಧ ಸಂಸ್ಥೆಗಳಾಗಿ ಮೂಡಿಬಂದವು. ಸದರಿ ಕಾನೂನಿನನ್ವಯ ಪ್ರತೀ ಒಂದು ದೊಡ್ಡ ಗ್ರಾಮಕ್ಕೆ ಒಂದರಂತೆ ಅಥವಾ ಹಲವಾರು ಚಿಕ್ಕ ಚಿಕ್ಕ ಗ್ರಾಮಗಳ ಸಮೂಹಕ್ಕೆ ಒಂದರಂತೆ ಗ್ರಾಮಸಭೆಗಳು ರಚನೆಗೊಂಡವು. ಇವುಗಳ ಕಾರ್ಯನಿರ್ವಹಣೆಯನ್ನು ಗ್ರಾಮ ಪಂಚಾಯತಿಗಳು ನಡೆಸುತ್ತಿದ್ದವು. ಅನೇಕ ಗ್ರಾಮ ಸಭೆಗಳನ್ನು ಒಳಗೊಂಡಂತೆ ಪ್ರತೀ ಹೋಬಳಿಗೆ (ಸರ್ಕಲ್) ಒಂದು ನ್ಯಾಯ ಪಂಚಾಯತಿಯ ವ್ಯವಸ್ಥೆ ಇತ್ತು.

ಗ್ರಾಮಾಭಿವೃದ್ಧಿ ಯೋಜನೆಯ ಅನ್ವಯ 1949-50 ಮತ್ತು 1950-51ರಲ್ಲಿ ಶಿರಂಗಾಲ, ಹೆಬ್ಬಾಲೆ ಮತ್ತು ತೊರೆನೂರುಗಳಲ್ಲಿ ತೆರೆದ ಚರಂಡಿಗಳನ್ನು ಕಟ್ಟಿಸಲಾಯಿತು.

ಕೊಡಗು ಕರ್ನಾಟಕಕ್ಕೆ ಸೇರುವ ಪೂರ್ವದಲ್ಲಿ ಮತ್ತು ಕರ್ನಾಟಕ ಲೋಕಲ್ ಬೋರ್ಡ್ ಮತ್ತು ಗ್ರಾಮ ಪಂಚಾಯತಿ ಕಾನೂನು 1959 ಜಾರಿಯಲ್ಲಿ ಬರುವ ಪೂರ್ವದಲ್ಲಿ ಕೊಡಗಿನ ಪಂಚಾಯತ್ ರಾಜ್ ಸಂಸ್ಥೆಗಳು, ಕೊಡಗು ಪಂಚಾಯತ್ ರಾಜ್ ಕಾನೂನು 1956ರ ಅನ್ವಯ ಕಾರ್ಯ ನಿರ್ವಹಿಸುತ್ತಿದ್ದವು. 1955ರಲ್ಲಿ ಈ ಜಿಲ್ಲೆಯ 97 ಪಂಚಾಯತಿಗಳ ಒಟ್ಟು ಆದಾಯ ರೂ. 2.24 ಲಕ್ಷ ಆಗಿದ್ದರೆ ಅದರಲ್ಲಿ ಭೂಕಂದಾಯ ಮೂಲದಿಂದ ಸಂದಾಯವಾದ ಆದಾಯ ರೂ. 1.36 ಲಕ್ಷ ಆಗಿತ್ತು. ಸದರಿ ವರ್ಷದಲ್ಲಿ ಪಂಚಾಯತಿಗಳ ಒಟ್ಟು ವೆಚ್ಚ ರೂ. 54,000 ಆಗಿದ್ದರೆ ಅದರಲ್ಲಿ ರೂ. 23,800 ನಾಗರಿಕ ಸೌಲಭ್ಯಗಳಿಗೆ, ರೂ. 11,200 ಅಭಿವೃದ್ಧಿಪರ ಕಾರ್ಯಗಳಿಗೆ ವ್ಯಯವಾಗಿ ರೂ. 2,000 ಸಿಬ್ಬಂದಿ ವೆಚ್ಚವಾಗಿತ್ತೆಂದು ದಾಖಲೆಗಳಿಂದ ತಿಳಿದು ಬರುವುದು.

1959ರಲ್ಲಿ ಕರ್ನಾಟಕ ಲೋಕಲ್ ಬೋರ್ಡ್ ಮತ್ತು ಗ್ರಾಮ ಪಂಚಾಯತಿ ಕಾನೂನು ಜಾರಿಯಲ್ಲಿ ಬರುವವರೆಗೆ ರಾಜ್ಯದ ಇತರೆಡೆಯಂತೆ ಕೊಡಗಿನಲ್ಲಿಯೂ ಹಳೆಯ ವ್ಯವಸ್ಥೆ ಮುಂದುವರೆದು 1960ರಲ್ಲಿ ಮೂರು ಹಂತದ ಪಂಚಾಯತ್ ರಾಜ್ಯ ಸಂಸ್ಥೆಗಳ ವ್ಯವಸ್ಥೆ ರೂಢಿಯಲ್ಲಿ ಬಂದಿತು. ಅದರ ಅನ್ವಯ ಪ್ರತೀಯೊಂದು ಕಂದಾಯ ತಾಲೂಕಿಗೆ ಒಂದರಂತೆ ತಾಲೂಕಾಭಿವೃದ್ಧಿ ಮಂಡಳಿಗಳು, ಗ್ರಾಮಕ್ಕೆ ಅಥವಾ ಗ್ರಾಮ ಸಮೂಹಕ್ಕೆ (1500 ಜನಸಂಖ್ಯೆಯನ್ನು ಒಳಗೊಂಡ) ಒಂದರಂತೆ ಗ್ರಾಮಪಂಚಾಯತಿ, ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಅಭಿವೃದ್ಧಿಮಂಡಲಿಗಳು ರಚನೆಗೊಂಡವು. 1964ರಲ್ಲಿ ಗ್ರಾಮ ಪಂಚಾಯತಿಗಳ ಸಂಖ್ಯೆ 96 ಇದ್ದು ಅವುಗಳ ತಾಲೂಕುವಾರು ವಿಂಗಡನೆ ಈ ರೀತಿ ಇತ್ತು. ಮಡಿಕೇರಿ 24 ವೀರರಾಜಪೇಟೆ 40 ಹಾಗೂ ಸೋಮವಾರಪೇಟೆ 32. 1985-86ರಲ್ಲಿ ಗ್ರಾಮ ಪಂಚಾಯತಿಗಳ ಸಂಖ್ಯೆ 107ಕ್ಕೆ ಏರಿ, ಅವುಗಳ ತಾಲೂಕುವಾರ ಸಂಖ್ಯೆ ಹೀಗಿತ್ತು : ಮಡಿಕೇರಿ-29, ಸೋಮವಾರಪೇಟೆ-34, ವೀರರಾಜಪೇಟೆ-44. ಈ ವ್ಯವಸ್ಥೆಯಲ್ಲಿತಾಲೂಕು ಅಭಿವೃದ್ಧಿ ಮಂಡಳಿಗಳು ಹೆಚ್ಚು ಮಹತ್ವದ ಸಂಸ್ಥೆಗಳಾಗಿದ್ದವು. ಈ ವ್ಯವಸ್ಥೆಯು 1960 ರಿಂದ 1987ರ ವರೆಗೆ ಜಿಲ್ಲಾ ಪರಿಷತ್, ಮಂಡಲ ಪಂಚಾಯತಿ, ತಾಲೂಕು ಪಂಚಾಯತ್ ಸಮಿತಿ ರಚನೆಗೊಳ್ಳುವವರೆಗೆ ಸುಮಾರು 27 ವರ್ಷ ಮುಂದುವರಿಯಿತು.

**ತಾಲೂಕು ಅಭಿವೃದ್ಧಿ ಮಂಡಳಿ, ಸೋಮವಾರಪೇಟೆ**

1959ರ ಕರ್ನಾಟಕ ಸ್ಥಳೀಯ ಮಂಡಳಿಗಳು (ಲೋಕಲ್ ಬೋರ್ಡ್) ಮತ್ತು ಗ್ರಾಮ ಪಂಚಾಯತಿಗಳ ಕಾನೂನಿನ ಅನ್ವಯ ಕೊಡಗು ಜಿಲ್ಲೆಯಲ್ಲಿ ತಾಲೂಕಿಗೆ ಒಂದರಂತೆ ತಾಲೂಕು ಅಭಿವೃದ್ಧಿ ಮಂಡಳಿಗಳು ಪ್ರಪ್ರಥಮವಾಗಿ 1961ರಲ್ಲಿ ರಚನೆಗೊಂಡವು. ಹಿಂದಿನ ಮೂರು ಹಂತದ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ತಾಲೂಕು ಅಭಿವೃದ್ಧಿ ಮಂಡಳಿಗಳ ಪಾತ್ರ ತುಂಬಾ ಹಿರಿದಾಗಿತ್ತು. ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡ ಈ ಸಂಸ್ಥೆಗಳು ತಾಲೂಕಿನಲ್ಲಿ ಅಭಿವೃದ್ಧಿ ಚಟುವಟಿಕೆಗಳ ಪ್ರಮುಖವಾಹಿನಿಗಳಾಗಿದ್ದವು. 1987ರಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳು ರಚನೆಗೊಂಡನಂತರ ಈ ಸಂಸ್ಥೆಗಳು ಜಿಲ್ಲಾ ಪರಿಷತ್ ಅಧೀನ ಸಂಸ್ಥೆಗಳಾಗಿದ್ದು ಇವು ಕೇವಲ ಮಾರ್ಗದರ್ಶಿ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ಹಿಂದಿನ ತಾಲೂಕ ಅಭಿವೃದ್ಧಿ ಮಂಡಲಿಗಳ ಸ್ಥಾನದಲ್ಲಿ ಇಂದು ತಾಲೂಕು ಪಂಚಾಯತ್ ಸಮಿತಿಗಳನ್ನು ರಚಿಸಲಾಗಿದೆ. ಇಲ್ಲಿ ಉದಾಹರಣೆಯಾಗಿ ಸೋಮವಾರಪೇಟೆ ತಾ|| ಅಭಿವೃದ್ಧಿ ಮಂಡಳಿಯ ಚಟುವಟಿಕೆಗಳನ್ನು ಅವಲೋಕಿಸಿದೆ.

ತಾಲೂಕು ಅಭಿವೃದ್ಧಿ ಮಂಡಲಿ ಸೋಮವಾರಪೇಟೆಯು 1981ರಲ್ಲಿ 19 ಜನ ಪ್ರತಿನಿಧಿಗಳನ್ನು ಒಳಗೊಂಡಿತ್ತು. ಅವರಲ್ಲಿ 13 ಜನ ಸಾಮಾನ್ಯ ಚುನಾಯಿತ ಸದಸ್ಯರು, ಮೂವರು ಚುನಾಯಿತ ಹರಿಜನ, ಗಿರಿಜನ ಪ್ರತಿನಿಧಿಗಳು ಮತ್ತು ಇಬ್ಬರು ಮಹಿಳೆಯರು ಸೇರಿದ್ದರು. ಇನ್ನುಳಿದ ಒಬ್ಬರು (ಶಾಸಕರು) ಪದನಿಮಿತ್ತ ಸದಸ್ಯರಾಗಿದ್ದರು. ಮಂಡಲಿಯು 1961 ರಲ್ಲಿ ಮೊದಲಿಗೆ ರಚನೆಗೊಂಡಾಗ ಎರಡು ಮೀಸಲಾತಿ ಸ್ಥಾನಗಳೂ ಸೇರಿದಂತೆ ಸದಸ್ಯರ ಸಂಖ್ಯೆ 16 ಆಗಿತ್ತು. ಈ ತಾಲೂಕು ಅಭಿವೃದ್ಧಿ ಮಂಡಲಿಯ ಕಾರ್ಯವ್ಯಾಪ್ತಿ ಐದು ಪುರಸಭೆಗಳ ಹದ್ದನ್ನು ಹೊರತುಪಡಿಸಿ 98,182 ಹೆಕ್ಟೇರ್ ಇತ್ತು. ಮಂಡಲಿಯ ವ್ಯಾಪ್ತಿಯಲ್ಲಿ ಇದ್ದ ಮನೆಗಳ ಸಂಖ್ಯೆ 1981ರಲ್ಲಿ 27,219, ಜನಸಂಖ್ಯೆ 1,38,327. ಮಂಡಲಿಯ ವ್ಯಾಪ್ತಿಯಲ್ಲಿದ್ದ ಜನವಸತಿ ಗ್ರಾಮಗಳ ಸಂಖ್ಯೆ 126 ಆಗಿದ್ದರೆ ಪಂಚಾಯತಿಗಳ ಸಂಖ್ಯೆ 34 ಆಗಿತ್ತು. ಸದರಿ ಪಂಚಾಯತಿಗಳ ಒಟ್ಟು ಪ್ರತಿನಿಧಿಗಳ ಸಂಖ್ಯೆ 614 ಆಗಿತ್ತು. ಅವರಲ್ಲಿ 98 ಜನ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಪ್ರತಿನಿಧಿಗಳು, 70 ಮಹಿಳೆಯರು ಸೇರಿ

ದ್ವಾರೆ, ಸಾಮಾನ್ಯ ಸದಸ್ಯರ ಸಂಖ್ಯೆ 442 ಎಂದು ತಿಳಿದು ಬರುವುದು. ಕ್ಷೇತ್ರ ಅಭಿವೃದ್ಧಿ ಅಧಿಕಾರಿಯು (ಬಿ.ಡಿ.ಓ.) ಮಂಡಳಿಯ ಕಾರ್ಯನಿರ್ವಾಹಕರಾಗಿದ್ದರು.

ತಾಲೂಕು ಅಭಿವೃದ್ಧಿ ಮಂಡಲಿ ರದ್ದಾಗುವ ಪೂರ್ವದ ಮೂರು ವರ್ಷಗಳಲ್ಲಿ (84-85, 85-86, 86-87) ಮಂಡಲಿಯು ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಅನುಕ್ರಮ ವಾಗಿ ಮಾಡಿದ ವೆಚ್ಚ ಈ ರೀತಿ ಇತ್ತು. ರಸ್ತೆ ನಿರ್ಮಾಣ : 84-85 ರಲ್ಲಿ ರೂ. 3.31 ಲಕ್ಷ, 85-86 ರಲ್ಲಿ 4.25 ಲಕ್ಷ, 86-87 ರಲ್ಲಿ 4.23 ಲಕ್ಷ; ಒಡ್ಡುದಾರಿ, ಅಡ್ಡ ಗಾಲುವೆ ರಚನೆ : ರೂ. 12,256, ರೂ. 81,590 ಮತ್ತು ರೂ. 40,000; ಜನಾರೋಗ್ಯ ಮತ್ತು ನೈರ್ಮಲ್ಯ ವ್ಯವಸ್ಥೆ : ರೂ. 33,792, ರೂ. 55,000 ಮತ್ತು ರೂ. 60,000; ಕುಡಿಯುವ ನೀರಿನ ಬಾವಿಗಳು : ರೂ. 13,500, ರೂ. 28,691 ಮತ್ತು ರೂ. 70,000; ಸಣ್ಣ ನೀರಾವರಿ ಕಾಮಗಾರಿ ಮತ್ತು ಕೆರೆಗಳ ದುರಸ್ತಿ : ರೂ. 83,921, ರೂ. 59,703 ಮತ್ತು ರೂ 1 ಲಕ್ಷ. ಮಂಡಲಿಯು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳಿಗಾಗಿ ಶೇ. 18 ರಂತೆ ಖರ್ಚು ಮಾಡಿದ ಹಣ ರೂ. 1.64 ಲಕ್ಷ, 2.02 ಲಕ್ಷ ಮತ್ತು 1.76 ಲಕ್ಷ; ಸಾಮಾಜಿಕ ಶಿಕ್ಷಣ ಕಾರ್ಯ ಕ್ರಮ : ರೂ. 12,700, ರೂ. 52,950 ಮತ್ತು ರೂ. 16,000 ಎಂದು ವರದಿಗಳು ತಿಳಿಸುವವು. ಅಭಿವೃದ್ಧಿ ಮಂಡಲಿಯು 1983-84 ರಲ್ಲಿ ಮತ್ತು ಅದರ ಮುಂದಿನ ವರ್ಷ ಕಟ್ಟಿಸಿದ ಜನತಾ ಮನೆಗಳ ಸಂಖ್ಯೆ ಕ್ರಮವಾಗಿ 675 ಮತ್ತು 785 ಎಂದು ತಿಳಿದುಬರುವುದು. 1986-87 ರಲ್ಲಿ ಮಂಡಲಿಯು ತನ್ನ ವ್ಯಾಪ್ತಿಯಲ್ಲಿ 57 ಕಿ.ಮೀ. ಉದ್ದದ ರಸ್ತೆಯನ್ನು ಹೊಂದಿದ್ದು 5 ಬಾಲವಾಡಿಗಳನ್ನೂ ಒಂದು ಆಶ್ರಮ ಶಾಲೆಯನ್ನೂ ನಿರ್ವಹಿಸುತ್ತಿತ್ತು. 1984-85 ರಲ್ಲಿ ಈ ಮಂಡಲಿಯ ವ್ಯಾಪ್ತಿಯ 34 ಗ್ರಾಮ ಪಂಚಾಯತಿ ಗಳ ಒಟ್ಟು ಆದಾಯ ವೆಚ್ಚಗಳು ಕ್ರಮವಾಗಿ ರೂ. 3.93 ಲಕ್ಷ ಮತ್ತು ರೂ. 3.97 ಲಕ್ಷ; ಅದರ ಹಿಂದಿನ ವರ್ಷದ ಈ ಅಂಕೆಸಂಖ್ಯೆಗಳು ಕ್ರಮವಾಗಿ ರೂ. 3.04 ಲಕ್ಷ ಮತ್ತು ರೂ. 5.56 ಲಕ್ಷ ಆಗಿದ್ದವು. (ಈ ಮಂಡಲಿಗಳು 1981 ರಲ್ಲಿ ಆಯ್ಕೆಯಾಗಿದ್ದು 1985 ರಲ್ಲಿ ರದ್ದಾದವು; ಮುಂದೆ ಆಡಳಿತಾಧಿಕಾರಿಗಳು 1987ರ ವರೆಗೆ ಕಾರ್ಯನಿರ್ವಹಿಸಿದರು.)

ಸದ್ಯದ ತಾಲೂಕು ಪಂಚಾಯತ್ ಸಮಿತಿಯು 1987 ರಲ್ಲಿ ರಚನೆಗೊಂಡಿದ್ದು ಜಿಲ್ಲಾ ಪರಿಷತ್ತಿನ 11 ಜನ ಸದಸ್ಯರೂ ಸೇರಿದಂತೆ 43 ಜನ ಪ್ರತಿನಿಧಿಗಳನ್ನು ಹೊಂದಿರು ವುದು. ಒಟ್ಟು ಪ್ರತಿನಿಧಿಗಳಲ್ಲಿ ನಾಲ್ವರು ನಾಮಕರಣ ಸದಸ್ಯರು; ತಾ. ಪ. ಸಮಿತಿಯ ಅಧೀನದಲ್ಲಿ ಬರುವ ಮಂಡಲ ಪಂಚಾಯತಿಗಳ ಸಂಖ್ಯೆ 24. ತಾಲೂಕು ಪಂಚಾಯತ್ ಸಮಿತಿಯ ನೌಕರರ ಸಂಖ್ಯೆ 20.

1976–77 ಮತ್ತು 1985–86 ರಲ್ಲಿ ವಿವಿಧ ಶೀರ್ಷಿಕೆಗಳಲ್ಲಿ ಸೋಮವಾರಪೇಟೆ ತಾಲೂಕು ಅಭಿವೃದ್ಧಿ ಮಂಡಲಿಯ ಆದಾಯ ಮತ್ತು ಖರ್ಚು ಈ ಕೆಳಗಿನಂತೆ ಇತ್ತು.

(ಮೊತ್ತ ಲಕ್ಷ ರೂ.ಗಳಲ್ಲಿ)

ಆದಾಯ

| ಕ್ರ.ಸಂ. | ಆದಾಯ ಶೀರ್ಷಿಕೆ | 1976–77 | 1985–86 |
|---|---|---|---|
| 1. | ಸರ್ಕಾರದಿಂದ ಭೂಕಂದಾಯ ಹಸ್ತಾಂತರ | 2.65 | 6.17 |
| 2. | ಸ್ಥಳೀಯ ಮತ್ತು ಇತರ ತೆರಿಗೆಗಳು | 1.50 | 3.96 |
| 3. | ಮಂಡಲಿಯ ಆಸ್ತಿ ಮತ್ತು ಇತರ ಮೂಲಗಳಿಂದ ಆದಾಯ | 0.10 | 0.21 |
| 4. | ಇತರ ಆದಾಯಗಳು | 0.13 | 0.10 |
| 5. | ಅನುದಾನ ಮತ್ತು ಸಹಾಯಗಳು | 1.10 | 11.36 |
| 6. | ಋಣ ಸಾಲ ಶೀರ್ಷಿಕೆ | 0.30 | 5.32 |

ಖರ್ಚು

| ಕ್ರ.ಸಂ. | ಖರ್ಚಿನ ಶೀರ್ಷಿಕೆಗಳು | 1976–77 | 1985–86 |
|---|---|---|---|
| 1. | ಸಾಮಾನ್ಯ ಆಡಳಿತ | 0.75 | 2.20 |
| 2. | ಲೋಕೋಪಯೋಗಿ ಕಾರ್ಯನಿರ್ವಹಣೆ | 2.33 | 10.63 |
| 3. | ಜನಾರೋಗ್ಯ ಮತ್ತು ನೈರ್ಮಲ್ಯ | 0.05 | 0.50 |
| 4. | ಪೌರ ಸೌಕರ್ಯಗಳು (ದೀಪ, ನೀರು, ಇತ್ಯಾದಿ) | 0.01 | 0.01 |
| 5. | ಶಿಕ್ಷಣ | 0.15 | 0.15 |
| 6. | ಸಹಾಯ ಮತ್ತು ಸಹಾಯಕ ಅನುದಾನ | 0.41 | 0.70 |
| 7. | ಇತರ ವೆಚ್ಚಗಳು | 0.78 | 2.47 |
| 8. | ಋಣ ಸಾಲ ಶೀರ್ಷಿಕೆ | 1.60 | 14.70 |

## ಜಿಲ್ಲಾ ಪರಿಷತ್, ತಾಲೂಕು ಪಂಚಾಯತಿ ಸಮಿತಿ ಮತ್ತು ಮಂಡಲ ಪಂಚಾಯತಿಗಳು

ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ಅಧಿನಿಯಮ 1983, ಇದು 1985ರಲ್ಲಿ ರಾಷ್ಟ್ರಪತಿಯವರ ಅನುಮೋದನೆಯನ್ನು ಪಡೆದು 1987ರ ಜನವರಿಯಲ್ಲಿ ರಾಜ್ಯಾದ್ಯಂತ ಚುನಾವಣೆಗಳು ನಡೆದು, ಅದೇ ವರ್ಷ ಏಪ್ರಿಲ್ ಒಂದರಿಂದ ಕೊಡಗು ಜಿಲ್ಲೆಯೂ ಸೇರಿದಂತೆ ಜಿಲ್ಲಾ ಪರಿಷತ್, ತಾಲೂಕು ಪಂಚಾಯತ್ ಸಮಿತಿ ಮತ್ತು ಮಂಡಲ ಪಂಚಾಯತಿಗಳು ಕಾನೂನು ಬದ್ಧವಾಗಿ ಅಸ್ತಿತ್ವದಲ್ಲಿ ಬಂದವು. ಆದರೆ ನ್ಯಾಯ ಪಂಚಾಯತಿಗಳ ರಚನೆಯನ್ನು ಐದು ವರ್ಷಗಳವರೆಗೆ ಮುಂದಕ್ಕೆ ಹಾಕಲಾಯಿತು. ರಾಜ್ಯ ಪುನರ್ರಚನೆಯ ನಂತರ ಪ್ರಪ್ರಥಮವಾಗಿ 1959ರಲ್ಲಿ ತರಲಾಗಿದ್ದ ಹಾಗೂ ಸಮಗ್ರ ಕರ್ನಾಟಕಕ್ಕೆ ಅನ್ವಯವಾಗಿದ್ದ, 1959ರ ಲೋಕಲ್ ಬೋರ್ಡ್ (ಸ್ಥಳೀಯ ಮಂಡಳಿಗಳು) ಮತ್ತು ಗ್ರಾಮ ಪಂಚಾಯತಿಗಳ ಸಮಗ್ರ ಕಾನೂನು, ಸುಮಾರು 28 ವರ್ಷಗಳ ನಂತರ ರದ್ದಾಯಿತು. ಇದರಿಂದ ಈ ಹಿಂದೆ ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ಮೂರು ಹಂತಗಳ ಪಂಚಾಯತ್ ರಾಜ್ ಸಂಸ್ಥೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು. ಈ ಹೊಸ ಪಂಚಾಯತ್ ರಾಜ್ ಕಾನೂನು ಜನತೆಯ ಸ್ವಯಂ ಆಡಳಿತ ಮತ್ತು ಪರಮಾಧಿಕಾರ ತತ್ವಗಳನ್ನಾಧರಿಸಿ ಪ್ರಜಾಸತ್ತೆಯ ವಿಕೇಂದ್ರೀಕರಣದತ್ತ ಇಟ್ಟ ಒಂದು ದಿಟ್ಟ ಹೆಜ್ಜೆಯಾಗಿದೆ, ಎಂದು ಭಾವಿಸಲಾಗಿದೆ. ಅಧಿಕಾರ ವಿಕೇಂದ್ರೀಕರಣ ಅಥವಾ ಜನತೆಯ ಕೈಗೆ ಅಧಿಕಾರ ಇದು ಪಂಚಾಯತ್ ರಾಜ್‌ದ ಪ್ರಮುಖ ಉದ್ದೇಶ. ಈ ಹೊಸ ಪಂಚಾಯತ್ ರಾಜ್ ಪರಿಕಲ್ಪನೆಯು 'ಗ್ರಾಮಸ್ವರಾಜ್ಯ' ಮತ್ತು 'ಸುರಾಜ್ಯದ' ಕಲ್ಪನೆಯನ್ನು ನನಸಾಗಿಸುವಲ್ಲಿ, ಗ್ರಾಮೀಣ ಜೀವನದಲ್ಲಿ ಮೂಲಭೂತವಾಗಿ ಆರ್ಥಿಕ, ಸಾಮಾಜಿಕ, ರಾಜಕೀಯ, ಬದಲಾವಣೆಗಳನ್ನು ಜನತೆಯ ಹೆಚ್ಚಿನ ಸಹಭಾಗಿತ್ವದೊಂದಿಗೆ ರೂಪಿಸುವ ಮೂಲಕ ಕ್ರಾಂತಿಕಾರಿ ಬದಲಾವಣೆಗಳನ್ನು ತರುವ ದಿಶೆಯಲ್ಲಿ ಒಂದು ಹೊಸ ಪ್ರಯೋಗವೆಂದು ಭಾವಿಸಲಾಗಿದೆ.

ಆಡಳಿತದಲ್ಲಿ ವಿಕೇಂದ್ರೀಕರಣ, ಸ್ವಾಯತ್ತತೆ, ಆರ್ಥಿಕ ಸ್ವಾವಲಂಬನೆ, ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ನಿರೂಪಣೆ, ನಿರ್ವಹಣೆ ಮತ್ತು ಅನುಷ್ಠಾನದಲ್ಲಿ ಈ ಸಂಸ್ಥೆಗಳು ಹಿಂದಿನ ಸಂಸ್ಥೆಗಳಿಗೆ ಹೋಲಿಸಿದರೆ ವ್ಯಾಪಕ ಅಧಿಕಾರವನ್ನು ಹೊಂದಿರುವುವು. ಕೇವಲ ಬೃಹತ್ ಮತ್ತು ಮಧ್ಯಮ ಗಾತ್ರದ ನೀರಾವರಿ ಯೋಜನೆಗಳನ್ನು ಹೊರತುಪಡಿಸಿ, ಸುಮಾರು 44 ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಜಿಲ್ಲಾ ಪರಿಷತ್ತುಗಳಿಗೆ 1987ರಲ್ಲಿ ವಹಿಸಿಕೊಡಲಾಗಿದೆ. ಅವುಗಳಲ್ಲಿ ಬಹುಮುಖ್ಯವಾದವುಗಳು : ವ್ಯವಸಾಯ, ತೋಟಗಾರಿಕೆ, ಪಶುಸಂಗೋಪನೆ, ಚಿಕ್ಕನೀರಾವರಿ, ಗ್ರಾಮೀಣ ಅಭಿವೃದ್ಧಿ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ಗ್ರಾಮೀಣ

ಆರೋಗ್ಯ, ಹರಿಜನ, ಗಿರಿಜನ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ ಆಹಾರ ಮತ್ತು ನಾಗರಿಕ ಪೂರೈಕೆ ಇವೇ ಮುಂತಾದವುಗಳು.

ಈ ಹೊಸ ಬದಲಾವಣೆಯ ಪ್ರಕಾರ ಜಿಲ್ಲಾ ಪರಿಷತ್ತುಗಳು ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಗಳ ವ್ಯಾಪ್ತಿ ಬಹು ವ್ಯಾಪಕವಾಗಿದೆ. ಕೇಂದ್ರಸರ್ಕಾರ, ಅಥವಾ ರಾಜ್ಯವ್ಯಾಪ್ತಿಯ ರಾಜ್ಯನಿಗಮಗಳು, ಮತ್ತು ಹೊರಗಿನ ಆಡಳಿತ ನಿಯಂತ್ರಣಕ್ಕೆ ಒಳಪಟ್ಟ, ಎರಡು ಅಥವಾ ಹೆಚ್ಚಿನ ಜಿಲ್ಲೆಗಳಿಗೆ ಅನ್ವಯವಾಗುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೊರತುಪಡಿಸಿ, ತನ್ನ ಆಡಳಿತ ವ್ಯಾಪ್ತಿಯ ಜಿಲ್ಲೆಗೆ ಅನ್ವಯವಾಗುವ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಿಲ್ಲಾ ಪರಿಷತ್ತುಗಳು ಕೈಗೊಳ್ಳಬಹುದಾಗಿದೆ. ಜಿಲ್ಲಾ ಪರಿಷತ್ತು ಕಾನೂನು ಅನ್ವಯ ರೂ. 10 ಲಕ್ಷಕ್ಕೆ ಮೀರದಂತೆ ಯಾವುದೇ ಅಭಿವೃದ್ಧಿ ಕಾರ್ಯಕ್ರಮಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಪರಿಷತ್ತು ನೀಡಬಹುದಾಗಿದೆ. ಜಿಲ್ಲಾ ಪರಿಷತ್ತು ಅಧಿನಿಯಮ ಪ್ರಕರಣ 183 (2) ಪ್ರಕಾರ, ರಾಜ್ಯ ಸರ್ಕಾರವು ಜಿಲ್ಲಾ ಪರಿಷತ್ತಿನ ಯಾವುದೇ ಕೆಲಸ ಕಾರ್ಯಗಳನ್ನು, ಅಭಿವೃದ್ಧಿ ಚಟುವಟಿಕೆಗಳನ್ನು ಪರಿಶೀಲಿಸುವ, ವಿಮರ್ಶಿಸುವ, ಅಧಿಕಾರವನ್ನು ಹೊಂದಿರುತ್ತದೆ.

ಪುರಸಭೆಗಳು, ಒಳಗೊಂಡಿರುವ ಪ್ರದೇಶಗಳನ್ನು ಹೊರತುಪಡಿಸಿ ಉಳಿದೆಲ್ಲ ಪ್ರದೇಶಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವವು. ಪ್ರಜೆಗಳಿಂದ ನೇರವಾಗಿ ಆಯ್ಕೆಯಾದ ಆ ಜಿಲ್ಲೆಯ ಶಾಸಕರು ಹಾಗೂ ಜಿಲ್ಲೆಯನ್ನು (ಭಾಗಶಃ/ಪೂರ್ಣ) ಪ್ರತಿನಿಧಿಸುವ ಲೋಕಸಭಾ ಸದಸ್ಯರು ಜಿಲ್ಲಾ ಪರಿಷತ್ ಸದಸ್ಯರಾಗಿರುತ್ತಾರೆ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರು ಜಿಲ್ಲಾ ಪರಿಷತ್‌ನ ಸಹವರ್ತಿ ಸದಸ್ಯರಾಗಿರುವರು. 1971ರ ಜನಗಣತಿಯ ಅನ್ವಯ ಕೊಡಗು ಜಿಲ್ಲೆಯನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಿಗೆ ಪ್ರಜಾಸಂಖ್ಯೆ 28,000 ಅಥವಾ ಅದರ ಭಾಗಕ್ಕಾಗಿ ಒಬ್ಬ ಸದಸ್ಯರಂತೆ ಚುನಾಯಿಸಲಾಗಿದೆ. ಕೊಡಗು ಜಿಲ್ಲೆಯ ಮಟ್ಟಿಗೆ 12,000 ಅಥವಾ ಅದರ ಭಾಗಕ್ಕಾಗಿ ಒಬ್ಬರಂತೆ ಸದಸ್ಯರನ್ನು ಚುನಾಯಿಸಲಾಗಿದೆ (ಚಿಕ್ಕಮಗಳೂರು ಸೇರಿ ಈ ಎರಡು ಜಿಲ್ಲೆಗಳಿಗೆ ಈ ಮಿತಿ ಹಾಕಲಾಗಿದೆ). ಜಿಲ್ಲಾ ಪರಿಷತ್ತಿನ ಒಟ್ಟು ಸ್ಥಾನಗಳಲ್ಲಿ ಶೇ. 25 ಭಾಗ ಮಹಿಳೆಯರಿಗೆ ಮೀಸಲಿಡಲಾಗುವುದು. ಈ ಮಹಿಳೆಯರಲ್ಲಿ ಒಂದು ಸ್ಥಾನವನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಮಹಿಳೆಯರಿಗೆ ಮೀಸಲಿಡಬೇಕು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೂ ಶೇ. 18ಕ್ಕೆ ಕಡಿಮೆ ಇರದಂತೆ ಮೀಸಲಾತಿ ಉಂಟು. ಹೊಸ ಪಂಚಾಯತ್ ರಾಜ್ ವ್ಯವಸ್ಥೆಯು ಆಡಳಿತಾತ್ಮಕವಾಗಿ ಇಳಿಕೆಯ ಕ್ರಮದಲ್ಲಿ ಮೂರು ಹಂತದ, ರಚನೆಯಲ್ಲಿ ಒಂದಕ್ಕೊಂದು ಭಿನ್ನವಾಗಿದ್ದರೂ ಅಭಿವೃದ್ಧಿ ಚಟುವಟಿಕೆಗಳಲ್ಲಿ ಮತ್ತು ಆಡಳಿತ ವಿಕೇಂದ್ರೀಕರಣದಲ್ಲಿ ಪರಸ್ಪರ ಪೂರಕವಾದ ಸಂಸ್ಥೆಗಳಿಂದ ಹೆಣೆಯಲ್ಪಟ್ಟಿದೆ. ಅವುಗಳೆಂದರೆ :— 1) ಜಿಲ್ಲಾ ಪರಿಷತ್, 2) ಮಂಡಲ ಪಂಚಾಯತ್, 3) ಗ್ರಾಮಸಭೆ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳ ಮಧ್ಯದಲ್ಲಿ ತಾಲೂಕಿಗೆ ಒಂದರಂತೆ ತಾವೇ ಕಾರ್ಯ ನಿರ್ವಹಿಸದ, ನೇರ ಚುನಾಯಿತ ಪ್ರತಿನಿಧಿಗಳನ್ನು ಹೊಂದಿರದ ತಾಲೂಕು ಪಂಚಾಯತ್ ಸಮಿತಿಗಳು ಇರುವುವು. ಹಿಂದಿನ ವ್ಯವಸ್ಥೆಯ ತಾಲೂಕು ಅಭಿವೃದ್ಧಿ ಮಂಡಲಗಳ ಸ್ಥಾನದಲ್ಲಿ ಈ ಸಂಸ್ಥೆಗಳನ್ನು ರೂಪಿಸಲಾಗಿದೆ. ಈ ಎಲ್ಲಾ ಸಂಸ್ಥೆಗಳ ಚುನಾಯಿತ ಸದಸ್ಯರ ಅಧಿಕಾರಾವಧಿ 5 ವರ್ಷಗಳು ಮತ್ತು ಪಕ್ಷಾಂತರ ನಿಷೇಧ ಕಾಯಿದೆ 1987 ಈ ಸಂಸ್ಥೆಗಳಿಗೂ ಅನ್ವಯಿಸುವುದು. ಮುಂದಿನ ಪುಟಗಳಲ್ಲಿ ಪ್ರತೀಯೊಂದು ಸಂಸ್ಥೆಯ ಕಾರ್ಯ ಚಟುವಟಿಕೆ, ಅಂಗರಚನೆ, ನೀತಿ ನಡವಳಿಕೆಯನ್ನು ಕುರಿತಂತೆ ಸಂಕ್ಷಿಪ್ತವಾಗಿ ವಿವರಣೆ ನೀಡಲಾಗಿದೆ.

## ಜಿಲ್ಲಾ ಪರಿಷತ್

ಇಂದಿನ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಜಿಲ್ಲಾ ಪರಿಷತ್‌ಗಳು ಹಿಂದಿನ ಜಿಲ್ಲಾ ಬೋರ್ಡ್ ಮತ್ತು 'ಜಿಲ್ಲಾ ಅಭಿವೃದ್ಧಿ ಸಮಿತಿ' ಇವುಗಳಿಗೆ ಹೋಲಿಸಿದರೆ ಜಿಲ್ಲೆಯ ಸರ್ಕಾರದಂತೆ ಕಾರ್ಯ ನಿರ್ವಹಿಸುವ ವ್ಯಾಪಕವಾದ ಅಧಿಕಾರ ಹೊಂದಿವೆ. ಜಿಲ್ಲಾ ಪರಿಷತ್‌ಗಳು ನೇರವಾಗಿ ಗ್ರಾಮಸಭೆಯ ಮತದಾರರಿಂದ ಆಯ್ಕೆಯಾದ ಸದಸ್ಯರನ್ನು ಒಳಗೊಂಡಿರುವುವು. ಕೊಡಗು ಜಿಲ್ಲೆಯನ್ನು ವಿಶೇಷ ಜಿಲ್ಲೆಯೆಂದು ಪರಿಗಣಿಸಿ ಅಲ್ಲಿ ಪ್ರತೀ 12,000 ಜನಸಂಖ್ಯೆಗೆ ಒಬ್ಬರಂತೆ ಜಿಲ್ಲಾ ಪರಿಷತ್ ಸದಸ್ಯರನ್ನು ಆಯ್ಕೆ ಮಾಡಲಾಗಿದೆ. ಜಿಲ್ಲಾ ಪರಿಷತ್‌ಗಳು ಚುನಾಯಿತ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಹೊಂದಿದ್ದು ಅವರು ಗೌರವ ಮತ್ತು ಮಾಸಿಕ ವೇತನದಲ್ಲಿ ಕ್ರಮವಾಗಿ ರಾಜ್ಯಮಟ್ಟದ ಸಚಿವರ ಮತ್ತು ಉಪಸಚಿವರ ಸ್ಥಾನಮಾನವನ್ನು ಹೊಂದಿರುವರು. ಪರಿಷತ್ತಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ 'ಮುಖ್ಯ ಕಾರ್ಯದರ್ಶಿ' (ಹಿರಿಯ ಐ.ಎ.ಎಸ್. ದರ್ಜೆ) ; ಇವರಿಗೆ ಸಹಾಯಕರಾಗಿ ಉಪ ಕಾರ್ಯದರ್ಶಿಗಳು, ಮುಖ್ಯ ಲೆಕ್ಕಾಧಿಕಾರಿ ಹಾಗೂ ಇನ್ನಿತರ ಸಿಬ್ಬಂದಿ ಇರುತ್ತದೆ. ಎ ಮತ್ತು ಬಿ

ವರ್ಗದ ಸೇವೆಗಳಿಗೆ ಸಂಬಂಧಿಸಿದಂತೆ, ಐ.ಎ.ಎಸ್. ದರ್ಜೆಯ ಸಿಬ್ಬಂದಿಯನ್ನು ಸರ್ಕಾರವು ನಿಯೋಜನೆಯ ಮೇರೆಗೆ ಜಿಲ್ಲಾ ಪರಿಷತ್‌ಗಳಲ್ಲೂ ಕಾರ್ಯ ನಿರ್ವಹಿಸಲು ವ್ಯವಸ್ಥೆ ಮಾಡುವುದು. ಪ್ರಕರಣ 182, 184 ಮತ್ತು 185ರ ಅನ್ವಯ ವಿಪುಲ ಅಧಿಕಾರವನ್ನು ಜಿಲ್ಲಾ ಪರಿಷತ್ತುಗಳಿಗೆ ವರ್ಗಾಯಿಸಲಾಗಿದೆ. ಈ ಹಿಂದಿನ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗಳು (ಡಿ.ಆರ್.ಡಿ.ಎಸ್.) ತಮ್ಮ ಆಸ್ತಿ ಮತ್ತು ಹೊಣೆಗಾರಿಕೆಯೊಂದಿಗೆ ಜಿಲ್ಲಾ ಪರಿಷತ್‌ನಲ್ಲಿ ವಿಲೀನಗೊಂಡಿವೆ.

ಜಿಲ್ಲಾ ಪರಿಷತ್ತಿನ ಆದಾಯದ ಮೂಲಗಳು ಮುಖ್ಯವಾಗಿ ರಾಜ್ಯ ಸರ್ಕಾರದಿಂದ ವರ್ಗಾಯಿಸಲಾದ ಕ್ರೋಡೀಕೃತ ನಿಧಿ, ಸಹಾಯಧನ, ಕಾರ್ಯ ನಿಯೋಜನೆ ಸಾಲಗಳು, ಸರ್ಕಾರದಿಂದ ನೀಡಲಾದ ಕೊಡುಗೆಗಳು, ಲೆವಿ ಮತ್ತು ದಂಡಗಳು, ಭೂಮಿಯಿಂದ ಬರುವ ದೇಣಿಗೆ, ಆಸ್ತಿಗಳು, ಕೊಡುಗೆ ನೀಡಲಾದ ಮೊತ್ತದ ಮೇಲೆ ಬರುವ ಬಡ್ಡಿ ಮತ್ತು ಲಾಭ ಇತ್ಯಾದಿಗಳಿರುತ್ತವೆ.

ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳ ಸಮಗ್ರ ಹಣಕಾಸು ವ್ಯವಸ್ಥೆಯನ್ನು ಕುರಿತಂತೆ ವರದಿ ಮಾಡಲು ಸರ್ಕಾರವು ಆರ್ಥಿಕ ಆಯೋಗವನ್ನು ನೇಮಿಸಿದೆ. ಜಿಲ್ಲಾ ಪರಿಷತ್ತುಗಳು ಹಲವು ನಿರ್ದಿಷ್ಟಪಡಿಸಿದ ಅಭಿವೃದ್ಧಿ ಕಾರ್ಯಗಳನ್ನು (ಒಂದು ಮಂಡಲಕ್ಕಿಂತ ಹೆಚ್ಚಾಗಿ ಅನ್ವಯಿಸುವಲ್ಲಿ) ತಾವೇ ಕೈಗೊಳ್ಳಬಹುದು. ಕೆಲವೊಂದು ಅಭಿವೃದ್ಧಿ ಕಾರ್ಯಗಳನ್ನು ಮಂಡಲದ ಸಲಹೆಯಂತೆ ಕೈಗೊಳ್ಳಬಹುದು. ಸಮರ್ಪಕ ಆಡಳಿತ ನಿರ್ವಹಣೆ ಮತ್ತು ಸೂಕ್ತ ನಿಯಂತ್ರಣಕ್ಕೆ ಸಹಾಯಕವಾಗುವಂತೆ ಜಿಲ್ಲಾ ಪರಿಷತ್ತುಗಳೂ ಸಹ ಪುರಸಭೆಗಳಂತೆ 9 ಸ್ಥಾಯಿ ಸಮಿತಿಗಳನ್ನು ಹೊಂದಿರಬಹುದಾಗಿದೆ. ಇದರಲ್ಲಿ ಅಧ್ಯಕ್ಷರೂ, ಉಪಾಧ್ಯಕ್ಷರೂ ಸೇರಿದಂತೆ ಸದಸ್ಯರ ಸಂಖ್ಯೆ ಆರಕ್ಕಿಂತ ಹೆಚ್ಚಿರಕೂಡದು. ಜಿಲ್ಲಾ ಪರಿಷತ್ತುಗಳಿಗೆ ಮಂಡಲ ಪಂಚಾಯತಿಗಳ ಕಾರ್ಯ ವೀಕ್ಷಿಸುವ, ಮತ್ತು ಅವುಗಳ ಕಾರ್ಯಗಳ ಮೇಲೆ ನಿಯಂತ್ರಣ ತರುವ ವ್ಯಾಪಕ ಅಧಿಕಾರವನ್ನು ಕಾನೂನಿನಲ್ಲಿ ಅಳವಡಿಸಲಾಗಿದೆ. ಜಿಲ್ಲಾ ಪರಿಷತ್, ಮಂಡಲ ಪಂಚಾಯತಿಗಳ ರಚನೆಯಿಂದ ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದೊಂದಿಗೆ, ಸ್ವಾವಲಂಬನೆ, ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ನ್ಯಾಯಿಕ ಸೌಲಭ್ಯಗಳನ್ನು ಒದಗಿಸುವ ಪ್ರಯತ್ನದಲ್ಲಿ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟ ರಾಜ್ಯಗಳಲ್ಲಿ ಕರ್ನಾಟಕವು ಸೇರಿದೆ ಎಂದು ಹೇಳಬಹುದು.

## ಹೊಸ ಸಂಸ್ಥೆಗಳ ಮೌಲ್ಯಮಾಪನ

ಹೊಸ ಪಂಚಾಯತ್ ರಾಜ್ ವ್ಯವಸ್ಥೆ ಕಾರ್ಯಗತವಾಗಿ ಎರಡು ವರ್ಷದ ನಂತರ (1989ರಲ್ಲಿ) ಸರ್ಕಾರವು ಈ ವ್ಯವಸ್ಥೆ ಹೇಗೆ ಕೆಲಸ ಮಾಡುತ್ತಿದೆ ಮತ್ತು ಅದನ್ನು ಒಂದು ದೃಢವಾದ ನೆಲೆಗಟ್ಟಿನ ಮೇಲೆ ನಿಲ್ಲಿಸಲು ರೂಪಿಸಬೇಕಾದ ಪರಿಸರ ಅಥವಾ ಅಂಗರಚನೆಯ ಮಾರ್ಪಾಡಿನಲ್ಲಿ ಸೇರಿಸಬೇಕಾದ ಅಂಶಗಳು ಯಾವುವು, ಎಂಬುದನ್ನು ಪರಿಶೀಲಿಸಲು ಮತ್ತು ಈಗಾಗಲೇ ಆಗಿರುವ ಕಾರ್ಯಗಳ ಮೌಲ್ಯಮಾಪನ ಮಾಡಲು ಕೃಷ್ಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸರ್ಕಾರವು ಮೂರು ಜನ ಸದಸ್ಯರನ್ನೊಳಗೊಂಡ ಸಮಿತಿಯನ್ನು ನೇಮಿಸಿತ್ತು. ಈ ಸಮಿತಿಯು ವರದಿ ಮಾಡಿರುವಂತೆ "ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯತಿಗಳು ಸಾಧಿಸಿದ ಪ್ರಗತಿಯು ಒಟ್ಟಾರೆ ಪರಿಣಾಮವನ್ನುಂಟು ಮಾಡಿದೆ ಎಂದು ನಿಸ್ಸಂದಿಗ್ಧವಾಗಿ ಹೇಳಬಯಸುತ್ತೇವೆ. ಈ ವರದಿಯಲ್ಲಿ ಸೂಚಿಸಲಾದ ಮಾರ್ಪಾಡುಗಳನ್ನು ಮಾಡುವುದರಿಂದ ಪ್ರಜಾಸತ್ತೆಯ ಪರಿಣಾಮಕಾರಿ ವಿಕೇಂದ್ರೀಕರಣದ ವರೆಗಿನ ಪ್ರಗತಿಯು ತ್ವರಿತಗೊಳ್ಳುವುದೆಂದೂ ಕೂಡಾ ನಂಬಿದ್ದೇವೆ".

ಕಳೆದ ಐದು ವರ್ಷಗಳಲ್ಲಿ ಜಿಲ್ಲಾ ಪರಿಷತ್ ಕಾನೂನಿಗೆ ಹಲವಾರು ಸೂಕ್ತ ತಿದ್ದುಪಡಿಗಳನ್ನು ತರಲಾಗಿದೆ. 1987ರಿಂದ ಐದು ವರ್ಷಗಳ ಆಳ್ವಿಕೆ ಕೊನೆಗೊಂಡ ನಂತರ 1992ರ ಜನವರಿಯಲ್ಲಿ ಸರ್ಕಾರವು ಜಿಲ್ಲಾ ಪರಿಷತ್, ಮಂಡಲ ಪಂಚಾಯತಿಗಳ ಚುನಾಯಿತ ಆಡಳಿತ ಮಂಡಳಿಗಳನ್ನು ರದ್ದುಪಡಿಸಿ, ಅವುಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಿದೆ.

## ತಾಲೂಕು ಪಂಚಾಯತಿ ಸಮಿತಿಗಳು

ಜಿಲ್ಲಾ ಪರಿಷತ್ ಕಾನೂನಿನಲ್ಲಿ ಸೂಚಿಸಿದಂತೆ ತಾಲೂಕಿಗೆ ಒಂದರಂತೆ ತಾಲೂಕು ಪಂಚಾಯತಿ ಸಮಿತಿಗಳನ್ನು ರಚಿಸಲು ಅವಕಾಶವಿದೆ. ಈ ಸಂಸ್ಥೆಗಳು ಮಂಡಲ ಪಂಚಾಯತಿ ಮತ್ತು ಜಿಲ್ಲಾ ಪರಿಷತ್‌ಗಳ ನಡುವೆ ಸಂಪರ್ಕ ಸೇತುವೆಯಂತೆ, ಸಲಹಾ ಮಂಡಲಿಯಂತೆ ಕಾರ್ಯನಿರ್ವಹಿಸುವುವು. ಈ ಸಮಿತಿಯಲ್ಲಿ ಆಯಾ ತಾಲೂಕನ್ನು ಪ್ರತಿನಿಧಿಸುವ ಜಿಲ್ಲಾ ಪರಿಷತ್ತಿನ ಸದಸ್ಯರು, ತಾಲೂಕನ್ನು ಪೂರ್ಣ ಅಥವಾ ಭಾಗಶಃ ಪ್ರತಿನಿಧಿಸುವ ವಿಧಾನ ಮಂಡಳದ ಸದಸ್ಯರು ಹಾಗೂ ತಾಲೂಕಿನಲ್ಲಿರುವ ಮಂಡಲ ಪಂಚಾಯತಿಗಳ ಪ್ರಧಾನರು ಇರುವರು. ಪ್ರಾಥಮಿಕ ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರು, ತಾಲೂಕಿನ ಸಹಕಾರಿ ಕೃಷಿ

ಮಾರುಕಟ್ಟೆ ಸಂಘದ ಅಧ್ಯಕ್ಷರೂ ಅಲ್ಲದೇ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳೆಯರನ್ನು ಪ್ರತಿನಿಧಿಸುವಂತೆ ಒಟ್ಟು 5 ಜನರನ್ನು ಸಮಿತಿಗೆ ಸಹವರ್ತಿ ಸದಸ್ಯರನ್ನಾಗಿ (ಕೋ-ಆಫ್ಟ್) ಮಾಡಿಕೊಳ್ಳಬಹುದು. ಇವರು ಜಿಲ್ಲಾ ಪರಿಷತ್ತಿನಿಂದ ಅನುಮೋದನೆಗೊಂಡವರಾಗಿರುವರು. ತಾಲೂಕಿನ ಹೆಚ್ಚು ಭಾಗವನ್ನು ಪ್ರತಿನಿಧಿಸುವ ಶಾಸಕರು ಅಧ್ಯಕ್ಷರಾಗಿ, ಶಾಸಕರು ಇಲ್ಲದೇ ಇರುವಲ್ಲಿ ಸದಸ್ಯರ ಪೈಕಿ ಒಬ್ಬರನ್ನು ಸಮಿತಿಯ ಅಧ್ಯಕ್ಷರಾಗಿ ಚುನಾಯಿಸಲಾಗುವುದು. ಅಧ್ಯಕ್ಷ ಮತ್ತು ಸದಸ್ಯರಿಗೆ ಗೊತ್ತುಪಡಿಸಿದ ರೀತಿಯಲ್ಲಿ ಭತ್ಯೆಗಳನ್ನು ಕೊಡಲಾಗುವುದು. ಕ್ಷೇತ್ರಾಭಿವೃದ್ಧಿ ಅಧಿಕಾರಿ (ಬಿ.ಡಿ.ಓ.) ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುವರು. ತಾಲೂಕು ಪಂಚಾಯತಿ ಸಮಿತಿಯ ಕಾರ್ಯಗಳು ಹೀಗಿವೆ : ಮಂಡಲ ಪಂಚಾಯತಿಯ ಕಾರ್ಯನಿರ್ವಹಿಸಲು ಅವುಗಳಿಗೆ ಸಲಹೆ ಸೂಚನೆ ಕೊಡುವುದು, ತಾಲೂಕಿನಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳು ಮತ್ತು ಅಭಿವೃದ್ಧಿ ಯೋಜನೆಗೆ ಜಿಲ್ಲಾ ಪರಿಷತ್ತು ನಿರ್ದಿಷ್ಟ ಪಡಿಸಿದ ಅಧಿಕಾರಗಳನ್ನು ಚಲಾಯಿಸುವುದು, ತಾಲೂಕಿನಲ್ಲಿರುವ ಜಿಲ್ಲಾ ಪರಿಷತ್ತಿನ ಸ್ಥಿರ ಸ್ವತ್ತು ಮತ್ತು ಕಾಮಗಾರಿಗಳನ್ನು ಪರಿಶೀಲಿಸುವುದು, ಮಂಡಲ ಪಂಚಾಯತಿಗಳ ಕೆಲಸಗಳನ್ನು ಪರಿಶೀಲಿಸುವುದು, ಅವುಗಳಿಗೆ ಮಾರ್ಗದರ್ಶನ ನೀಡುವುದು, ಒಂದಕ್ಕಿಂತ ಹೆಚ್ಚು ಮಂಡಲಗಳ ಕೆಲಸಗಳಲ್ಲಿ ಸಮನ್ವಯ ಮಾಡುವುದು, ಜಿಲ್ಲಾ ಪರಿಷತ್ತು ಮತ್ತು ಸರ್ಕಾರವು ವಹಿಸಿಕೊಡಬಹುದಾದ ಇತರ ಕೆಲಸಗಳನ್ನು ವಹಿಸಿಕೊಳ್ಳುವುದು. ತಾಲೂಕು ಪಂಚಾಯತಿ ಸಮಿತಿಯು ತನ್ನ ಕಾರ್ಯವನ್ನು ನಿರ್ವಹಿಸುವಲ್ಲಿ ತಗಲುವ ವೆಚ್ಚವನ್ನು ಜಿಲ್ಲಾ ಪರಿಷತ್ತು ಭರಿಸುವುದು.

## ಮಂಡಲ ಪಂಚಾಯತಿಗಳು

ಸದ್ಯದ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೂಲ ಮತ್ತು ಕೆಳ ಹಂತದಲ್ಲಿ ಕಾರ್ಯ ನಿರ್ವಹಿಸುವ ಮಂಡಲ ಪಂಚಾಯತಿಗಳ ಪಾತ್ರ ಬಹು ಮಹತ್ವದ್ದಾಗಿದ್ದು ಆಡಳಿತ ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ಕಾರ್ಯಗಳ ಫಲಶ್ರುತಿಯನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಈ ಸಂಸ್ಥೆಗಳು ಜನಪದದ ಪ್ರಮುಖ ವಾಹಿನಿಗಳಾಗಿವೆ. 1971ರ ಜನಗಣತಿಯ ಪ್ರಕಾರ 8,000 ದಿಂದ 12,000 ಪ್ರಜಾಸಂಖ್ಯೆ ಇರುವ ಗ್ರಾಮಗಳ ಸಮುದಾಯಕ್ಕೆ ಒಂದು ಮಂಡಲ ಪಂಚಾಯತಿಯನ್ನು ರಚಿಸಲು ಕಾಯ್ದೆಯಡಿಯಲ್ಲಿ ಅವಕಾಶವಿದೆ. ಆದರೆ ಕೊಡಗನ್ನು ಒಳಗೊಂಡಂತೆ ಕೆಲವು ಮಲೆನಾಡು ಜಿಲ್ಲೆಗಳಲ್ಲಿ 4,000 ಪ್ರಜಾಸಂಖ್ಯೆಯನ್ನು ಒಳಗೊಂಡಂತೆ ಒಂದು ಮಂಡಲ ಪಂಚಾಯತಿಯನ್ನು ರಚಿಸುವ ವಿಶೇಷ ಸೌಲಭ್ಯವನ್ನು ಒದಗಿಸಲಾಗಿದೆ. ಪ್ರತೀ ನಾಲ್ಕುನೂರು ಪ್ರಜಾಸಂಖ್ಯೆಗೆ ಒಬ್ಬರಂತೆ ಸದಸ್ಯರಿದ್ದು, ಒಟ್ಟು ಪ್ರತಿನಿಧಿಗಳಲ್ಲಿ ಶೇ. 25ರಷ್ಟು ಮಹಿಳೆಯರಿಗೆ ಸ್ಥಾನಗಳ ಮೀಸಲಾತಿ ಉಂಟು. ಅನುಸೂಚಿತ ಪಂಗಡ/ಜಾತಿಗಳಿಗೆ ಮೀಸಲಾತಿ ಇದ್ದು ಒಟ್ಟು ಪ್ರತಿನಿಧಿಗಳ ಸಂಖ್ಯೆಯಲ್ಲಿ ಶೇ.18 ರಷ್ಟಕ್ಕಿಂತ ಕಡಿಮೆ ಇರಕೂಡದು. ಇದು ಮಂಡಲ ಪಂಚಾಯತಿಯ ರಚನೆಯಲ್ಲಿ ಗಮನಿಸಬೇಕಾದ ಅಂಶ. ಮಂಡಲ ಪಂಚಾಯತಿಗಳಿಗೆ ಕಾನೂನಿನಲ್ಲಿ ಸಾಕಷ್ಟು ಸ್ವಾಯತ್ತತೆಯನ್ನು ನೀಡಿರುವುದಲ್ಲದೆ ಅವುಗಳು "ಮಂಡಲ ಯೋಜನೆ I" ಅನುಸಾರ ನಿರ್ದಿಷ್ಟಪಡಿಸಿದ ಅಭಿವೃದ್ಧಿ ಯೋಜನೆಗಳನ್ನು ಸ್ವತಂತ್ರವಾಗಿ ತನ್ನ ಸಂಪನ್ಮೂಲಗಳಿಂದ ಮಂಡಲ ವ್ಯಾಪ್ತಿಯಲ್ಲಿ ಕೈಗೊಳ್ಳಬಹುದಾಗಿದೆ.

ಮಂಡಲದ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ನಡೆಯಲು ಸಹಾಯಕವಾಗುವಂತೆ ಪ್ರಧಾನ, ಉಪ ಪ್ರಧಾನರೂ ಸೇರಿ, ಮೂವರು ಸದಸ್ಯರಿಗಿಂತ ಕಡಿಮೆ ಇಲ್ಲದ, ಐದು ಜನಕ್ಕಿಂತ ಹೆಚ್ಚಾಗದ, ಮೂರು ಉಪ ಸಮಿತಿಗಳನ್ನು (ಸಾಮಾಜಿಕ ನ್ಯಾಯ, ಉತ್ಪಾದನೆ ಮತ್ತು ಯೋಗಕ್ಷೇಮ) ಪ್ರತೀ ಮಂಡಲವೂ ರಚಿಸಲು ಕಾನೂನು ಸೂಚಿಸುತ್ತದೆ. ಮಂಡಲದ ಮುಖ್ಯಸ್ಥರು ಮಂಡಲ ಪ್ರಧಾನರಾಗಿದ್ದು, ಅವರಿಗೆ ಮಾಸಿಕ ರೂ. 300 ಗೌರವಧನವನ್ನು ಇತ್ತೀಚೆಗೆ ನೀಡಲಾಗಿದೆ. ಪ್ರತೀ ಮಂಡಲಕ್ಕೆ ಒಬ್ಬ ಉಪ ಪ್ರಧಾನರು ಇರುವರು. ಅವರಿಗೂ ಮಾಸಿಕ ರೂ. 150 ಗೌರವಧನ ಗೊತ್ತುಮಾಡಲಾಗಿದೆಯಲ್ಲದೇ ಇವರನ್ನು (ಪ್ರಧಾನ ಮತ್ತು ಉಪ ಪ್ರಧಾನ) 'ಸಾರ್ವಜನಿಕ ಸೇವಕರು' ಎಂದು ಪರಿಗಣಿಸಲಾಗಿದೆ. ಪ್ರತೀ ಮಂಡಲವೂ ಕನಿಷ್ಠ ತಿಂಗಳಿಗೆ ಒಂದು ಸಾರಿ ಸಭೆ ಸೇರಬೇಕು. ಮಂಡಲ ಪಂಚಾಯತಿಯ ಕಾರ್ಯದರ್ಶಿಯನ್ನು ಜಿಲ್ಲಾ ಪರಿಷತ್ತು ನೇಮಕ ಮಾಡುವುದು. ಅವರು ಮಂಡಲದ ಮುಖ್ಯ ಕಾರ್ಯನಿರ್ವಾಹಕರಾಗಿ ಕೆಲಸ ಮಾಡುವರು.

ಮಂಡಲ ಪಂಚಾಯತಿ ಮುಖ್ಯ ಆದಾಯದ ಮೂಲಗಳಲ್ಲಿ ಸರ್ಕಾರ, ಜಿಲ್ಲಾ ಪರಿಷತ್ತುಗಳು ಬಿಡುಗಡೆ ಮಾಡಿದ ಹಣ, ಸಂಘ ಸಂಸ್ಥೆಗಳಿಂದ ಸಹಾಯಧನ, ತಲಾನುದಾನ, ಇತರೇ ಅನುದಾನಗಳು, ಸಾಲ, ಕಟ್ಟಡ, ಭೂಮಿ, ಮಾರುಕಟ್ಟೆ,

ಸಂತೆಮಾಳ, ಬಸ್ ನಿಲ್ದಾಣ, ವಾಹನ ಮುಂತಾದವುಗಳ ಮೇಲಿನ ತೆರಿಗೆ ಮುಂತಾದವುಗಳು. ಹಿಂದಿನ ಕೆಲವು ಪುರಸಭೆಗಳು 1987ರ ನಂತರ ಮಂಡಲ ಪಂಚಾಯತಿಗಳಾಗಿ ಪುನರ್ರಚನೆಗೊಂಡಿವೆ. ಕೊಡಗು ಜಿಲ್ಲೆಯಲ್ಲಿ ಇಂತಹ 8 ಪುರಸಭೆಗಳು ಮಂಡಲಗಳಾಗಿವೆ. ಅಕ್ಟ್ರಾಯ್ ರದ್ದಾದ ನಂತರ ಮಂಡಲಗಳಿಗೂ ಅಕ್ಟ್ರಾಯ್ ಅನುದಾನವನ್ನು ನೀಡಲಾಗುತ್ತಿದೆ. ಜಿಲ್ಲಾ ಪರಿಷತ್ ಕಾನೂನು ಪ್ರಕರಣ 114 (3) ಪ್ರಕಾರ ಸರ್ಕಾರವು ಪ್ರತೀ ಮಂಡಲಕ್ಕೆ ಆ ಮಂಡಲದ ಜನಸಂಖ್ಯೆಗೆ ಅನುಗುಣವಾಗಿ (ಹಿಂದಿನ ಜನಗಣತಿಯ ಆಧಾರದ ಮೇಲೆ) ತಲಾ ರೂ. 10ರಂತೆ ಅನುದಾನ ನೀಡುವುದು. ಸದರಿ ಅನುದಾನದ ಮೊತ್ತದಲ್ಲಿ ಶೇ. 25 ಭಾಗ ಜಿಲ್ಲಾ ಪರಿಷತ್ತುಗಳಿಗೆ ಸೇರುವುದು. ಪ್ರಕರಣ 56, 57, 58ರಲ್ಲಿ ಮಂಡಲ ಪಂಚಾಯತಿಗಳು ನಿರ್ವಹಿಸಬೇಕಾದ ಕಾರ್ಯಗಳ ಬಗ್ಗೆ ವಿವರಣೆ ನೀಡಲಾಗಿದೆ. ಸದ್ಯದಲ್ಲಿ 27 ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಪ್ರತ್ಯೇಕವಾಗಿ ಮಂಡಲ ಪಂಚಾಯತಿಗಳಿಗೆ ವಹಿಸಿಕೊಡಲಾಗಿದೆ. ಇವುಗಳನ್ನು ಮಂಡಲಗಳು ನಿರ್ವಹಿಸಲೇಬೇಕಾದ ಬದ್ಧತೆ ಉಂಟು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಗ್ರಾಮೀಣ ನೀರು ಪೂರೈಕೆ, ವಸತಿ ಯೋಜನೆ, ಹರಿಜನ–ಗಿರಿಜನರ ಯೋಗಕ್ಷೇಮ, (ಜಾಗತಿಕ ಬ್ಯಾಂಕಿನ ಸಹಾಯದಿಂದ ರೂಪಿಸಲಾದ್ದು) ವ್ಯವಸಾಯ ವಿಸ್ತರಣಾ ಯೋಜನೆಗಳು, ಗ್ರಾಮೀಣ ರಸ್ತೆಗಳು ಮತ್ತು ಸೇತುವೆಗಳು, ಗ್ರಾಮೀಣ ಅಭಿವೃದ್ಧಿ ಮತ್ತು ವಯಸ್ಕರ ಶಿಕ್ಷಣ ಇವೇ ಮುಂತಾದವುಗಳು. ಕೇಂದ್ರ ಸರಕಾರವು ಜವಾಹರ್ ರೋಜ್‌ಗಾರ್ ಯೋಜನೆ ಎಂಬ ಗ್ರಾಮೀಣ ಉದ್ಯೋಗ ಕಾರ್ಯಕ್ರಮವನ್ನು ಇವರಿಗೆ ವಹಿಸಿದೆ.

### ಗ್ರಾಮಸಭೆಗಳು

ಪ್ರತೀ ಒಂದು ಗ್ರಾಮದಲ್ಲಿಯೂ ಗ್ರಾಮದ ಜನತೆಯನ್ನು ಒಳಗೊಂಡಂತೆ ಒಂದು ಸಭೆ ಇರುವುದು ; ಇದೇ ಗ್ರಾಮಸಭೆ. ಜಿಲ್ಲಾ ಪರಿಷತ್ತಿಗೆ ಮತದಾನ ಮಾಡುವ ಅರ್ಹತೆ ಹೊಂದಿದವರೆಲ್ಲರೂ ಗ್ರಾಮ ಸಭೆಯ ಸದಸ್ಯರು. ಗ್ರಾಮಸಭೆಯು ಕನಿಷ್ಠ ವರ್ಷಕ್ಕೆ ಎರಡು ಬಾರಿ ಸಭೆ ಸೇರಿ ಗ್ರಾಮಕ್ಕೆ ಆವಶ್ಯಕವಾದ ಅಭಿವೃದ್ಧಿ ಕಾರ್ಯಗಳನ್ನು ಕುರಿತು ಯೋಜನೆಯನ್ನು ರೂಪಿಸುವುದಲ್ಲದೇ ಇದುವರೆಗೆ ಕೈಗೊಳ್ಳಲಾದ ಕಾರ್ಯಗಳ ಪರಿಶೀಲನೆ, ವಿಮರ್ಶೆ ನಡೆಸಬಹುದು ; ಮತ್ತು ಹೊಸ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಮೋದಿಸಬಹುದು. ಗ್ರಾಮಸಭೆಗಳು ಗ್ರಾಮಗಳಲ್ಲಿ ಒಗ್ಗಟ್ಟು, ಭಾವೈಕ್ಯತೆ, ಸಹಜೀವನ, ಸಹಬಾಳುವೆ, ಸಹಕಾರ ಮುಂತಾದ ಭಾವನೆಗಳು ನೆಲೆಸುವಂತೆ ಮಾಡುವಲ್ಲಿ ಹೆಚ್ಚು ಆಸಕ್ತಿ ವಹಿಸಬೇಕೆಂದು ನಿರೀಕ್ಷಿಸಲಾಗಿದೆ. ಗ್ರಾಮಸಭೆಗಳು ತಮ್ಮದೇ ಆದ ಭೂಸೇನೆಯನ್ನು ರಚಿಸಬೇಕೆಂದು ಜಿಲ್ಲಾ ಪರಿಷತ್ ಅಧಿನಿಯಮದಲ್ಲಿ ಸೂಚಿಸಲಾಗಿದೆ. ಗ್ರಾಮಸಭೆಯು ಗೊತ್ತುವಳಿಗಳನ್ನು, ಸಲಹೆ ಸೂಚನೆಗಳನ್ನು, ಮಂಡಲ ಪಂಚಾಯತಿಗಳು ಮತ್ತು ಜಿಲ್ಲಾ ಪರಿಷತ್ತುಗಳು ಪರಿಗಣಿಸಬೇಕೆಂದು ಕಾನೂನಿನಲ್ಲಿ ಆದೇಶಿಸಲಾಗಿದೆ. ಗ್ರಾಮಸಭೆಗಳನ್ನು ಆಯಾ ಮಂಡಲ ಪಂಚಾಯತಿಗಳು ಕರೆದು ಸಭೆಯ ಅಧ್ಯಕ್ಷತೆಯನ್ನು ಸಂಬಂಧಪಟ್ಟ ಮಂಡಲ ಪ್ರಧಾನರು ವಹಿಸಬೇಕೆಂದು ಸೂಚಿಸಲಾಗಿದೆ. ಕೊಡಗಿನಲ್ಲಿ ಹಳೆಯ ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ 'ಗ್ರಾಮಸಭೆಗಳ' ವ್ಯವಸ್ಥೆ ಇತ್ತು. ಆದರೆ ಅವುಗಳ ಕಾರ್ಯ ಇಂದಿನಷ್ಟು ವ್ಯಾಪಕವಾಗಿರಲಿಲ್ಲ ಎಂದು ತಿಳಿದುಬರುವುದು.

### ಕೊಡಗು ಜಿಲ್ಲಾ ಪರಿಷತ್ತು

ಕರ್ನಾಟಕ ಜಿಲ್ಲಾ ಪರಿಷತ್ ಮಂಡಲ ಪಂಚಾಯತಿಗಳ ಕಾನೂನು 1985ರ ಅನ್ವಯ ಕೊಡಗು ಜಿಲ್ಲಾ ಪರಿಷತ್ತಿಗೆ 1987 ಜನವರಿಯಲ್ಲಿ ಪ್ರಥಮ ಚುನಾವಣೆಗಳು ನಡೆದು 21.2.1987 ರಂದು ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಾಗಿ, ಪರಿಷತ್ ಕಾನೂನುಬದ್ಧವಾಗಿ ರಚನೆಯಾಯಿತು. ಜಿಲ್ಲಾ ಪರಿಷತ್ ಅಧಿಕಾರ ವ್ಯಾಪ್ತಿಯು ಮಡಿಕೇರಿ ಪುರಸಭೆಯ ಸರಹದ್ದನ್ನು ಹೊರತುಪಡಿಸಿ ಉಳಿದ ಎಲ್ಲಾ ಗ್ರಾಮಾಂತರ ಪ್ರದೇಶವನ್ನು ಒಳಗೊಂಡಿದ್ದು, ಒಟ್ಟು ವಿಸ್ತೀರ್ಣ 4,087.50 ಚ.ಕಿ.ಮೀ. ಆಗಿರುತ್ತದೆ. 1981ರ ಜನಗಣತಿಯ ಪ್ರಕಾರ ಪರಿಷತ್ತಿನ ಕಾರ್ಯವ್ಯಾಪ್ತಿಗೆ ಬರುವ ಗ್ರಾಮೀಣ ಪ್ರದೇಶದ ಒಟ್ಟು ಜನಸಂಖ್ಯೆ 4.37 ಲಕ್ಷ ಆಗಿದ್ದರೆ 1991ರ ಗಣತಿಯ ಪ್ರಕಾರ ಅದು ಅಂದಾಜು 4.57 ಲಕ್ಷಕ್ಕೆ ಹೆಚ್ಚಳಗೊಂಡಿತು. ಜಿಲ್ಲೆಯಲ್ಲಿ 8 ಜನವಸತಿ ರಹಿತ ಗ್ರಾಮಗಳೂ ಸೇರಿದಂತೆ ಒಟ್ಟು ಗ್ರಾಮಗಳ ಸಂಖ್ಯೆ 296, ಮಂಡಲ ಪಂಚಾಯತಿಗಳ ಸಂಖ್ಯೆ 65. ಜಿಲ್ಲಾ ಪರಿಷತ್ತಿನ ಒಟ್ಟು ಸದಸ್ಯರ ಸಂಖ್ಯೆ 38, ಅದರಲ್ಲಿ ಮೀಸಲಾತಿಯು ಸೇರಿದಂತೆ ಚುನಾಯಿತ ಪ್ರತಿನಿಧಿಗಳ ಸಂಖ್ಯೆ 31, ಉಳಿದ ಏಳು ಸದಸ್ಯರಲ್ಲಿ ಮೂವರು ವಿಧಾನಸಭೆಯ, ಮೂವರು ವಿಧಾನಪರಿಷತ್ತಿನ ಮತ್ತು ಒಬ್ಬರು ಲೋಕಸಭಾ ಸದಸ್ಯರು ಇರುವರು. ಚುನಾಯಿತ ಪ್ರತಿನಿಧಿಗಳಲ್ಲಿ 17 ಸಾಮಾನ್ಯ ಸದಸ್ಯರು, 7 ಮಹಿಳೆಯರು, 6 ಪ.ಜಾ./ಪ.ಪಂ. ಮತ್ತು ಒಬ್ಬರು ಪ.ಜಾ./ಪ.ಪಂ. ಸೇರಿದ ಮಹಿಳೆಯರು ಆಗಿದ್ದರು. ಪರಿಷತ್ತು ರಚನೆಗೊಂಡ ಮೊದಲನೇಯ ವರ್ಷ ಅಂದರೆ 1987-88ನೇ ಸಾಲಿನಲ್ಲಿ ಯೋಜನೆ ಮತ್ತು ಯೋಜನೇತರ ಆಯವ್ಯಯವನ್ನು ಸರ್ಕಾರವು ಜಿಲ್ಲಾ

ಪರಿಷತ್‌ನ ರಚನೆಗೆ ಮೊದಲೇ ಸಿದ್ಧಪಡಿಸಿ ಅನುಮೋದಿಸಿತ್ತು. ಆದ್ದರಿಂದ ಕೇವಲ 87-88ರ ಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವ ಕೆಲಸವನ್ನು ಗ್ರಾಮೀಣ ಜನತೆಯ ಸಹಯೋಗದೊಂದಿಗೆ ಜಿಲ್ಲಾ ಪರಿಷತ್ತು ಕೈಗೊಂಡಿತು.

1987–88ನೇ ಸಾಲಿಗೆ, ರಾಜ್ಯ ಸರ್ಕಾರದವರು ಮಂಜೂರು ಮಾಡಿದ ರೂ. 7.34 ಕೋಟಿ ಯೋಜನಾ ಆಯವ್ಯಯದ ಪೈಕಿ 1988 ಮಾರ್ಚ್ ಅಂತ್ಯದವರೆಗೆ ಒಟ್ಟು ರೂ. 6.68 ಕೋಟಿಯನ್ನು ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಯಿತು. ಯೋಜನೇತರ ಬಾಬಿನಲ್ಲಿ ಸರ್ಕಾರ ಆ ವರ್ಷ ನೀಡಿದ ಹಣ ರೂ. 10.08 ಕೋಟಿ ಎಂದು ವರದಿ ತಿಳಿಸುವುದು. 1987-88ನೇ ಸಾಲಿನ ಯೋಜನಾ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳು ಮಾಡಿದ ವೆಚ್ಚ ಈ ರೀತಿ ಇರುವುದು : ರೂ. 37.65 ಲಕ್ಷ ಅರಣ್ಯ ಇಲಾಖೆ, ರೂ. 46 ಲಕ್ಷ ರಸ್ತೆ ಮತ್ತು ಸೇತುವೆಗಳಿಗೆ, ರೂ. 28.31 ಲಕ್ಷ ಗ್ರಾಮೀಣ ನೀರು ಸರಬರಾಜು ಯೋಜನೆಗೆ ಹಾಗೂ ರೂ. 20.58 ಲಕ್ಷ ವಸತಿ ನಿರ್ಮಾಣಕ್ಕೆ. ಅದರಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ, ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ ಮತ್ತು ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳಿಗೆ ಮಾಡಿದ ವೆಚ್ಚಗಳು ಕ್ರಮವಾಗಿ ರೂ. 73.02 ಲಕ್ಷ, ರೂ. 89.38 ಲಕ್ಷ ರೂ. 51.99 ಲಕ್ಷ ಮತ್ತು ರೂ. 98.84 ಲಕ್ಷ ಎಂದು ಆ ವರ್ಷದ ಆಡಳಿತ ವರದಿ ತಿಳಿಸುವುದು. 1987-88ನೇ ಸಾಲಿನ ಜಮಾ ಖರ್ಚು ಲೆಕ್ಕದಂತೆ ಜಿಲ್ಲಾ ಪರಿಷತ್ತಿಗೆ ಸರ್ಕಾರ ನೀಡಿದ ಅನುದಾನದ ಮೊತ್ತ ರೂ. 18.21 ಕೋಟಿ, ಅದರಲ್ಲಿ ಆ ಸಾಲಿನಲ್ಲಿ ಮಾಡಿದ ಖರ್ಚು ರೂ. 13.72 ಕೋಟಿ. ಅಸಾಧಾರಣ ಸಾಲ ಮತ್ತು ಸಸ್ಪೆನ್ಸ್ ಶೀರ್ಷಿಕೆಯಲ್ಲಿ ನೀಡಿದ ಹಣ ರೂ. 5.32 ಕೋಟಿ. ಅದರಲ್ಲಿ ಸದರಿ ವರ್ಷ ಖರ್ಚಾದ ಹಣ ರೂ. 3.99 ಕೋಟಿ.

1987–88 ರಲ್ಲಿ ಜಿಲ್ಲಾ ಪರಿಷತ್ ಸಾಧಿಸಿದ ಪ್ರಮುಖ ಕಾರ್ಯಕ್ರಮಗಳು ಈ ರೀತಿ ಇದ್ದವು : ಹಾರಂಗಿ ಜಲಾಶಯದಲ್ಲಿ 'ಮಹಶೀರ' ಮೀನು ಅಭಿವೃದ್ಧಿ ಯೋಜನೆ, (ರೂ. 75 ಲಕ್ಷ ವೆಚ್ಚದಿಂದ), ಪೊನ್ನಂಪೇಟೆಯಲ್ಲಿ ಕ್ಷೀರ ಶಿತಲೀಕರಣ ಘಟಕದ ಪುನಶ್ಚೇತನ, ಶನಿವಾರಸಂತೆ ಮತ್ತು ಕುಶಾಲನಗರ ಆಸ್ಪತ್ರೆಗಳಲ್ಲಿ ಕ್ಷಕಿರಣ ಉಪಕರಣ ಜೋಡಣೆ ಪ್ರತೀ ತಾಲೂಕಿಗೆ ಮಿನಿ ಕ್ರೀಡಾಂಗಣ ರಚನೆ,ಮಡಿಕೇಬೀಡಿನಲ್ಲಿ ಪಾಟರಿ ಕೇಂದ್ರದ ಪುನಶ್ಚೇತನ, ಕುಶಾಲನಗರ ಸಾರ್ವಜನಿಕ ಆಸ್ಪತ್ರೆಯ ಕಟ್ಟಡದ ನಿರ್ಮಾಣ ಪೂರ್ಣಗೊಳಿಸಲು ವ್ಯವಸ್ಥೆ, ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಲ್ಲಿ ರೂ. 68.12 ಲಕ್ಷ ವೆಚ್ಚ ಮಾಡಿ ಅದರ ಅಂತರ್ಗತ ಸಣ್ಣ ನೀರಾವರಿ, ಅರಣ್ಯ ಅಭಿವೃದ್ಧಿ, ಮೀನು ಅಭಿವೃದ್ಧಿ, ತೋಟಗಾರಿಕೆ, ಪಶುಪಾಲನೆ, ರೇಷ್ಮೆ ಅಭಿವೃದ್ಧಿ, ಕಾಲುಸೇತುವೆ ನಿರ್ಮಾಣ ಮುಂತಾದ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಾರಂಭ ಸೇರಿದ್ದವು. ಇದೂ ಅಲ್ಲದೇ ಆ ವರ್ಷದಲ್ಲಿ ಭಾಗಮಂಡಲ, ಮಡಿಕೇರಿ ಮತ್ತು ಮಾಯಮುಡಿ ಗ್ರಾಮಗಳಲ್ಲಿ ಮೂರು ಹಿಂದುಳಿದ ಮತ್ತು ಅಲ್ಪ ಸಂಖ್ಯಾಂತರ ವಿದ್ಯಾರ್ಥಿನಿಲಯಗಳ ಕಟ್ಟಡದ ಕೆಲಸ ಪ್ರಾರಂಭಿಸಲಾಯಿತು, ಸಾಕ್ಷರತಾ ಯೋಜನೆಯಲ್ಲಿ 904 ಕೇಂದ್ರಗಳನ್ನು ಪಾರಂಭಿಸಿ 14,580 ಜನರನ್ನು ಅಕ್ಷರಸ್ಥರನ್ನಾಗಿ ಮಾಡಲಾಯಿತು.

ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿ ಬಂದ ನಂತರ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ಹಾಜರಿ ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ, ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರುಗಳ ಮತ್ತು ವೈದ್ಯಕೀಯ ಸಿಬ್ಬಂದಿಗಳ ಹಾಜರಾತಿ ಸುಧಾರಿಸಿರುವುದಲ್ಲದೆ ಅವರ ಕೆಲಸ ಕಾರ್ಯಗಳ ಸಾಮರ್ಥ್ಯ ಹೆಚ್ಚಿದೆ ಎಂದು ಆಡಳಿತ ವರದಿಯಲ್ಲಿ ಸೂಚಿಸಲಾಗಿದೆ.

ಜಿಲ್ಲಾ ಪರಿಷತ್ ರಚನೆಯಾದ ಎರಡನೇಯ ವರ್ಷ, 1988–89 ಸಾಲಿಗೆ ಮಂಜೂರಾದ ರೂ. 9.87 ಕೋಟಿ ಯೋಜನಾ ಆಯವ್ಯಯದ ಪೈಕಿ, 1989ರ ಮಾರ್ಚ್ ಕೊನೆಯಲ್ಲಿ ಒಟ್ಟು ರೂ. 8.40 ಕೋಟಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗಿತ್ತು. ಆ ಸಾಲಿನಲ್ಲಿ ಯೋಜನೇತರ ಬಾಬಿನಲ್ಲಿ ರೂ. 11.28 ಕೋಟಿ ಒದಗಿಸಲಾಗಿತ್ತು.

1988-89ನೇ ಸಾಲಿನ ಯೋಜನೆಯಲ್ಲಿ ಮುಖ್ಯವಾಗಿ ಮಾಡಿದ ವೆಚ್ಚದ ವಿವರ ಈ ರೀತಿ ಇರುವುದು. ಅರಣ್ಯ ಇಲಾಖೆ (ರೂ. 20.56 ಲಕ್ಷ), ರಸ್ತೆ ಮತ್ತು ಸೇತುವೆ ನಿರ್ಮಾಣಕ್ಕೆ (ರೂ. 51ಲಕ್ಷ), ಗ್ರಾಮೀಣ ನೀರು ಸರಬರಾಜು (ರೂ. 42.77 ಲಕ್ಷ), ವಸತಿ ನಿರ್ಮಾಣಕ್ಕೆ (ರೂ. 20.65 ಲಕ್ಷ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ರೂ. 72.85 ಲಕ್ಷ), ಹರಿಜನ ಗಿರಿಜನ ಕಲ್ಯಾಣ (ರೂ. 118.57 ಲಕ್ಷ), ಸಮಗ್ರ ಗ್ರಾಮೀಣ ಅಭಿವೃದ್ಧಿ (ರೂ. 74.97 ಲಕ್ಷ) ಮತ್ತು ಗ್ರಾಮೀಣ

ಉದ್ಯೋಗಕ್ಕೆ ರೂ. 73.00 ಲಕ್ಷ ಎಂದು ಆಡಳಿತ ವರದಿ ತಿಳಿಸುವುದು.

1988-89ರಲ್ಲಿ ಹಿಂದಿನ ವರ್ಷ ಪ್ರಾರಂಭಿಸಲಾದ ಅನೇಕ ಯೋಜನೆಗಳನ್ನು ಮುಂದುವರಿಸಲಾಯಿತು, ಅಲ್ಲದೇ ಹಲವಾರು ಹೊಸ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. 1988-89ರಲ್ಲಿ ಜಿಲ್ಲಾ ಪರಿಷತ್ತು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಗಾಗಿ ರೂ. 40.12 ಲಕ್ಷ, ಪಶ್ಚಿಮ ಘಟ್ಟ ಯೋಜನೆ ಅಭಿವೃದ್ಧಿಗಾಗಿ ರೂ. 20.98 ಲಕ್ಷ, ಅಂತ್ಯೋದಯ ಯೋಜನೆಗಾಗಿ ರೂ. 1.30 ಲಕ್ಷ, ನೂರು ಬಾವಿ ಯೋಜನೆಗಾಗಿ ರೂ. 6.23 ಲಕ್ಷ, ಜೈವಿಕ ಅನಿಲ ಸ್ಥಾವರ ಯೋಜನೆಗಾಗಿ ರೂ. 6.87 ಲಕ್ಷ ಮತ್ತು ಗ್ರಾಮೀಣ ಉದ್ಯೋಗ ಯೋಜನೆಗಾಗಿ ರೂ. 72.54 ಲಕ್ಷ ಖರ್ಚು ಮಾಡಲಾಗಿರುತ್ತದೆ. (ಇದರಲ್ಲಿ ಕೇಂದ್ರದ ಜವಾಹರ್ ರೋಜ್‌ಗಾರ್ ಯೋಜನೆಯ ಕೊಡುಗೆ ಇದೆ).

1988-89ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ತಿಗೆ ಸರ್ಕಾರ ನೀಡಿದ ಒಟ್ಟು ಅನುದಾನದ ಮೊತ್ತ ರೂ. 20.68 ಕೋಟಿ ಆಗಿದ್ದರೆ, ಸದರಿ ವರ್ಷ ಮಾಡಿದ ವೆಚ್ಚ ರೂ. 19.92 ಕೋಟಿ; ಸಾಧಾರಣ ಸಾಲ ಮತ್ತು ಸಸ್ಪೆನ್ಸ್ ಶೀರ್ಷಿಕೆಯಲ್ಲಿ ನೀಡಿದ ಮೊತ್ತ ರೂ. 60.50 ಲಕ್ಷ ಆಗಿದ್ದರೆ, ವ್ಯಯ ಮಾಡಿದ ಹಣ ರೂ. 5.45 ಕೋಟಿ ಎಂದು ವರದಿ ತಿಳಿಸುತ್ತದೆ. ಅದೇ ವರ್ಷದಲ್ಲಿ ಜಿಲ್ಲಾ ಪರಿಷತ್ತಿನ ಸಾಮಾನ್ಯ ಆದಾಯ ರೂ. 8.99 ಲಕ್ಷ ಆಗಿತ್ತು, ಎಂದು ವರದಿ ತಿಳಿಸುವುದು (ಆ ವರ್ಷದಲ್ಲಿ ಈ ಬಾಬಿನಲ್ಲಿ ಯಾವ ಖರ್ಚೂ ತೋರಿಸಿಲ್ಲ).

1989-90ರಲ್ಲಿ ಮಂಜೂರಾದ ರೂ. 21.44 ಕೋಟಿ ಯೋಜನಾ ಆಯವ್ಯಯದ ಪೈಕಿ 30ನೇ ಮಾರ್ಚ್ 1990ರವರೆಗೆ ರೂ. 29.51 ಕೋಟಿಗಳನ್ನು ವಿವಿಧ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗಿತ್ತು. ಆ ವರ್ಷದಲ್ಲಿ ಜಿಲ್ಲಾ ಪರಿಷತ್ತಿನ ಸಾಮಾನ್ಯ ಆದಾಯ ಆರಂಭದ ಶಿಲ್ಕು (ರೂ. 8.99 ಲಕ್ಷ) ಸೇರಿದಂತೆ ರೂ. 16.43 ಲಕ್ಷ. ಆದರಲ್ಲಿ 89-90ರಲ್ಲಿ ಸ್ವೀಕೃತವಾದ ಮೊತ್ತ ರೂ.7.44 ಲಕ್ಷ ಆಗಿತ್ತು.

1989-90ನೇ ಸಾಲಿನಲ್ಲಿ ಸರ್ಕಾರ ನೀಡಿದ ಅನುದಾನದ ಮೊತ್ತ ರೂ. 21.66 ಕೋಟಿ ಆಗಿದ್ದು ಅನುದಾನದ ಹಣವನ್ನು ಸಂಪೂರ್ಣ ಉಪಯೋಗಿಸಲಾಗಿತ್ತು. ಆ ವರ್ಷದಲ್ಲಿ ಅಸಾಧಾರಣ ಸಾಲ ಮತ್ತು ಸಸ್ಪೆನ್ಸ್ ಶೀರ್ಷಿಕೆಯಲ್ಲಿ ಜಮೆ ಮೊತ್ತ ರೂ. 7.75 ಕೋಟಿ ಆಗಿದ್ದರೆ ಸದರಿ ವರ್ಷದಲ್ಲಿ ಆದ ಖರ್ಚು ರೂ. 7.85 ಕೋಟಿ ಎಂದು ತಿಳಿದು ಬರುವುದು.

1990-91ರಲ್ಲಿ 34 ಯೋಜನೆಗಳಿಗೆ ರೂ. 10.645 ಕೋಟಿ ಒದಗಿಸಿದ್ದು ಈ ಪೈಕಿ ಕೇಂದ್ರದ ಕೊಡುಗೆ ರೂ. 4.997 ಕೋಟಿ, ಹಾಗೂ ರಾಜ್ಯದಿಂದ 5.648 ಕೋಟಿ ರೂ.ಗಳಾಗಿದೆ.

1992-93ನೇ ಸಾಲಿಗೆ ಜಿಲ್ಲೆಯ ವಿವಿಧ 27 ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕಾಗಿ ಸರ್ಕಾರವು ರೂ. 12.26 ಕೋಟಿ ಬಿಡುಗಡೆ ಮಾಡಿದ್ದು ಅದರಲ್ಲಿ ರಾಜ್ಯ ಸರ್ಕಾರದ ಪಾಲು ರೂ. 6.74 ಕೋಟಿಯಾಗಿದ್ದರೆ, ಕೇಂದ್ರಸರ್ಕಾರದ ಪಾಲು ರೂ. 5.52 ಕೋಟಿ. ವಿವಿಧ ಯೋಜನಾ ವೆಚ್ಚದ ವಿವರ ಈ ರೀತಿ ಇರುವುದು. ಜವಾಹರ್ ರೋಜ್‌ಗಾರ್ ಯೋಜನೆ ರೂ. 1.41 ಕೋಟಿ, ಪಶ್ಚಿಮ ಘಟ್ಟ ಅಭಿವೃದ್ಧಿ ರೂ. 1.26 ಕೋಟಿ, ನೀರು ಪೂರೈಕೆ ರೂ. 1.18 ಕೋಟಿ. ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕೆ ರೂ. 70.61 ಲಕ್ಷ ಎಂದು ವರದಿಯಾಗಿದೆ. 1992ರ ಜನವರಿಯಿಂದ (ಜಿಲ್ಲಾ ಪರಿಷತ್ತಿನ ಚುನಾಯಿತ ಸದಸ್ಯರ ಅವಧಿ ಮುಗಿದ ನಂತರ) ಆಡಳಿತಾಧಿಕಾರಿಗಳನ್ನು ನೇಮಿಸಿದೆ.

ವಾರ್ಷಿಕ ಯೋಜನೆಯ ಅನುಸಾರ 1992-93 ರಲ್ಲಿ ಸರ್ಕಾರ ವಿವಿಧ ಇಲಾಖೆಗಳಿಗೆ ಬಿಡುಗಡೆ ಮಾಡಿದ ಹಣದ ವಿವರ ಈ ರೀತಿ ಇರುವುದು : (ಮೊತ್ತ ಲಕ್ಷ ರೂ.ಗಳಲ್ಲಿ) ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಸಮಾಜ ಕಲ್ಯಾಣ 15.10, ಹಿಂದುಳಿದ ವರ್ಗಗಳ ಕಲ್ಯಾಣ 17.37, ವಿಶೇಷ ಘಟಕ ಯೋಜನೆ 44.80, ಪರಿಶಿಷ್ಟ ವರ್ಗ ಉಪ ಯೋಜನೆ 65.70, ಮಹಿಳಾ ಮತ್ತು ಮಕ್ಕಳ ಕಲ್ಯಾಣ 68.35, ಪೌಷ್ಟಿಕ ಆಹಾರ ವಿತರಣೆ 28.90, ವ್ಯವಸಾಯ 20.77, ಪಶುಸಂಗೋಪನೆ 29.60, ಮೀನುಗಾರಿಕೆ 6.00, ಅರಣ್ಯಾಭಿವೃದ್ಧಿ 20.35, ಸಹಕಾರ ಇಲಾಖೆ 13.30, ಸಮಗ್ರ ಗ್ರಾಮೀಣಾಭಿವೃದ್ಧಿ 90.28, ಡ್ವಾಕ್ರಾ ಯೋಜನೆ 4.48, ವೃತ್ತಿ ತರಬೇತಿ 3.88, ಕುಟುಂಬ ಕಲ್ಯಾಣ 69.94, ವೈದ್ಯಕೀಯ ಮತ್ತು ಜನಾರೋಗ್ಯ 72.50, ಕ್ರೀಡಾ ಕಾರ್ಯಕ್ರಮ-ಯುವಜನ ಸೇವೆ 14.50, ಸಾಮಾನ್ಯ ಶಿಕ್ಷಣ 32.65, ಸೆಕಂಡರಿ ಶಿಕ್ಷಣ 21.00, ವಯಸ್ಕರ ಶಿಕ್ಷಣ 5.59 ಮುಂತಾದವುಗಳು.

**ಮಂಡಲ ಪಂಚಾಯುತಿಗಳು**

ಕರ್ನಾಟಕ ಜಿಲ್ಲಾ ಪರಿಷತ್, ತಾಲೂಕು ಪಂಚಾಯತ್ ಸಮಿತಿ, ಮಂಡಲ ಪಂಚಾಯತಿಗಳ ಕಾನೂನು 1983, (1985ನೇ ಸಾಲಿನ ಕರ್ನಾಟಕ ಕಾಯಿದೆ 20) ಪ್ರಕರಣ 4, ಉಪ ಪ್ರಕರಣ 1ರ ಪ್ರಕಾರ ಜಿಲ್ಲೆಯಲ್ಲಿ 65 ಮಂಡಲ ಪಂಚಾಯತಿಗಳನ್ನು ರಚಿಸಲಾಗಿದ್ದು ಈ ಮಂಡಲ ಪಂಚಾಯತಿಗಳಲ್ಲಿ ಮಂಡಲ ಕೇಂದ್ರಗಳಾಗಿ ಪರಿವರ್ತಿತವಾದ ಹಿಂದಿನ 8 ಪುರಸಭೆಗಳೂ ಸೇರಿವೆ. ಇವುಗಳ ತಾಲೂಕುವಾರು ವಿಂಗಡನೆ ಈ ರೀತಿ ಇರುವುದು. ಮಡಿಕೇರಿ 15, ವೀರರಾಜಪೇಟೆ 26 ಮತ್ತು ಸೋಮವಾರಪೇಟೆ 24. ಜಿಲ್ಲೆಯಲ್ಲಿರುವ ಒಟ್ಟು ಮಂಡಲ ಪಂಚಾಯತಿಯ ಸದಸ್ಯರ ಸಂಖ್ಯೆ 853 ಅವರಲ್ಲಿ ಮಹಿಳೆಯರ ಸಂಖ್ಯೆ 220, ಪರಿಶಿಷ್ಟ ಜಾತಿ 199 ಮತ್ತು ಇತರರು 434.

1985ರ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿ ಕಾನೂನಿನ ಅನ್ವಯ ಈ ಜಿಲ್ಲೆಯಲ್ಲಿ ಹಿಂದಿನ 8 ಪುರಸಭೆಗಳನ್ನು ಮಧ್ಯಂತರ ಮಂಡಲ ಪಂಚಾಯತಿಗಳೆಂದು ಘೋಷಿಸಲಾಯಿತು. ಅವುಗಳಿಗೆ ಹಿಂದಿನ ಪುರಸಭೆಯ ಅವಧಿ ಮುಗಿದ ನಂತರ ಚುನಾವಣೆಗಳನ್ನು ನಡೆಸಿ ಅವುಗಳನ್ನು ಪುನರ್ರಚಿಸಲಾಯಿತು. ಉಳಿದ ಮಂಡಲಗಳಿಗೆ (57) ಪ್ರಪ್ರಥಮವಾಗಿ ಜನವರಿ 20, 1987ರಂದು ಚುನಾವಣೆಗಳು ನಡೆದವು. ಈ ಕೆಳಗಿನ ಪಟ್ಟಿಯಲ್ಲಿ ತಾಲೂಕು ಪ್ರಕಾರ ಮಂಡಲ ಪಂಚಾಯತಿಯ ಕೇಂದ್ರ ಸ್ಥಾನಗಳ ಹೆಸರುಗಳನ್ನು ಕೊಡಲಾಗಿದೆ.

**ಮಡಿಕೇರಿ ತಾ॥ :** ಗಾಳೀಬೀಡು, ಮಕ್ಕಂದೂರು, ಹಾಕತ್ತೂರು, ಮರಗೋಡು, ಕಾಂತೂರು (ಮೂರ್ನಾಡು), ಮದೆ, ಪೆರಾಜೆ, ಬೆಟ್ಟಗೇರಿ, ಬೆಂಗೂರು (ಚೇರಂಬಾಣೆ), ಭಾಗಮಂಡಲ, ಕರಿಕೆ, ನಾಪೋಕ್ಲು, ಬಲ್ಲಮಾವಟಿ, ಕೊಣಜಗೇರಿ (ಪಾರಣೆ), ಕುಂಜಿಲ (ಕಕ್ಕಬ್ಬೆ).

**ವೀರರಾಜಪೇಟೆ ತಾ॥ :** ಸಿದ್ದಾಪುರ, ಮಾಲ್ದಾರೆ, ಪೊಲ್ಲಿಬೆಟ್ಟ, ಕಣ್ಣಂಗಾಲ, ಕದನೂರು, ಚೆಂಬೆಬೆಳ್ಳೂರು, ಕಾರ್ಮಾಡು, ಅಮ್ಮತ್ತಿ, ದೇವರಪುರ, ತಿತಿಮತಿ, ಬಾಳೆಲೆ, ಕಿರುಗೂರು, ಆರುವತ್ತೊಕ್ಕಲು, ಹಾತೂರು, ಬಿಟ್ಟಂಗಾಲ, ಬೇಟೋಳಿ, ಕಡಂಗಮರೂರು, ಬಿರುನಾಣಿ, ಹುದಿಕೇರಿ, ಕಾನೂರು, ನಾಲ್ಕೇರಿ, ಕುಟ್ಟ, ಶ್ರೀಮಂಗಲ, ವೀರರಾಜಪೇಟೆ ಗೋಣಿಕೊಪ್ಪಲು, ಪೊನ್ನಂಪೇಟೆ.

**ಸೋಮವಾರಪೇಟೆ ತಾ॥ :** ಬೆಸಗೂರು, ನಿಡ್ತ, ಗೌಡಳ್ಳಿ, ಅಬ್ಬೂರ್ ಕಟ್ಟೆ, ಶಾಂತಳ್ಳಿ, ತೋಳೂರುಶೆಟ್ಟಳ್ಳಿ, ಹಾನಗಲ್ಲು, ಐಗೂರು, ಕಿರುಗಂದೂರು, ಹೆಬ್ಬಾಲೆ, ಕೂಡಿಗೆ, ಗುಡೆಹೊಸೂರು, ವಾಲ್ನೂರು–ತ್ಯಾಗತ್ತೂರು, ಕಂಬಿಬಾಣೆ, ಕೊಡಗರಳ್ಳಿ, ಮಾದಾಪುರ, ಗರ್ವಾಲೆ, ಕೆದಕಲ್, ಚಟ್ಟಳ್ಳಿ, ಸುಂಟಿಕೊಪ್ಪ, ಕುಶಾಲನಗರ, ಸೋಮವಾರಪೇಟೆ, ಶನಿವಾರಸಂತೆ, ಕೊಡ್ಲಿಪೇಟೆ.

**ಹಣಕಾಸು :** 1987–88 ರಲ್ಲಿ, 65 ಮಂಡಲ ಪಂಚಾಯತಿಗಳ ಒಟ್ಟು ಜಮ ಲೆಕ್ಕ ರೂ. 140.48 ಲಕ್ಷದಲ್ಲಿ ಕಂದಾಯ ವಸೂಲಿ ಮತ್ತು ಅನುದಾನಗಳ ಮೊತ್ತಗಳು ಕ್ರಮವಾಗಿ ರೂ. 49.39 ಲಕ್ಷ, ಮತ್ತು ರೂ. 34.16 ಆಗಿದ್ದರೆ, ಆರಂಭದ ಶಿಲ್ಕು ರೂ. 56.92 ಲಕ್ಷ ಎಂದು ವರದಿ ತಿಳಿಸುವುದು. ಸದರಿ ವರ್ಷದಲ್ಲಿ ಮಂಡಲಗಳು ಮಾಡಿದ ಒಟ್ಟು ವೆಚ್ಚ ರೂ. 74.51 ಲಕ್ಷ. ಅದರಲ್ಲಿ ಕಾಮಗಾರಿ ವೆಚ್ಚ ರೂ. 39.44 ಲಕ್ಷ, ಸಿಬ್ಬಂದಿ ಖರ್ಚು ರೂ. 19.31 ಲಕ್ಷ, ವಿದ್ಯುತ್ ವೆಚ್ಚ ರೂ. 6.02 ಲಕ್ಷ, ಸಾದಿಲ್ವಾರು ರೂ. 5.49 ಲಕ್ಷ, ಚುನಾಯಿತ ಸದಸ್ಯರ ಸಂಬಳ ರೂ. 3.84 ಲಕ್ಷ, ಮುಂತಾದವುಗಳು ಮುಖ್ಯ ವೆಚ್ಚಗಳಾಗಿದ್ದವು. ಸದರಿ ವರ್ಷದ ಅಂತಿಮ ಶಿಲ್ಕು ರೂ. 65.96 ಲಕ್ಷ ಎಂದು ವರದಿಯಾಗಿದೆ. 1989–90 ಸಾಲಿನ 65 ಮಂಡಲ ಪಂಚಾಯತಿಗಳ ಜಮಾಖರ್ಚಿನ ವಿವರ ಈ ರೀತಿ ಇತ್ತು : ಮೊತ್ತ ಲಕ್ಷ ರೂ.ಗಳಲ್ಲಿ, ಆರಂಭದ ಶಿಲ್ಕು ರೂ. 108.26, ಅನುದಾನ ರೂ. 32.52, ಕಂದಾಯ ವಸೂಲಿ ರೂ. 96.94, ಒಟ್ಟು ರೂ. 237.70 ಲಕ್ಷ. ವೆಚ್ಚದ ವಿವರ (ಮೊತ್ತ ಲಕ್ಷ ರೂ.ಗಳಲ್ಲಿ), ವಿದ್ಯುತ್ ವೆಚ್ಚ 2.14, ಚುನಾಯಿತ ಸದಸ್ಯರ ಸಂಬಳ 3.31, ಸಭೆಯ ಖರ್ಚು 1.16, ಸಾದಿಲ್ವಾರು 1.29, ಇತರ ಸಿಬ್ಬಂದಿ ಖರ್ಚು 27.43, ಕಾಮಗಾರಿ ವೆಚ್ಚ 112.82, ಒಟ್ಟು 148.16 ಮತ್ತು ಅಂತಿಮ ಶುಲ್ಕ 89.56 ಎಂದು ಜಿಲ್ಲಾ ಪರಿಷತ್ ಆಡಳಿತ ವರದಿಯಲ್ಲಿ ಸೂಚಿಸಲಾಗಿದೆ.

## ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ

ಸ್ವಾತಂತ್ರ್ಯಾನಂತರದ ದಶಕಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿಯೂ ಶುದ್ಧವಾದ ಸುರಕ್ಷಿತ ಕುಡಿಯುವ ನೀರನ್ನು ಗ್ರಾಮೀಣ ಜನತೆಗೆ ಒದಗಿಸಲು ಮತ್ತು ಗ್ರಾಮೀಣ ಪ್ರದೇಶ

ದಲ್ಲಿ ನೈರ್ಮಲ್ಯ ಸುಧಾರಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಲವಾರು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿವೆ. ನಗರಗಳಿಗೆ ಕುಡಿಯುವ ನೀರು ಪೂರೈಸಲು ಪ್ರತ್ಯೇಕವಾದ ರಾಜ್ಯಮಟ್ಟದ ಮಂಡಳಿಯು ರಚನೆಯಾದ ನಂತರ ಗ್ರಾಮೀಣ ನೀರು ಸರಬರಾಜು ವ್ಯವಸ್ಥೆಯನ್ನು ನೋಡಿಕೊಳ್ಳಲು ಪ್ರತ್ಯೇಕವಾದ ಸಾರ್ವಜನಿಕ ಆರೋಗ್ಯ ಮತ್ತು ಇಂಜನಿಯರಿಂಗ್ (ಪಿ.ಎಚ್.ಇ.) ವಿಭಾಗಗಳು ಜಿಲ್ಲಾ ಮಟ್ಟದಲ್ಲಿ ಇದ್ದವು. ಈಗ ಈ ಕಾರ್ಯವನ್ನು ಜಿಲ್ಲಾ ಪರಿಷತ್ತುಗಳಿಗೆ ವಹಿಸಿಕೊಡಲಾಗಿದೆ.

ಗ್ರಾಮೀಣ ನೀರು ಪೂರೈಕೆ ಯೋಜನೆಯನ್ನು 'ರಾಜ್ಯ ವಲಯ ಯೋಜನೆ' ನ್ಯಾಷನಲ್ ರೂರಲ್ ವಾಟರ್ ಸ್ಕೀಂ ಮತ್ತು ತ್ವರಿತ ಗ್ರಾಮೀಣ ನೀರು ಪೂರೈಕೆ ಯೋಜನೆ (ಕೇಂದ್ರವಲಯ–ಎಕ್ಸಲರೇಟೆಡ್ ರೂರಲ್ ವಾಟರ್ ಸ್ಕೀಂ) ಎಂದು ಎರಡು ಪ್ರಮುಖ ವಲಯಗಳಲ್ಲಿ ವಿಂಗಡಿಸಲಾಗಿದ್ದು, 1975–77 ರಿಂದ ಕೇಂದ್ರ ವಲಯದ ತ್ವರಿತ ನೀರು ಪೂರೈಕೆ ಯೋಜನೆಗಳ ಸಂಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುವುದು. ಈ ಯೋಜನೆಗಳೇ ಅಲ್ಲದೇ ಜಿಲ್ಲಾ ಯೋಜನೆಯ ಅಂತರ್ಗತ ಕಿರು ನೀರು ಸರಬರಾಜು ಯೋಜನೆ, ಕೊಳವೆ ಬಾವಿ ಯೋಜನೆ, ನೈಸರ್ಗಿಕ ನೀರು ಸರಬರಾಜು ಯೋಜನೆ, ತೆರೆದ ಬಾವಿಗಳ ಯೋಜನೆ ಮುಂತಾದ ಯೋಜನೆಗಳನ್ನು ರಾಜ್ಯವಲಯ ಮತ್ತು ಕೇಂದ್ರ ವಲಯ ಯೋಜನೆಯಲ್ಲಿ ಅಳವಡಿಸಲಾಗಿದೆ. ವಿಶೇಷವಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಕಾಲೋನಿಗಳಲ್ಲಿ ಪ್ರತ್ಯೇಕವಾದ ಕುಡಿಯುವ ನೀರಿನ ಯೋಜನೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಲ್ಲಿ ವಿಶೇಷ ಘಟಕ ಯೋಜನೆಯಾಗಿ ಅಳವಡಿಸಲಾಗಿದೆ. ಯೋಜನೆಯ ಪ್ರಾರಂಭದಿಂದ 1990ರ ಮಾರ್ಚ್ ಕೊನೆಯಲ್ಲಿ ಇದ್ದಂತೆ ಜಿಲ್ಲೆಯಾದ್ಯಂತ ರಾಜ್ಯ ಮತ್ತು ಕೇಂದ್ರವಲಯಗಳಲ್ಲಿ ಸೇರಿ ಯೋಜಿಸಲಾದ ಸುರಕ್ಷಿತ ಕುಡಿಯುವ ನೀರಿನ ಕಾಮಗಾರಿಗಳ ಒಟ್ಟು ಸಂಖ್ಯೆ 69 ಆಗಿತ್ತು. ಅವುಗಳ ತಾಲೂಕುವಾರು ವಿಂಗಡಣೆ ಹೀಗಿದೆ : ಮಡಿಕೇರಿ 16, ಸೋಮವಾರಪೇಟೆ 22 ಮತ್ತು ವೀರರಾಜಪೇಟೆ 31. ಈ ಯೋಜನೆಗಳಲ್ಲಿ ಕೇಂದ್ರ ವಲಯದಲ್ಲಿ ಕೈಗೊಳ್ಳಲಾದ (ಎ.ಆರ್.ಡಬ್ಲ್ಯು.ಎಸ್.) ಯೋಜನೆಗಳ ತಾಲೂಕುವಾರು ಸಂಖ್ಯೆ ಕ್ರಮವಾಗಿ 9, 7 ಮತ್ತು 8 ಎಂದು ವರದಿಯಾಗಿದೆ. ಮಡಿಕೇರಿ ತಾಲೂಕಿನ 16 ಕಾಮಗಾರಿಗಳಲ್ಲಿ 14ನ್ನು ಪೂರೈಸಲಾಗಿತ್ತು. ಅದರಂತೆ, ಸೋಮವಾರಪೇಟೆ ತಾಲೂಕಿನಲ್ಲಿ 15 ಯೋಜನೆಗಳನ್ನು ಪೂರೈಸಿದ್ದರೆ, ವೀರರಾಜಪೇಟೆ ತಾಲೂಕಿನಲ್ಲಿ 17 ಯೋಜನೆಗಳನ್ನು ಪೂರೈಸಲಾಗಿತ್ತು ಎಂದು ವರದಿಯಾಗಿದೆ. ಕಿರು ನೀರು ಸರಬರಾಜು (ಮಿನಿ) ಯೋಜನೆಯ ಅಂತರ್ಗತ ಮಡಿಕೇರಿ ತಾಲೂಕಿನಲ್ಲಿ 11 ಯೋಜನೆಗಳ ಕಾರ್ಯ ಪೂರೈಸಿದ್ದರೆ, ಸೋಮವಾರಪೇಟೆ ಮತ್ತು ವೀರರಾಜಪೇಟೆ ತಾಲೂಕುಗಳಲ್ಲಿ ಅನುಕ್ರಮವಾಗಿ 20 ಮತ್ತು 15 ಯೋಜನೆಗಳನ್ನು ಪೂರೈಸಲಾಗಿತ್ತು. ಕೊಳವೆ ಬಾವಿ ಯೋಜನೆಯಲ್ಲಿ 1990ರ ಮಾರ್ಚ್ ಕೊನೆಯವರೆಗೆ ಜಿಲ್ಲೆಯಾದ್ಯಂತ ತೋಡಲಾದ ಒಟ್ಟು ಬಾವಿಗಳ ಸಂಖ್ಯೆ ಸುಮಾರು 2,500 ಆಗಿದ್ದು ಅವುಗಳ ತಾಲೂಕುವಾರ ಹಂಚಿಕೆ ಈ ರೀತಿ ಇತ್ತು : ಮಡಿಕೇರಿ (494) ಸೋಮವಾರಪೇಟೆ (1082), ಮತ್ತು ವೀರರಾಜಪೇಟೆ 871. ಸಂಚಾರ ಸೌಲಭ್ಯದ ಕೊರತೆ ಇರುವ ದುರ್ಗಮ ಪ್ರದೇಶಗಳಿಗೆ ರಿಗ್ ಯಂತ್ರಗಳು ತಲುಪದೇ ಇರುವ ಸಂದರ್ಭಗಳಲ್ಲಿ ತೆರೆದ ಬಾವಿಗಳನ್ನು ತೋಡಲಾಗಿದ್ದು, ಜಿಲ್ಲೆಯಲ್ಲಿ ತೋಡಲಾದ ತೆರೆದಬಾವಿಗಳ ಸಂಖ್ಯೆ 52, ಅವುಗಳ ತಾಲೂಕುವಾರು ವಿಂಗಡನೆ ಮಡಿಕೇರಿ 3, ಸೋಮವಾರಪೇಟೆ 6, ವೀರರಾಜಪೇಟೆ 43. ಕೊಡಗು ಜಿಲ್ಲಾ ಪರಿಷತ್ ಇಂಜನಿಯರಿಂಗ್ ವಿಭಾಗದ ವರದಿ ತಿಳಿಸುವಂತೆ 1991-92ರಲ್ಲಿ ಕೊಳಾಯಿ ನೀರು (ಸುರಕ್ಷಿತ) ಸರಬರಾಜು ಯೋಜನೆ (ರಾಜ್ಯವಲಯ)ಯ ಅಂತರ್ಗತ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಯಲ್ಲಿ 91–92 ಸಾಲಿಗೆ ರೂ. 9 ಲಕ್ಷ ಬಿಡುಗಡೆಯಾಗಿದ್ದು 12 ಕಾಮಗಾರಿಗಳನ್ನು ಕೈಗೊಂಡು ಅದರಲ್ಲಿ 5 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿತ್ತು. 1991-92ರ ಅಂತ್ಯದವರೆಗೆ ಈ ಕಾಮಗಾರಿಗಳಿಗೆ ರೂ 8.30 ಲಕ್ಷ ಖರ್ಚು ಮಾಡಲಾಗಿತ್ತು. ತ್ವರಿತ ಗ್ರಾಮೀಣ ನೀರು ಸರಬರಾಜು (ಕೇಂದ್ರ) ಯೋಜನೆಯಲ್ಲಿ 91–92ನೇ ಸಾಲಿಗೆ ರೂ. 20 ಲಕ್ಷ ಬಿಡುಗಡೆಯಾಗಿದ್ದು, 16 ಕಾಮಗಾರಿಗಳನ್ನು ಕೈಗೊಂಡು ಅವುಗಳಲ್ಲಿ 13ನ್ನು ರೂ. 21.25 ಲಕ್ಷ ವೆಚ್ಚದಿಂದ ಪೂರ್ಣಗೊಳಿಸಲಾಗಿತ್ತು.

ಕಿರು ನೀರು ಸರಬರಾಜು (ಸಾಮಾನ್ಯ) ರಾಜ್ಯವಲಯದಲ್ಲಿ 1991-92ರ ಅವಧಿಯಲ್ಲಿ 10 ಕಾಮಗಾರಿಗಳನ್ನು ಕೈಗೊಂಡು ಆ ಪೈಕಿ ನಾಲ್ಕನ್ನು ರೂ. 6.21 ಲಕ್ಷ ವೆಚ್ಚದಿಂದ ಪೂರೈಸಲಾಗಿತ್ತು. ಇದೇ ಯೋಜನೆಯ ಕೇಂದ್ರ ವಲಯದಲ್ಲಿ 1991–92ರಲ್ಲಿ 10 ಕಾಮಗಾರಿಗಳನ್ನು ಕೈಗೊಂಡು, ಐದನ್ನು ರೂ. 10 ಲಕ್ಷ ವೆಚ್ಚದಿಂದ ಪೂರ್ಣಗೊಳಿಸಲಾಗಿತ್ತು. ಸಾಮಾನ್ಯ ರಾಜ್ಯವಲಯ ಯೋಜನೆಯಲ್ಲಿ 1991–92ರಲ್ಲಿ ಜಿಲ್ಲೆಯಾದ್ಯಂತ ತೋಡಲಾದ ಕೊಳವೆ ಬಾವಿಗಳ ಸಂಖ್ಯೆ 66 ಇದ್ದು ಅವುಗಳಿಗೆ ಕೈಪಂಪು ಜೋಡಿಸಲಾಗಿತ್ತು. ಈ ಯೋಜನೆಯಲ್ಲಿ 1991–92ರ ಅಂತ್ಯದವರೆಗೆ ಮಾಡಿದ ವೆಚ್ಚ ರೂ. 7.99 ಲಕ್ಷ. ಕೇಂದ್ರವಲಯ

ದಲ್ಲಿ ಇದೇ ಅವಧಿಯಲ್ಲಿ ಈ ಯೋಜನೆಯಲ್ಲಿ ತೋಡಲಾದ ಕೊಳವೆಬಾವಿಗಳ ಸಂಖ್ಯೆ 42 ಆಗಿದ್ದು ಅವುಗಳಿಗೆ ಆದ ವೆಚ್ಚ ರೂ. 9.80 ಲಕ್ಷ. ಇದಲ್ಲದೇ ರಾಜ್ಯವಲಯ ಮತ್ತು ಕೇಂದ್ರವಲಯದಲ್ಲಿ ವಿಶೇಷ ಘಟಕ ಯೋಜನೆ ಅನ್ವಯ, ಗಿರಿಜನ ಉಪಯೋಜನೆಯಂತೆ ತೋಡಲಾದ ಒಟ್ಟು ಕೊಳವೆ ಬಾವಿಗಳ ಸಂಖ್ಯೆ 64, ವೆಚ್ಚ ರೂ. 17.47 ಲಕ್ಷ. ನೈಸರ್ಗಿಕ ನೀರು ಸರಬರಾಜು ಯೋಜನೆ (ರಾಜ್ಯವಲಯ)ಯ ಅಡಿಯಲ್ಲಿ 91-91ನೇ ಸಾಲಿನಲ್ಲಿ 25 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ಈ ವರ್ಷದಲ್ಲಿ ಈ ಯೋಜನೆಗೆ ಬಿಡುಗಡೆಯಾದ ಹಣ ರೂ. 6 ಲಕ್ಷ. ತೆರೆದ ಬಾವಿಗಳ ಯೋಜನೆಯ ಅನ್ವಯ (ರಾಜ್ಯವಲಯ) 91-92ನೇ ಸಾಲಿನಲ್ಲಿ 50 ಕಾಮಗಾರಿಗಳನ್ನು ಕೈಗೊಂಡು 35 ಕಾಮಗಾರಿಗಳನ್ನು ರೂ. 7.18 ಲಕ್ಷ ವೆಚ್ಚದಲ್ಲಿ ಪೂರ್ಣಗೊಳಿಸಲಾಯಿತು.

ಗ್ರಾಮೀಣ ನೈರ್ಮಲ್ಯ ಕಾಪಾಡಲು ರಾಜ್ಯ ಮತ್ತು ಕೇಂದ್ರ ವಲಯಗಳಲ್ಲಿ ಹಲವಾರು ಯೋಜನೆಗಳನ್ನು 1991-92ರಲ್ಲಿ ಜಿಲ್ಲೆಯಾದ್ಯಂತ ಕೈಗೊಳ್ಳಲಾಗಿದೆ. ರಾಜ್ಯ ವಲಯದಡಿಯಲ್ಲಿ ಒಂದು ಶೌಚಾಲಯವನ್ನು ರೂ. 3 ಲಕ್ಷ ಅಂದಾಜಿನಿಂದ ನಿರ್ಮಿಸುವ ಯೋಜನೆಯನ್ನು ಪ್ರಾರಂಭಿಸಿದ್ದು, 8 ಶೌಚಾಲಯಗಳನ್ನು ಹಿಂದುಳಿದ ವರ್ಗದ ಜನರಿಗೆ ನಿರ್ಮಿಸಿ ಕೊಡಲಾಗಿದೆ. ಕೇಂದ್ರವಲಯದಲ್ಲಿ ಹಿಂದುಳಿದ ವರ್ಗಕ್ಕೆ 70 ವೈಯಕ್ತಿಕ ಶೌಚಾಲಯಗಳನ್ನು ಒದಗಿಸುವ ಪ್ರಸ್ತಾವನೆ ಮಾಡಲಾಗಿದ್ದು ಅದರಲ್ಲಿ 26 ಶೌಚಾಲಯಗಳ ಕೆಲಸ ಪೂರ್ಣಗೊಂಡಿದೆ. ಇದೇ ಯೋಜನೆಯಲ್ಲಿ 119 ಶೌಚಾಲಯಗಳನ್ನು ಸಾಮಾನ್ಯ (ಜನರಲ್) ವರ್ಗಕ್ಕೆ ಯೋಜಿಸಲಾಗಿದ್ದು ಅದರಲ್ಲಿ 40 ಶೌಚಾಲಯಗಳ ಕಾರ್ಯವನ್ನು ಪೂರೈಸಲಾಗಿದೆ. 1991-92ರ ಕೊನೆಯಲ್ಲಿ ಈ ಯೋಜನೆಗೆ ಖರ್ಚಾದ ವೆಚ್ಚ ರೂ. 1.72 ಲಕ್ಷ.

## ವಸತಿ ಯೋಜನೆ

ಇಂದು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಇರುವ ಹತ್ತು ಹಲವಾರು ಸಮಸ್ಯೆಗಳಲ್ಲಿ ಬಹು ಮುಖ್ಯವಾದುದು ವಸತಿಯ ಸಮಸ್ಯೆ. ಬೆಳೆಯುತ್ತಿರುವ ನಗರೀಕರಣ, ಕೈಗಾರೀಕರಣ, ವಲಸೆ ಮುಂತಾದವುಗಳಿಂದ ನಗರ, ಅರೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬೇಡಿಕೆಗೆ ಅನುಗುಣವಾಗಿ ಸೂಕ್ತ ವಸತಿ ವ್ಯವಸ್ಥೆ ಇಲ್ಲದೇ ಇರುವ ಕೊರತೆ ಈ ಜಿಲ್ಲೆಯಲ್ಲೂ ಕಂಡುಬರುವುದು. ಕೊಡಗಿನಂತಹ ಮಲೆನಾಡು ಬೆಟ್ಟಗುಡ್ಡಗಳ ಸೀಮೆ ಪ್ರದೇಶದಲ್ಲಿ ಹೆಚ್ಚುತ್ತಿರುವ ಕಟ್ಟಡ ನಿರ್ಮಾಣದ ವೆಚ್ಚ, ನಿವೇಶನಗಳ ಕೊರತೆ, ಹೆಚ್ಚುತ್ತಿರುವ ಕಾರ್ಮಿಕರ ವಲಸೆ ಮುಂತಾದವುಗಳು ವಸತಿ ಸಮಸ್ಯೆಯನ್ನು ಇನ್ನಷ್ಟು ತೀವ್ರಗೊಳಿಸಿವೆ.

ಇತ್ತೀಚಿನ ದಶಕಗಳಲ್ಲಿ ಹೆಚ್ಚುತ್ತಿರುವ ವಸತಿಯ ಕೊರತೆಯನ್ನು ನೀಗಲು ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಂದ, ಸಹಕಾರಿ ವಲಯದಿಂದ, ಸಾಂಸ್ಥಿಕ ಹಣಕಾಸು ಸಂಸ್ಥೆಗಳಿಂದ ಹಲವಾರು ಬಹುಮುಖ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

### ಗೃಹಮಂಡಳಿ

ಕರ್ನಾಟಕ ಗೃಹ ನಿರ್ಮಾಣ ಮಂಡಳಿಯನ್ನು ಕಾರ್ಮಿಕರ ಗೃಹನಿರ್ಮಾಣ ನಿಗಮದ ಉತ್ತರಾಧಿಕಾರಿಯಾಗಿ 1956 ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಸಾರ್ವಜನಿಕರು, ಕೈಗಾರಿಕಾ ಮತ್ತು ತೋಟಗಳ ಕಾರ್ಮಿಕರು, ಬೀಡಿ ಕಾರ್ಮಿಕರು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ದುರ್ಬಲ ವರ್ಗದವರು, ಮುಂತಾದವರಿಗಾಗಿ ಮಂಡಳಿಯು ತನ್ನ ಸ್ವಂತ ಸಂಪನ್ಮೂಲಗಳಿಂದ, ಸರ್ಕಾರದ ಹಾಗೂ ಹುಡ್ಕೊ ಮುಂತಾದ ಸಂಸ್ಥೆಗಳ ನೆರವಿನಿಂದ ಗೃಹ ನಿರ್ಮಾಣ ಚಟುವಟಿಕೆಗಳನ್ನು ಕೈಗೊಳ್ಳುತ್ತಿರುವುದು. ಕೊಡಗು ಜಿಲ್ಲೆಗೆ ಸೀಮಿತವಾದಂತೆ ಮಂಡಳಿಯ ಚಟುವಟಿಕೆಗಳು 1972ರಲ್ಲಿ ಕೊಡಗು ಉಪ ವಿಭಾಗ ಕಚೇರಿಯನ್ನು ತೆರೆಯುವ ಮೂಲಕ ಪ್ರಾರಂಭವಾದವು. ಈ ಕಚೇರಿಯು ಮಂಗಳೂರಿನ ವಲಯ ಕಚೇರಿಯ (1973) ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಕೊಡಗು ಉಪ ವಿಭಾಗ ಕಚೇರಿಯನ್ನು 1988ರಲ್ಲಿ ಮುಚ್ಚಲಾಯಿತು.

ಗೃಹಮಂಡಳಿಯು 1972ರ ಪೂರ್ವದಲ್ಲಿ ಜಿಲ್ಲೆಯಾದ್ಯಂತ ಮಡಿಕೇರಿ, ಸೋಮವಾರಪೇಟೆ, ಕುಶಾಲನಗರ, ಹೆಬ್ಬಾಲೆ, ಪೊಲ್ಲಿಬೆಟ್ಟ, ಸಂಪಾಜೆ, ತಿತಿಮತಿ, ಬಸವನಹಳ್ಳಿ, ಮುಂತಾದ ಸ್ಥಳಗಳನ್ನೊಳಗೊಂಡಂತೆ ಒಟ್ಟು ನಿರ್ಮಿಸಲಾದ ಮನೆಗಳ ಸಂಖ್ಯೆ (24 ಅಧ್ಯಾಪಕರ ವಸತಿಗಳೂ ಸೇರಿ) 107. ಇವುಗಳಲ್ಲಿ 100 ಅಲ್ಪ ಆದಾಯ ವರ್ಗದ ಮನೆಗಳಾಗಿದ್ದರೆ 7 ಮಧ್ಯಮ ಆದಾಯದ ಮನೆಗಳು ಆಗಿದ್ದವು. ಇತ್ತೀಚಿನ ವರ್ಷಗಳಲ್ಲಿ ಹುಡ್ಕೊ ಯೋಜನೆಯನ್ವಯ ಗೃಹ ಮಂಡಳಿಯು ಮಾರ್ಚ್ 1990ರ ಕೊನೆಯವರೆಗೆ ಜಿಲ್ಲೆಯಲ್ಲಿ ನಿರ್ಮಿಸಲಾದ ಒಟ್ಟು ಮನೆಗಳ ಸಂಖ್ಯೆ 285. ಅವುಗಳಲ್ಲಿ 133 ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ, 112 ಕಡಿಮೆ

ಆದಾಯದ ವರ್ಗದವರಿಗೆ, ಮತ್ತು 45 ಮಧ್ಯಮ ಆದಾಯ ವರ್ಗದ ಮನೆಗಳು. ಅವುಗಳ ಹಂಚಿಕೆ ಈ ರೀತಿ ಇರುವುದು ; ಮಡಿಕೇರಿ 110, ಕುಶಾಲನಗರ 124, ಮತ್ತು ಸೋಮವಾರಪೇಟೆ 51. ಈ ಮೇಲಿನ ಸ್ಥಳಗಳ ಕಾಮಗಾರಿಗಳಿಗೆ 30.3.1990ರ ವರೆಗೆ ಮಂಡಳಿಯು ಮಾಡಿದ ವೆಚ್ಚ ಅನುಕ್ರಮವಾಗಿ ರೂ. 40.08 ಲಕ್ಷ, ರೂ. 28.91 ಲಕ್ಷ ಮತ್ತು ರೂ. 19.38 ಲಕ್ಷ ಎಂದು ವರದಿಯಾಗಿದೆ. ಸೋಮವಾರಪೇಟೆಯಲ್ಲಿ ಹುಡ್ಕೊಯೇತರ ಯೋಜನೆಯಲ್ಲಿ ರೂ. 3.20ಲಕ್ಷ ವೆಚ್ಚದಿಂದ ಐದುಮನೆಗಳನ್ನು ಕಟ್ಟಲಾಗಿದೆ.

ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ರಚನೆಯ ಪೂರ್ವದಲ್ಲಿಯೇ ಜಿಲ್ಲೆಯಲ್ಲಿ 1954 ರಿಂದ ಗೃಹನಿರ್ಮಾಣ ಚಟುವಟಿಕೆಗಳು ಸಹಕಾರಿ ವಲಯಗಳಲ್ಲಿ ಮೂಡಿ ಬಂದವು. 1962-63ರ ಅವಧಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ವಸತಿ ಸೌಕರ್ಯ ಕಲ್ಪಿಸಲು ಮೂರು ಸಂಘಗಳು ಮೂಡಿಬಂದವು. ಇಂದು ಜಿಲ್ಲೆಯಲ್ಲಿ ನೋಂದಾಯಿಸಲ್ಪಟ್ಟ ಸಹಕಾರಿ ಗೃಹನಿರ್ಮಾಣ ಸಂಘಗಳ ಸಂಖ್ಯೆ ನಾಲ್ಕು. (ಗೃಹ ನಿರ್ಮಾಣ ಸಹಕಾರ ಸಂಘಗಳ ವಿವರವನ್ನು ಅಧ್ಯಾಯ 6 ಪುಟ 384-385 ನೋಡುವುದು).

ಕೊಡಗು ಜಿಲ್ಲಾ ಗೃಹನಿರ್ಮಾಣ ಸಹಕಾರಿ ಸಂಘವು ಪ್ರಾರಂಭದಿಂದ ಇಲ್ಲಿಯವರೆಗೆ ತನ್ನ ಸದಸ್ಯರಿಗೆ ಸುಮಾರು 110 ಮನೆಗಳ ನಿರ್ಮಾಣಕ್ಕೆ ನೇರ ಸಾಲವನ್ನು ಒದಗಿಸಿರುವುದಲ್ಲದೇ ಸುಮಾರು 900 ಸದಸ್ಯರು ಸಹಕಾರಿ ಮಹಾಮಂಡಲ, ಬೆಂಗಳೂರು, ಈ ಸಂಸ್ಥೆಯ ಮೂಲಕ ಸಾಲ ಪಡೆದು ಮನೆಗಳನ್ನು ನಿರ್ಮಿಸಲು ಸಹಾಯಕವಾಗಿದೆ.

**ಜನತಾ ಮನೆಗಳ ಯೋಜನೆ**

ಇತ್ತೀಚಿನ ದಶಕಗಳಲ್ಲಿ ಸರ್ಕಾರವು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿನ ಮನೆ ಮತ್ತು ನಿವೇಶನ ರಹಿತ ಎಲ್ಲಾ ವರ್ಗಗಳ ಬಡವರನ್ನು ಗುರುತಿಸಿ, ಅವರಿಗೆ ಉಚಿತವಾಗಿ ಮನೆ, ನಿವೇಶನ ಒದಗಿಸುವುದಲ್ಲದೇ, ಕಡಿಮೆ ವೆಚ್ಚದಲ್ಲಿ ಮನೆ ಕಟ್ಟಲು ಸಾಲ, ಸಹಾಯಧನ ಮತ್ತು ಇತರ ಹಣಕಾಸಿನ ನೆರವು ನೀಡುವ ಮೂಲಕ ಸಹಾಯ ಮಾಡುತ್ತಿದೆ. ಇಂತಹ ಯೋಜನೆಗಳಲ್ಲಿ ಹೆಚ್ಚು ಪ್ರಚಲಿತವಾಗಿರುವ ಜನತಾ ಮನೆ ಯೋಜನೆಯೂ ಒಂದು. ಈ ಯೋಜನೆಯನ್ನು ಮೊದಲಿಗೆ 1973-74ರಲ್ಲಿ ಪ್ರಾರಂಭಿಸಲಾಯಿತು. ಕೇಂದ್ರ ಸರ್ಕಾರವೂ ಇತ್ತೀಚೆಗೆ 'ಇಂದಿರಾ ಆವಾಸ್' ಎಂಬ ಯೋಜನೆಯನ್ನು ಸಹ ಯೋಜಿಸಿದೆ. ಜಿಲ್ಲಾ ಪರಿಷತ್‌ಗಳು ರಚನೆಗೊಂಡ ನಂತರ ಗ್ರಾಮೀಣ ವಸತಿ ವ್ಯವಸ್ಥೆಯನ್ನು ಜಿಲ್ಲಾ ಪರಿಷತ್ ಮತ್ತು ಮಂಡಲಗಳಿಗೆ ವಹಿಸಲಾಗಿದೆ.

ನಗರ ಪ್ರದೇಶಗಳಲ್ಲಿ (ಪುರಸಭೆಯ ವ್ಯಾಪ್ತಿಯಲ್ಲಿ) ಭಾಗ್ಯ ಮಂದಿರ ಯೋಜನೆಯ ಅಡಿಯಲ್ಲಿ ಕಡು ಬಡವರಿಗೆ ಮನೆಗಳ ನಿರ್ಮಾಣಕ್ಕೆ, ದುರಸ್ತಿಗೆ ಸರ್ಕಾರವು ಸಹಾಯ ಮಾಡುತ್ತಿದೆ. ಜಿಲ್ಲೆಯಲ್ಲಿನ ಅನೇಕ ಪುರಸಭೆಗಳು ಪೌರಕಾರ್ಮಿಕರಿಗೆ ಮನೆಗಳನ್ನು ಒದಗಿಸಿವೆ.

ಜನತಾ ಮನೆ ಯೋಜನೆಯನ್ವಯ, ಯೋಜನೆಯ ಪ್ರಾರಂಭದಿಂದ 31-3-1989ರ ವರೆಗೆ ನಿರ್ಮಿಸಲಾದ ಒಟ್ಟು ಮನೆಗಳ ಸಂಖ್ಯೆ 18,019. ಅವುಗಳ ತಾಲೂಕುವಾರು ವಿಂಗಡನೆ : ಮಡಿಕೇರಿ 5,419, ಸೋಮವಾರಪೇಟೆ 5,253, ವೀರರಾಜಪೇಟೆ 7,347. ಈ ಯೋಜನೆಯಲ್ಲಿ ಪ್ರಾರಂಭದಿಂದ 31-3-89ರ ವರೆಗೆ ಮಾಡಲಾದ ವೆಚ್ಚ ರೂ. 356.31 ಲಕ್ಷ ಎಂದು ವರದಿಯಾಗಿದೆ. 1987-88 ರಲ್ಲಿ ಮನೆ ನಿವೇಶನ ಪಡೆದ ಗ್ರಾಮೀಣ ಕುಟುಂಬಗಳ ಸಂಖ್ಯೆ 2,475. ಅವುಗಳಲ್ಲಿ ಬಹು ಸಂಖ್ಯೆಯವರು (1,497) ಸೋಮವಾರಪೇಟೆ ತಾಲೂಕಿನವರಾಗಿದ್ದರು. ಅದರ ಮುಂದಿನ ವರ್ಷ ನಿವೇಶನ ಪಡೆದವರ ಸಂಖ್ಯೆ 2,168 ಆಗಿತ್ತು.

1989-90ನೇ ಸಾಲಿಗೆ ಹುಡ್ಕೋ ಯೋಜನೆಯಲ್ಲಿ 767, ವಿಶೇಷ ಘಟಕ ಯೋಜನೆಯಲ್ಲಿ 157 ಮತ್ತು ಗಿರಿಜನ ಉಪಯೋಜನೆಯಲ್ಲಿ 109 ಮನೆಗಳನ್ನು ಪೂರ್ಣಗೊಳಿಸಲಾಯಿತು ಎಂದು ವರದಿಯಾಗಿದೆ.

1990-91ನೇ ಸಾಲಿಗೆ, ವಿಶೇಷ ಘಟಕ ಮತ್ತು ಗಿರಿಜನ ಉಪ ಯೋಜನೆಯಲ್ಲಿ 112 ಮನೆಗಳನ್ನು ನಿರ್ಮಿಸುವ ಗುರಿಯನ್ನು ಹಾಕಿಕೊಳ್ಳಲಾಗಿತ್ತು. ಅದರ ಸಾಧನೆ 52 ಮನೆಗಳ ನಿರ್ಮಾಣ ಎಂದು ವರದಿಯಾಗಿದೆ.

## ನಗರ ಯೋಜನೆ

ಯೋಜಿತ ನಗರ ನಿರ್ಮಾಣದ ಕಲ್ಪನೆಯು ಪುರಾತನವಾದದ್ದು. ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಕ್ರಮಬದ್ಧವಾಗಿ ಹಾಗೂ ವೈಜ್ಞಾನಿಕವಾಗಿ ನಿರ್ಮಿಸುವ ಮತ್ತು ವಿಸ್ತರಿಸುವ ಅಗತ್ಯವನ್ನು ಅದು ಒತ್ತಿ ಹೇಳುತ್ತದೆ.

ರಾಜ್ಯ ಪುನರ್ಘಟನೆಯ ನಂತರದ ವರ್ಷಗಳಲ್ಲಿ ಪ್ರತ್ಯೇಕವಾದ ನಗರ ಯೋಜನಾ ಇಲಾಖೆ ಮತ್ತು ನಗರಾಭಿವೃದ್ಧಿ

ಮಂಡಳಿಗಳನ್ನು ಸ್ಥಾಪಿಸುವ ಮೂಲಕ ಬೆಳೆಯುತ್ತಿರುವ ನಗರಗಳ/ಗ್ರಾಮಗಳ ಅವಶ್ಯಕತೆಗಳನ್ನು ಗಮನಿಸಿ ಅವುಗಳನ್ನು ಕ್ರಮಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ಬೆಳೆಸುವತ್ತ ಹೆಚ್ಚು ಗಮನ ಹರಿಸಲಾಗುತ್ತಿದೆ. 1961ರಲ್ಲಿ ಮೊದಲ ಬಾರಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮವೆಂಬ ಹೆಚ್ಚು ವ್ಯಾಪಕವಾದ ಮತ್ತು ಇಡೀ ರಾಜ್ಯಕ್ಕೆ ಅನ್ವಯವಾಗುವ ಕಾನೂನನ್ನು ರೂಪಿಸಿ ಅದನ್ನು 1965 ಜನವರಿಯಿಂದ ಜಾರಿಗೊಳಿಸಲಾಯಿತು. ಈ ಅಧಿನಿಯಮದ ಮುಖ್ಯ ಉದ್ದೇಶ ಸಂಪೂರ್ಣವಾಗಿ ಪೌರ ಮತ್ತು ಸಾಮಾಜಿಕ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳ ಯೋಜನೆ ಮತ್ತು ಪುನರ್ ಯೋಜನೆಗೆ ಅನುಕೂಲಕರವಾದ ಪರಿಸ್ಥಿತಿಯನ್ನುಂಟು ಮಾಡುವುದು, ನಿಯಂತ್ರಣಕ್ಕೆ ಒಳಪಡದೇ ಭೂಮಿಯನ್ನು ಅಭಿವೃದ್ಧಿಗೊಳಿಸುವುದನ್ನು ಹಾಗೂ ಭೂಮಿಯ ವ್ಯಾಪಾರದಲ್ಲಿ ಲಾಭಕೋರತನವನ್ನು ತಡೆಯುವುದು, ಭೂಮಿಯನ್ನು ಸಮತೋಲನದಿಂದ ಬಳಸುವುದು, ಪರಿಸರದ ರಕ್ಷಣೆ, ಸದ್ಯಕ್ಕಿರುವ ಮನೋಲ್ಲಾಸದ ಸೌಕರ್ಯ ಮತ್ತು ಸೌಲಭ್ಯಗಳನ್ನು ರಕ್ಷಿಸುವುದು ಹಾಗೂ ಸುಧಾರಿಸುವುದು.

1961ರ ಕಾನೂನನ್ನು 1977ರಲ್ಲಿ ಕೊಡಗು ಜಿಲ್ಲೆಗೆ ವಿಸ್ತರಿಸಲಾಯಿತು. ಅದರ ಅನ್ವಯ ಜಿಲ್ಲಾ ಕೇಂದ್ರ ಸ್ಥಳವಾದ ಮಡಿಕೇರಿಗೆ ಸೀಮಿತವಾದಂತೆ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಡಿಕೇರಿನಗರ ಯೋಜನಾ ಪ್ರಾಧಿಕಾರವನ್ನು 29.10.1981ರಲ್ಲಿ ರಚಿಸಲಾಯಿತು. ಈ ಜಿಲ್ಲೆಯಲ್ಲಿ ಮಡಿಕೇರಿ ನಗರವನ್ನು ಹೊರತುಪಡಿಸಿ ಉಳಿದ ಯಾವುದೇ ಪಟ್ಟಣಗಳಿಗೆ 1961ರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ ಅನ್ವಯವಾಗುವುದಿಲ್ಲ. ಮಡಿಕೇರಿ ನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಮಡಿಕೇರಿ ನಗರ ಮತ್ತು ಅದರ ಸುತ್ತಮುತ್ತಲಿನ ಕರ್ಣಂಗೇರಿ, ಮಕ್ಕಂದೂರು, ಹೆಬ್ಬೆಟ್ಟಗೇರಿ, ಮಕ್ಕೇರಿ ಮುಂತಾದ 9 ಹಳ್ಳಿಗಳನ್ನು ಸೇರಿಸಲಾಯಿತು. ಮಡಿಕೇರಿ ನಗರ ಯೋಜನಾ ಪ್ರಾಧಿಕಾರವು 1988ರಲ್ಲಿ ಮಡಿಕೇರಿ ಹೊರವಲಯ ಅಭಿವೃದ್ಧಿ ನಕ್ಷೆಯನ್ನು ತಯಾರಿಸಿ ಅದನ್ನು ಕಾರ್ಯರೂಪಕ್ಕೆ ತರುತ್ತಿದೆ.

ಕರ್ನಾಟಕ ನಗರಗಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1987ರ ಅನ್ವಯ, 1988 ರಲ್ಲಿ ಸರ್ಕಾರವು ಮಡಿಕೇರಿ ನಗರಾಭಿವೃದ್ಧಿ ಮಂಡಳಿಯನ್ನು ರಚಿಸಿದ ನಂತರ ಹಿಂದಿನ ನಗರ ಯೋಜನಾ ಪ್ರಾಧಿಕಾರವು ನಗರಾಭಿವೃದ್ಧಿ ಮಂಡಳಿಯೊಂದಿಗೆ ವಿಲೀನಗೊಂಡಿತು. ಅದರನ್ವಯ ನಗರಾಭಿವೃದ್ಧಿ ಮಂಡಳಿ, ನಗರ ಯೋಜನೆ ಮತ್ತು ಅಭಿವೃದ್ಧಿಯನ್ನು ಕುರಿತಂತೆ ವ್ಯಾಪಕವಾದ ಅಧಿಕಾರ ಹೊಂದಿ ಕಾರ್ಯ ನಿರ್ವಹಿಸುತ್ತಿರುವುದು.

ಜಿಲ್ಲಾ ನಗರ ಯೋಜನಾ ಇಲಾಖೆಯು ಈ ಜಿಲ್ಲೆಯಲ್ಲಿ 1975ರಿಂದ ಮಡಿಕೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮಡಿಕೇರಿ ನಗರವನ್ನು ಹೊರತುಪಡಿಸಿ ಉಳಿದ ಪ್ರದೇಶಗಳ ಮೇಲೆ ತನ್ನ ಕಾರ್ಯವ್ಯಾಪ್ತಿಯನ್ನು ಹೊಂದಿದ್ದು, ಇಲಾಖೆಯು 8 ನಗರಗಳು ಮತ್ತು 28 ಗ್ರಾಮಗಳು ಸೇರಿದಂತೆ ಅಭಿವೃದ್ಧಿ ನಕ್ಷೆಗಳನ್ನು ತಯಾರಿಸಿರುವುದಲ್ಲದೆ ಎರಡು ನಗರ ಬಡಾವಣೆ ಯೋಜನೆಗಳನ್ನು, 46 ನಿವೇಶನ ಸಂಕೀರ್ಣಗಳನ್ನು ಯೋಜಿಸಿರುವುದು. ಮಡಿಕೇರಿ ನಗರದ ಮುಂದಿನ ದಶಕದಲ್ಲಿನ ಭವಿಷ್ಯದ ಬೆಳವಣಿಗೆಯನ್ನು ಕುರಿತಂತೆ ಇಲಾಖೆಯು 2001ನೇ ಇಸವಿಯವರೆಗೆ ಆಗಬಹುದಾದ ವಿವಿಧ ಬೆಳವಣಿಗೆಗಳನ್ನು, ಅದ್ಯತೆಗಳನ್ನು ಗಮನಿಸಿ ಮಡಿಕೇರಿ ಹೊರವಲಯದ ಅಭಿವೃದ್ಧಿ ನಕ್ಷೆಯನ್ನು (ಮಾಸ್ಟರ್ ಪ್ಲ್ಯಾನ್) ತಯಾರಿಸಿದ್ದು, ಅದರ ಅನ್ವಯ ಈ ಶತಮಾನದ ಕೊನೆಯಲ್ಲಿ ನಗರದ ಜನಸಂಖ್ಯೆ 43,000ಕ್ಕೆ ಹೆಚ್ಚಳಗೊಳ್ಳುವ ಸಾಧ್ಯತೆ ಇದ್ದು ಬೆಳೆಯುವ ಜನವಸತಿಗೆ, ವಾಣಿಜ್ಯ ಮತ್ತು ಕೈಗಾರಿಕೆಗಳ ಅವಶ್ಯಕತೆಯನ್ನು ಪೂರೈಸಲು ಸುಮಾರು 892 ಹೆಕ್ಟೇರ್ ಪ್ರದೇಶ ಬೇಕಾಗಬಹುದೆಂಬ ಅಂದಾಜು ಮಾಡಲಾಗಿದೆ.